ಸುತ್ತೂರು ಮಠದ 23ನೆಯ ಜಗದ್ಗುರುಗಳಾಗಿ ಬಂದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಹುಟ್ಟಿದುದು 1916ನೇ ಇಸವಿಯಲ್ಲಿ. ಇವರು ಹುಟ್ಟಿದ ಊರು ಮೈಸೂರು ಜಿಲ್ಲೆ ನಂಜನಗೂಡು ಸಮೀಪ ಕಪಿಲಾನದಿ ತೀರದಲ್ಲಿರುವ ಸುತ್ತೂರು. ಇವರ ತಂದೆಯ ಹೆಸರು ಮಲ್ಲಿಕಾರ್ಜುನ ಸ್ವಾಮಿ ಮತ್ತು ತಾಯಿಯ ಹೆಸರು ಮರಮ್ಮಣಿ ಎಂದು.

ನಾವುಗಳು ಬಹಳ ಅದೃಷ್ಟವಂತರು ಏಕೆಂದರೆ, ಸೊಗಸಾದ ಜೆಎಸ್‌ಎಸ್ ಎಂಬ ಸಂಸ್ಥೆಯ ಈ ಕಾಲೇಜು ನಮಗೆಲ್ಲಾ ವಿದ್ಯಾಭ್ಯಾಸ ನೀಡುತ್ತಿದೆ. ಅಂದಿನ ವಿದ್ಯಾರ್ಥಿಗಳ ಕೊರತೆಯನ್ನು ಶ್ರೀಗಳು ಗಮನಿಸದಿದ್ದರೆ, ಇಂದು ಈ ಎಲ್ಲಾ ಸೌಲಭ್ಯವಿರುವ ಜೆಎಸ್‌ಎಸ್ ಕಾಲೇಜು ನಮಗೆಲ್ಲಾ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡುತ್ತಿರಲಿಲ್ಲ. ಪೂಜ್ಯರು ನಮಗೆಲ್ಲಾ ವಿದ್ಯಾಭ್ಯಾಸವನ್ನು ಕೊಡುವ ಸಲುವಾಗಿಯೇ ಬಂದಂತಹ ಮಹಾನುಭಾವರು.

ವಿದ್ಯಾಪೀಠದ ಸ್ಥಾಪನೆ ಎಂದರೆ ಸುಲಭದ ಮಾತಲ್ಲ. ಏಕೆಂದರೆ ಅದರ ಜವಾಬ್ದಾರಿ ಅತ್ಯಂತ ದೊಡ್ಡದು. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರದವರೆಗೆ, ಉದ್ಯೋಗ ತರಬೇತಿಯಿಂದ ಹಿಡಿದು ತಾಂತ್ರಿಕ ತಜ್ಞತೆಯವರೆಗೆ, ವಿದ್ಯಾರ್ಥಿನಿಲಯದಿಂದ ಹಿಡಿದು ವಸ್ತು ಸಂಗ್ರಹಾಲಯದವರೆಗೆ, ಕೃಷಿಯಿಂದ ಹಿಡಿದು ಹೈನುಗಾರಿಕೆಯವರೆಗೆ, ಕರ್ನಾಟಕದ ಸುತ್ತೂರಿನಿಂದ ಹಿಡಿದು ಅಮೇರಿಕಾದ ಮೆರಿಲ್ಯಾಂಡ್‌ವರೆಗೆ, ಡೆಲ್ಲಿಯಿಂದ ಹಿಡಿದು ದುಬೈವರೆಗೆ ಹೀಗೆ ಹಂತ, ಹಂತವಾಗಿ ಮೇಲಿನ ಮೆಟ್ಟಿಲನ್ನು ಏರಿದ್ದಾರೆ. ಅಂದು ಚಿಕ್ಕದಾಗಿ ಪ್ರಾರಂಭಿಸಿದ ವಿದ್ಯಾರ್ಥಿ ನಿಲಯಗಳ ಯೋಜನೆಯು ಬೃಹದಾಕಾರವಾಗಿ ಬೆಳೆದು 9000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಒದಗಿಸಿದೆ. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದೂರದರ್ಶಿತ್ವದ ದ್ಯೋತಕವಾಗಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಜೊತೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವಾ ಕಾರ್ಯಕ್ರಮ ನಿರ್ವಹಿಸಲು, ಕೆಳಕಂಡ ಮುಖ್ಯ ಸಹಸಂಸ್ಥೆಗಳನ್ನು ನೊಂದಾಯಿಸಲಾಯಿತು.

ಶ್ರೀ ಶಿವರಾತ್ರೀಶ್ವರ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ
ಜೆಎಸ್‌ಎಸ್ ಮೆಡಿಕಲ್ ಸರ್ವೀಸ್ ಟ್ರಸ್ಟ್
ಜೆಎಸ್‌ಎಸ್ ಎಂಡೋಮೆಂಟ್ ಟ್ರಸ್ಟ್
ಜೆಎಸ್‌ಎಸ್ ಸಂಗೀತಾ ಸಭಾ, ಹೀಗೆ ಹಲವಾರು.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಮಹಾವಿದ್ಯಾಪೀಠದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು, ಈ ಎಲ್ಲಾ ಸಂಸ್ಥೆಗಳ ನಿರ್ವಹಣೆ / ಜವಾಬ್ದಾರಿ ವಹಿಸಿಕೊಂಡರು. ಕಳೆದ 30 ವರ್ಷಗಳಲ್ಲಿ ವಿದ್ಯಾಪೀಠವು ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ದಕ್ಷಿಣ ಭಾರತದ ಮಹಾವಿದ್ಯಾಸಂಸ್ಥೆಗಳಲ್ಲಿ ಒಂದಾಗಿ ಬೆಳೆದು ದೇಶದ ಗಮನ ಸೆಳೆದಿರುವುದು ಉಲ್ಲೇಖಾರ್ಹ. ರಾಜ್ಯದಲ್ಲೇ ಅಲ್ಲದೇ ತಮಿಳುನಾಡು, ಉತ್ತರ ಪ್ರದೇಶ (ನೊಯಿಡಾ), ದುಬೈ, ಮಾರಿಷಸ್ ಮತ್ತು ಅಮೆರಿಕಾ ದೇಶಗಳಲ್ಲಿಯೂ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ವಿದ್ಯಾಪೀಠದ ಕಾರ್ಯಕ್ರಮಗಳು ಭಾರತ

ದೇಶದಲ್ಲಿಯೇ ಅಲ್ಲದೆ, ಸಮುದ್ರ ದಾಚೆಗಿನ ರಾಷ್ಟ್ರಗಳಲ್ಲಿಯೂ ಹಬ್ಬಿಕೊಂಡಿವೆ.

ಪೂಜ್ಯ ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೊದಲು ಚಿಕ್ಕದಾಗಿ ಸ್ಥಾಪಿಸಿದ ಈ ಜೆಎಸ್‌ಎಸ್ ಮಹಾವಿದ್ಯಾಪೀಠ ಸಂಸ್ಥೆಯು ಈಗ ಆಕಾಶದೆತ್ತರ ಬೆಳೆದು ನಿಂತಿದೆ. ನನಗೆ ಈ ಸಂಸ್ಥೆಯಲ್ಲಿ ಓದುವ ಪುಣ್ಯದ ಅವಕಾಶ ದೊರೆತಿದೆ. ಜಾತಿ–ಮತ–ಧರ್ಮ ಇಲ್ಲಿ ಇವುಗಳ ಬೇಧವಿಲ್ಲ. ಶ್ರೀಗಳು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದರೂ, ನಮ್ಮ ಎಲ್ಲಾ ಚಟುವಟಿಕೆಗಳಲ್ಲಿಯೂ ಬೆನ್ನೆಲುಬಾಗಿ ಇರುವಂತೆ ನಾನು ಕೋರುತ್ತೇನೆ.

'ನಹಿ ಜ್ಞಾನೇನ ಸದೃಶಂ' ಎಂಬಂತೆ 'ವಿದ್ಯಾದಾಸೋಹವೇ ನಿಜವಾದ ದಾಸೋಹ' ಎಂಬುದು ನಮ್ಮ ಪೂಜ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಧ್ಯೇಯ ಮಂತ್ರವಾಗಿದೆ.

## ಗಾಂಧಿ

ಹೇಳ್ವೆನು ನಾ ಒಂದು ಮಾತ
ಇದ್ದರು ನಮ್ಮಲ್ಲಿ ಒಬ್ಬಾತ
ಅವರ ಹೆಸರೇ ಗಾಂಧಿ ತಾತ

ನಡೆಸಿದರು ಬ್ರಿಟಿಷರ ವಿರುದ್ಧ ಹೋರಾಟ
ನಡೆಯಲಿಲ್ಲ ಇವರ ಮುಂದೆ ಪರಂಗಿಯರ ಆಟ
ಏರಿಸಿದರು ಸ್ವತಂತ್ರ ಭಾರತದ ಭಾವುಟ

ಸ್ವರಾಜ್ಯವೇ ಅವರ ಮೂಲ ಮಂತ್ರ
ಅಹಿಂಸೆಯೇ ಅದನು ಪಡೆಯುವ ತಂತ್ರ
ಮಾಡಿದರು ಚರಕವ ಸ್ವಾವಲಂಬನೆಯ ಯಂತ್ರ

ಸ್ವಾತಂತ್ರವೇ ಅವನ ಉನ್ನತ ಗುರಿ
ಅವರ ಈ ಕೂಗಿನ ಮರ್ಮವ ಅರಿ
ಆಗ ನೀ ಅನುಭವಿಸುವೆ ಆಂತರಿಕ ಸ್ವೇಚ್ಛೆಯ ಸಿರಿ

ಮಾನವ ನಿನಗೇಕೆ ಅತಿಯಾದ ಕಾಮನೆ
ಪಾಲಿಸು ಅವರ ಉತ್ತುಂಗ ಬೋಧನೆ
ಸರಳ ಜೀವನ ಉನ್ನತ ಯೋಚನೆ.

## ಯುಗಾದಿ

ಮುಗಿಲು ಮುಟ್ಟಿತು ಮಿತ್ರನ ತಾಪ
ತತ್ತರಿಸುತ್ತಿದ್ದಾರೆ ಜನರು ಪಾಪ
ತಾಳದಾದೆವು ದಿನಕರನ ಈ ಬೇಗೆ
ವಸಂತನು ಬಾರದಾದನೇಕೆ?

ಎಂದಾಕ್ಷಣ ಕಳೆಯಿತು ಪಾರ್ಥಿವ
ಮೂಡಿತು ಹೊಸತೊಂದು ಜೀವ
ಅದುವೆ ಶಾರ್ವರಿ ಎಂಬ ಹೊಸ ಸಂವತ್ಸರ
ಬಿಂಬಿಸುವ ಚೈತ್ರದ ಹೊಸ ಚಿಗುರ

ತರಲಿ ಈ ಹೊಸ ವರುಷ
ಎಲ್ಲರಲ್ಲೂ ನವೋಲ್ಲಾಸ ಹರುಷ
ಆಗಲಿ ಎಲ್ಲರಿಗೂ ಈ ಯುಗಾದಿ
ಹೊಸ ಬಾಳ್ವೆಯ ದಿಟ್ಟ ಬುನಾದಿ



● ಆರ್. ನಂದಿನಿ
ತೃತೀಯ ಬಿ.ಎ. (ಹೆಚ್.ಇ.ಕೆ.)

# ಬದಲಾವಣೆಯನ್ನು ನಾವು ಸ್ವೀಕರಿಸದಿದ್ದರೆ ಬದಲಾವಣೆ ನಮ್ಮನ್ನು ಬದಲಾಯಿಸುತ್ತದೆ



● ಎಸ್. ಮಹೇಶ್ವರಿ
ತೃತೀಯ ಬಿ.ಕಾಂ.

2019ರ ಡಿಸೆಂಬರ್ ಕೊನೆಯಲ್ಲಿ ಚೀನಾದ ವ್ರೂಹಾನ್‌ನಲ್ಲಿ ತನ್ನ ಹಾವಳಿ ಆರಭಿಸಿದ ಕೊರೋನಾ ಎಂಬ ಹೆಸರಿನ ಕಣ್ಣಿಗೆ ಕಾಣದ ವೈರಾಣು ಜಗತ್ತಿಗೆ ತುಂಬಲಾರದ ನಷ್ಟವನ್ನು ಉಂಟು ಮಾಡಿರುವಂತೆಯೇ ಬದಲಾವಣೆಯನ್ನು ಎಂದಿಗೂ ಬಯಸದವರಿಗೆ ಬದಲಾವಣೆಯೇ ಇವರನ್ನು ಬದಲಾಯಿಸುತ್ತಿದೆ ಎಂಬುದನ್ನು ಅರ್ಥಮಾಡಿಸಿದೆ.

ಕೊರೋನಾ ವೈರಾಣುವಿನಿಂದ ಜನರನ್ನು ರಕ್ಷಿಸಲು, ಆರ್ಥಿಕ ವ್ಯವಸ್ಥೆ ಪಾತಾಳಕ್ಕೆ ಕುಸಿಯುವ ಅರಿವಿದ್ದರೂ "ಜೀವ ಉಳಿದರೆ ಜೀವನ" ಎಂಬುದಕ್ಕೆ ಒತ್ತುಕೊಟ್ಟು ಗೌರವಾನ್ವಿತ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ನಾಲ್ಕು ಬಾರಿ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದ ನಮ್ಮ ಶಾಲಾ, ಕಾಲೇಜುಗಳು ತಿಂಗಳುಗಟ್ಟಲೆ ಮುಚ್ಚಲ್ಪಟ್ಟಾಗ ಸಹಜವಾಗಿಯೇ ವಿದ್ಯಾರ್ಥಿಗಳು ಹಾಗೂ ಪೋಷಕರ ಆತಂಕವನ್ನು ನಿವಾರಿಸುವ ಗುರುತರ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳು ಮತ್ತು ಶಿಕ್ಷಕರ ಮೇಲೆ ಕೂತಾಗ ನಿಜಕ್ಕೂ ಈ ಗುರುತರ ಜವಾಬ್ದಾರಿಯನ್ನು ಶಿಕ್ಷಕರು, ಶಿಕ್ಷಣ ಸಂಸ್ಥೆಗಳು ಹಾಗೂ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ನಿರ್ವಹಿಸಿದ ರೀತಿ ಅಭಿನಂದನಾರ್ಹ.

ಅದರಲ್ಲಿಯೂ ನಮ್ಮ ಕಾಲೇಜಿನ ಅಧ್ಯಾಪಕ ವೃಂದದವರು ಪ್ರಾಚಾರ್ಯರ ಮತ್ತು ಆಡಳಿತ ಮಂಡಳಿಯವರ ಉತ್ತಮ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ಸಮೂಹಕ್ಕೆ ಶೈಕ್ಷಣಿಕವಾಗಿ ಯಾವುದೇ ರೀತಿಯ ಕೊರತೆಯುಂಟಾಗದಂತೆ ಆನ್‌ಲೈನ್ ಮೂಲಕ ಬೋಧನಾಕಾರ್ಯ ನಿರ್ವಹಿಸುತ್ತಿದ್ದ ಪರಿ, ಕೆಲವೊಂದು ವಿದ್ಯಾರ್ಥಿಗಳಿಗೆ ನೆಟ್‌ವರ್ಕ್ ಸಮಸ್ಯೆಯಿದ್ದುದನ್ನು ಅರಿತು ಪರ್ಯಾಯವಾಗಿ ಬೋದನೆಗಳ ಆಡಿಯೋ ಮತ್ತು ವೀಡಿಯೋ ತುಣುಕುಗಳನ್ನು ವಾಟ್ಸ್ ಆ್ಯಪ್ ಗ್ರೂಪ್‌ಗಳ ಮೂಲಕ ಷೇರ್ ಮಾಡುತ್ತಿದ್ದದ್ದು, ಪಠ್ಯಗಳಿಗೆ ಸಂಬಂಧಿಸಿದ ಬೋಧನಾ ತರಗತಿಗಳು ಇತರೆ – ಮೂಲಗಳಿಂದ ಪಡೆದ ಲಿಂಕ್‌ಗಳನ್ನು ನಮಗೆ ನೀಡುತ್ತಿದ್ದದ್ದು, ಪಿ.ಪಿ.ಟಿ., ಅಸೈನ್‌ಮೆಂಟ್, ಆನ್‌ಲೈನ್ ಸೆಮಿನಾರ್, ಹಳೆಯ ಪ್ರಶ್ನೆ ಪತ್ರಿಕೆಗಳಿಗೆ 'ರೆಸಿಪ್ರೋಕಲ್ ಮ್ಯಾನೇಟ್‌ಮೆಂಟ್ ಸಿಸ್ಟಂ' ಮಾದರಿಯಲ್ಲಿ ಉತ್ತರಿಸಿ ಕೊಡುವುದರ ಮೂಲಕ ನೀಡಿದ ಭೋದನೆಯಂತೂ ತುಂಬಾ ಉಪಯುಕ್ತವಾಗಿತ್ತೆಂದು ತಿಳಿಸಲು ಆನಂದವಾಗುತ್ತದೆ.

ನಾವು ಕಂಡುಕೇಳರಿಯದ ಝೂವ್, ಗೂಗಲ್‌ಮೀಟ್, ಸ್ಕೈಪ್ ಆ್ಯಪ್ ನಂತಹ ಅಪರಿಚಿತ ಅಪ್ಲಿಕೇಶನ್‌ಗಳನ್ನು ಬಳಸಿ ಹಠಾತ್ ಆಗಿ ನಡೆಸಿಕೊಟ್ಟ ಈ ಮಾದರಿಯ ಬದಲಾವಣೆಯು ನಮ್ಮ ಶಿಕ್ಷಣ ವ್ಯವಸ್ಥೆಗೆ ಹೊಸ ಆಯಾಮವನ್ನು, ನವ ಸಾಧ್ಯತೆಯನ್ನು ತೋರಿಸಿಕೊಟ್ಟಂತಾಗಿದೆ. ಇದು ಮುಂದಿನ ಶಿಕ್ಷಣದ ಪರ್ಯಾಯ ಮಾರ್ಗ ಎಂಬುದಾಗಿ ಲಾಕ್‌ಡೌನ್ ಅವಧಿಯಲ್ಲಿ ಸಾಬೀತಾಗಿದೆ.

ಮತ್ತೊಂದು ವಿಷಯವೆಂದರೆ ಆನ್‌ಲೈನ್ ತರಗತಿಯಲ್ಲಿ ಪಾಠದ ಪ್ರಸ್ತುತ ವಿಷಯದ ಬಗ್ಗೆ ಆಳವಾದ ಜ್ಞಾನ, ಅದನ್ನು ಆಕರ್ಷಕವಾಗಿ ವಿದ್ಯಾರ್ಥಿಗಳಿಗೆ ತಲುಪಿಸುವ ಸಾಮರ್ಥ್ಯವಿದ್ದವರು ಮಾತ್ರ ಯಶಸ್ಸು ಕಾಣಬಹುದಾಗಿರುವುದರಿಂದ ವಿದ್ಯಾರ್ಥಿಗಳಾದ ನಮಗೆ ಉತ್ತಮ ಗುಣಮಟ್ಟದ ತರಗತಿಗಳು ಸಿಗುವಂತಾಗಿರುವುದು ನಮಗೆ ದೊರತಿರುವ ಮತ್ತೊಂದು ಅನುಕೂಲವಾಗಿದೆ.

ಎಲ್ಲರಿಗೂ ಸ್ಮಾರ್ಟ್‌ಫೋನ್ ಖರೀದಿಸಲು ಸಾಧ್ಯವಿಲ್ಲದಿರುವುದು, ಎಲ್ಲ ಕಡೆಯೂ ನೆಟ್‌ವರ್ಕ್ ತೊಂದರೆಯಿಲ್ಲದಂತಿರುವುದು. ತುಂಬಾ ಹೆಚ್ಚು ಸಮಯ ಕಿರಿದಾದ ಮೊಬೈಲ್ ಸ್ಕ್ರೀನ್‌ಗೆ ದೃಷ್ಟಿ ಹಾಯಿಸುವುದರಿಂದ ಉಂಟಾಗಬಹುದಾದ ಕಣ್ಣಿನ ತೊಂದರೆ, ಮುಂತಾದ ತೊಂದರೆಗಳಿಗೆ ಶಾಶ್ವತ ಪರಿಹಾರವೇನಾದರೂ ಇದ್ದಲ್ಲಿ ಈ ಆನ್‌ಲೈನ್ ಶಿಕ್ಷಣವನ್ನು ಪರ್ಯಾಯವಾಗಿ ಬಳಸಬಹುದಾದರೂ ಇದು ನಮ್ಮ ಸಂಪ್ರದಾಯ ಶಾಲಾ ತರಗತಿಯ ಬೋಧನೆಗೆ ಪೂರಕವಾಗಬೇಕೇ ಹೊರತು ಪರ್ಯಾಯವಾಗದಿರಲಿ ಎಂಬುದು ನನ್ನ ಆಶಯ.

# ಐಕ್ಯತೆ ಸಾರುವ ಶಿವಶರಣ ಹರಳಯ್ಯ



● ವಿ. ರಂಜಿತ
ತೃತೀಯ ಬಿ.ಎ. (ಹೆಚ್.ಇ.ಕೆ.)

ಕೊಳ್ಳೇಗಾಲ ತಾಲ್ಲೋಕು ರೇಷ್ಮೆ ನಗರಿ, ಪ್ರಮುಖ ವ್ಯಾಪಾರಿ ತಾಣ ಎಂಬ ಖ್ಯಾತಿ. ಮಾಟಮಂತ್ರ ಎಂಬ ಹಣೆಪಟ್ಟಿಯ ಕುಖ್ಯಾತಿಗೂ ಈ ಹಿಂದೆ ಒಳಗಾಗಿತ್ತು. ಪ್ರಸ್ತುತ ಪ್ರವಾಸಿಗರ ಸ್ವರ್ಗ ಎಂಬ ಪ್ರಶಂಸೆಗೂ ಭಾಜನ ವಾಗಿದೆ. ಕೊಳ್ಳೇಗಾಲದಲ್ಲಿ ತಮ್ಮದೆ ಭಾಷೆಗಳನ್ನಾಡುವ ತೆಲುಗು, ತಮಿಳು ಹಾಗೂ ಕೊಳ್ಳೇಗಾಲ ಸುತ್ತಮುತ್ತಲಿನ ಜಾಗೇರಿ, ದಿನ್ನಳ್ಳಿ ಸೇರಿದಂತೆ ಹಲವೆಡೆ ಬಂಜಾರ ಭಾಷೆಗಳನ್ನು ಮಾತನಾಡುವ ಲಂಬಾಣಿ ಸಮುದಾಯ ಸಹ ವಾಸವಿದ್ದಾರೆ. ಕೊಳ್ಳೇಗಾಲ ಹಾಗೂ ಹನೂರು ಭಾಗಗಳಲ್ಲಿ ಮಲೆಮಹದೇಶ್ವರ ದೇವಸ್ಥಾನ, ಹೊಗ್ಗೆನಕಲ್ ಜಲಪಾತದ ನಯನಮನೋಹರ ನೋಟ, ಭರಚುಕ್ಕಿ ಜಲಪಾತದ ವಿಹಂಗಮ ತಾಣ. ಮಧ್ಯರಂಗನಾಥ ಸ್ವಾಮಿ, ಪ್ರಸನ್ನ ಮೀನಾಕ್ಷಿ ದೇಗುಲ, ಶಿವನಸಮುದ್ರ ಮಾರಮ್ಮ, ಮುಸ್ಲಿಂರ ಪವಿತ್ರ ಸ್ಥಳ ದರ್ಗಾ, ದುಮ್ಮಿಕ್ಕಿ ಹರಿಯುವ ಗಗನಚುಕ್ಕಿ ಜಲಪಾತ, ಪ್ರವಾಸಿಗರಿಗೆ ಸವಾಲು ಎಂದೆ ಕರೆಯಲ್ಪಡುವ ಪವಿತ್ರ ಸ್ಥಳ ನಾಗಮಲೆ, ಇತಿಹಾಸ ಪ್ರಸಿದ್ಧ ಹರಳಯ್ಯ ಗದ್ದುಗೆ, ಮಹದೇಶ್ವರರು ಮಂಡಿಯೂರಿದ್ದ ಮರಡಿಗುಡ್ಡ, ಸುಪ್ರಸಿದ್ದ ಚಿಕ್ಕಲ್ಲೂರು ಶ್ರೀಕ್ಷೇತ್ರ, ಒಡೆಯರಪಾಳ್ಯ ಟಿಬೇಟ್ ಕ್ಯಾಂಪ್, ಕುಣಗಳ್ಳಿಯ ಗವಿಸಿದ್ಧೇಶ್ವರ ಬೆಟ್ಟ. ಹೀಗೆ ಹಲವು ವೈವಿಧ್ಯ ತಾಣಗಳನ್ನು ಒಳಗೊಂಡಿರುವ ಕೊಳ್ಳೇಗಾಲ ತಾಲ್ಲೂಕು ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಗಿದೆ.

ಶರಣರ ತತ್ವಗಳು ಹಾಗೂ ಅವರ ನಡೆ – ನುಡಿಗಳಲ್ಲಿ ಇಂದಿಗೂ ಜನತೆ ಅಪಾರ ಗೌರವವನ್ನು ಇರಿಸಿಕೊಂಡಿದ್ದಾರೆ. ಅವರ ಆಚಾರ–ವಿಚಾರಧಾರೆಗಳು ಇಂದಿಗೂ ಪ್ರಸ್ತುತವಾಗಿವೆ. ಎಂಬುದಕ್ಕೆ 'ಶಿವಶರಣ ಹರಳಯ್ಯ'ನವರ ಗದ್ದುಗೆ ಸಾಕ್ಷಿಯಾಗಿದೆ. ಕೊಳ್ಳೇಗಾಲದಿಂದ 3 ಕಿಲೋ ಮೀಟರ್ ಅಣತಿ ದೂರದಲ್ಲಿರುವ ಹರಳೆ ಗ್ರಾಮದ ಹೊರವಲಯದಲ್ಲಿ ಶರಣ ಹರಳಯ್ಯನವರ ಗದ್ದುಗೆ ಇದ್ದು, ಇದು ಪ್ರಸಿದ್ಧ ಪುಣ್ಯಸ್ಥಳವಾಗುವುದರ ಜೊತೆ ಜೊತೆಗೆ ಹರಳೆ ಗ್ರಾಮಸ್ಥರು ಅಪಾರ ಭಕ್ತಿ, ನಂಬಿಕೆ ಇರಿಸಿಕೊಂಡು ಪೂಜಿಸುವ ಪುಣ್ಯಸ್ಥಳವಾಗಿದೆ.

ಒಂದು ಸಾವಿರದಷ್ಟು ಜನಸಂಖ್ಯೆ ಹೊಂದಿರುವ ಪುಟ್ಟಹಳ್ಳಿ ಹರಳೆ ಗ್ರಾಮದ ಗ್ರಾಮಸ್ಥರಿಗೆ ಶರಣ ಹರಳಯ್ಯನ ಗದ್ದುಗೆ ಎಂದರೆ ಅಷ್ಟೆ ನಂಬಿಕೆ, ಅಷ್ಟೆ ಭಯ, ಭಕ್ತಿಯೂ ಇದೆ. ಗ್ರಾಮದ ಯಾವುದೇ ಪಂಚಾಯ್ತಿಗಳು ಇಲ್ಲಿ ನಡೆಯುತ್ತಿದ್ದು, ಪಂಚಾಯ್ತಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕು. ಇಲ್ಲಿ ಯಾವುದೇ ಕಾರಣಕ್ಕೂ ಸುಳ್ಳು ಹೇಳುವಂತಿಲ್ಲ, ಸುಳ್ಳು ಹೇಳಿದರೆ ಅಂತಹವರಿಗೆ ಅಪಾಯ (ತೊಂದರೆ) ಕಟ್ಟಿಟ್ಟಬುತ್ತಿ ಎಂಬ ಪ್ರತೀತಿ ಸಹಾ ಇದೆ. ಹರಳಯ್ಯನವರು ಮಹಾನ್ ಮಾನವತಾವಾದಿ ಬಸವಣ್ಣನವರ ಅನುಯಾಯಿಗಳು. 12ನೇ ಶತಮಾನದಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಹರಳಯ್ಯನವರು ಇಲ್ಲಿ ಐಕ್ಯವಾದರು.

---

"ಗ್ರಂಥವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" – ***ಸಿಸಿರೋ***

"ಬಡವರ ಅಭ್ಯುದಯಕ್ಕೆ ನೆರವಾಗದ ಶಿಕ್ಷಣಕ್ಕೆ ಅರ್ಥವಿಲ್ಲ" – ***ಡಾ| ಅಂಬೇಡ್ಕರ್***

"ಪುಸ್ತಕ ಓದುವ ಹವ್ಯಾಸವಿರುವವ ಎಲ್ಲಿ ಹೋದರು ಸುಖದಿಂದ ಇರಬಲ್ಲ" – ***ಗಾಂಧೀಜಿ***

"ಮಗುವಿನಲ್ಲಿ ಸಂತೋಷ ಹಾಗೂ ಶೀಲವೃದ್ಧಿಸುವಂತೆ ಮಾಡುವುದೇ ಶಿಕ್ಷಣ" – ***ಅರವಿಂದಘೋಷ್***

## ಶಿಕ್ಷಕ



● ಡಿ. ಮಮತ
ತೃತೀಯ ಬಿ.ಎ. (ಹೆಚ್.ಇ.ಕೆ.)

ಮುಂಜಾನೆ ಎದ್ದು ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ, ರಾಷ್ಟ್ರ ದೇವೋಭವ ಎಂಬುದಾಗಿ ಪ್ರಾರ್ಥನೆಯನ್ನು ಸಲ್ಲಿಸುತ್ತೇವೆ. ನಾವು ಇಲ್ಲಿ ಪ್ರಥಮವಾಗಿ ತಾಯಿಯನ್ನು, ದ್ವಿತೀಯವಾಗಿ ತಂದೆಯನ್ನು ನಮಸ್ಕರಿಸಿ ಅನಂತರ ನಾವು ಗುರುಗಳಿಗೆ ತೃತೀಯ ಸ್ಥಾನವನ್ನು ಕೊಟ್ಟು ಪ್ರಾರ್ಥಿಸುತ್ತೇವೆ.

ಇಲ್ಲಿ ಶಿಕ್ಷಕ ಎಂದರೆ ಶಿ ಎಂದರೆ ಶಿಕ್ಷಿಸಿ, ಕ್ಷ ಎಂದರೆ ಕ್ಷಮಿಸಿ, ಕ ಎಂದರೆ ಕಾಪಾಡುವವರು ಎಂದು ಅರ್ಥ. ಶಿಕ್ಷೆಯ್ನನು ನೀಡಿ ಕ್ಷಮಿಸುವ ಹಾಗೂ ಕಾಪಾಡುವ ಗುಣವನ್ನು ಹೊಂದಿರುವಂತಹ ಗುರುಗಳನ್ನು ನಾವು ಈ ರೀತಿ ಪ್ರಾರ್ಥಿಸುತ್ತೇವೆ.

ಗುರು ಬ್ರಹ್ಮಾ ಗುರುರ್ವಿಷ್ಣುಃ ಗುರುದೇವೋ ಮಹೇಶ್ವರಃ
ಗುರುಃ ಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ

ಮೇಲಿನ ವೇದದ ಸಾಲುಗಳು ಭಾರತೀಯ ಪರಂಪರೆ ಗುರುವಿಗಿರುವ ಸ್ಥಾನವನ್ನು ಸಂಕೇತಿಸುತ್ತದೆ. ನಾವು ಬ್ರಹ್ಮನನ್ನು ಸೃಷ್ಟಿಕರ್ತನೆಂದು, ವಿಷ್ಣುವನ್ನು ಜ್ಞಾನದಾತನೆಂದು, ಮಹೇಶ್ವರನನ್ನು ಲಯಕರ್ತನೆಂದು ಕರೆಯುತ್ತೇವೆ. ಅದೇ ರೀತಿ ಗುರುವು ಬ್ರಹ್ಮ, ಮಹೇಶ್ವರ, ವಿಷ್ಣುವಿನ ಗುಣಗಳನ್ನು ಹೊಂದಿರುವವರಾಗಿದ್ದು, ವಿದ್ಯಾರ್ಥಿಗಳಿಗೆ ಗುರು ತಮ್ಮ ಸಂಪೂರ್ಣವಾದ ಜ್ಞಾನವನ್ನು ದಾನ ಮಾಡುತ್ತಾರೆ. ಆದ್ದರಿಂದ ನಾವು ಗುರುವನ್ನು "ತಸ್ಮೈಶ್ರೀ ಗುರುವೇ ನಮಃ" ಎಂದು ಹೇಳುವುದರ ಮೂಲಕ ನಮಸ್ಕರಿಸುತ್ತೇವೆ.

"ವರ್ಣ ಮಾತ್ರಂ ಕಲಿಸಿದಾತಂ ಗುರು" ಇಲ್ಲಿ ನಾವು ಶಾಲೆಗೆ ಸೇರುವ ಮೊದಲು ಒಂದು ಕಲ್ಲು ಬಂಡೆಯಾಗಿರುತ್ತೇವೆ. ಅದಕ್ಕೆ ಶಿಲ್ಪಿಯು ತನ್ನ ಅಮೋಘವಾದ ಕೆತ್ತನೆಯ ಮೂಲಕ ಒಂದು ಆಕಾರವನ್ನು ನೀಡಿ ಅದು ಪೂಜ್ಯ ಸ್ಥಾನವನ್ನು ಮತ್ತು ನೋಡುವವರ ಕಣ್ಣಿಗೆ ಆಕರ್ಷಕವಾಗಿ ಕಾಣುವಂತೆ ಮಾಡುತ್ತಾನೆ. ಅದೇ ರೀತಿ ಗುರುಗಳು ನಮಗೆ ಅಂದರೆ ಜಡವಾಗಿರುವವರಿಗೆ ವರ್ಣಮಾಲೆಯನ್ನು ಕಲಿಸುವ ಮೂಲಕ ನಮ್ಮನ್ನು ಉನ್ನತ ಮಟ್ಟಕ್ಕೆ ತಂದು ನಮ್ಮ ಜೀವನದ ದಾರಿಗೆ ದೀಪದ ಬೆಳಕಿನಂತೆ ಆಗುತ್ತಾರೆ.

ಗುರು ಇಲ್ಲದ ನಮ್ಮ ಬದುಕು ಸೊನ್ನೆಗೆ ಸಮನಾಗಿರುತ್ತದೆ. ಸೊನ್ನೆ ಹಿಂದೆ ಒಂದು ಅಂಕಿ ಇದ್ದರೆ ಅದು ಹೇಗೆ ಹತ್ತಾಗಿ ಬೆಲೆಯನ್ನು ಪಡೆದುಕೊಳ್ಳುತ್ತದೆಯೋ ಅದೇ ರೀತಿ ನಮ್ಮ ಹಿಂದೆ ಗುರು ಮುಂದೆ ಗುರಿ ಇದ್ದರೆ ನಾವು ಪ್ರಖ್ಯಾತಿಯನ್ನು ಪಡೆದು ಸಮಾಜದಲ್ಲಿ ಗೌರವವನ್ನು ಪಡೆಯಬಹುದು.

ಡಾ. ಸರ್ವಪಲ್ಲಿ ರಾಧಾಕೃಷ್ಣನ್‌ರಂತೆ ಉತ್ತಮ ಗುಣ, ತ್ಯಾಗ, ಶಿಸ್ತು ಹೊಂದಿರುವ ವ್ಯಕ್ತಿಯನ್ನು ನಾವು ನೆನಪಿಸಿಕೊಳ್ಳುವುದಕ್ಕಾಗಿ ಅವರ ಹುಟ್ಟಿದ ದಿನವನ್ನು ಶಿಕ್ಷಕರ ದಿನಾಚರಣೆ ಎಂಬುದಾಗಿ ಆಚರಿಸುತ್ತೇವೆ. ಇಂದಿನ ದಿನಗಳಲ್ಲಿ ಗುರುಗಳು ರಾಧಾಕೃಷ್ಣನ್‌ರವರಂತೆ ಭವಿಷ್ಯದ ಪ್ರಜೆಗಳಿಗೆ ಉತ್ತಮ ಶಿಕ್ಷಣವನ್ನು ನೀಡಿ ಅವರನ್ನು ಉತ್ತಮ ದಾರಿಯೆಡೆಗೆ ನಡೆಸುತ್ತಾರೆ. ಅಂತಹ ಶಿಕ್ಷಕರು ಹಿಂದೆಯು ಇದ್ದರು. ಈಗಲೂ ಇದ್ದಾರೆ, ಮುಂದೆಯು ಇರುತ್ತಾರೆ ಎಂಬುದಾಗಿ ಭಾವಿಸಿದ್ದೇನೆ.

# ಕಾಲೇಜಿನ ಹಾದಿ



● ಎನ್. ಗೀತಾ
ತೃತೀಯ ಬಿ.ಎ. (ಹೆಚ್.ಇ.ಕೆ.)

ಅರೆ – ಏನು? ಕಾಲೇಜಿನ ಹಾದಿ ಅಂತಾ, ನಿಮ್ಮ ಕಾಲೇಜಿನ ಹಾದಿನ ನೆನಪಿಸಿಕೊಳ್ಳುತ್ತಿದ್ದೀರಾ, ಹೌದು ಅದೇ ನಿಮ್ಮ ಹಾದಿನ ನಿಮಗೆ ಪರಿಚಯಿಸುವಂತಹ ಒಂದು ಸಣ್ಣ ಪ್ರಯತ್ನ......?..........., ನನ್ನದು.

ನನ್ನ ಅನುಭವನಾ ಚಿಕ್ಕದಾಗಿ ನಿಮ್ಮೊಂದಿಗೆ ಹಂಚಿಕೊಳ್ಳಲು ಇದೊಂದು ಚಿಕ್ಕ ಸೇತುವೆ, ಆ.... ಯಾರಿಗೇನೊ ಗೊತ್ತಿಲ್ಲ..... ಸಾಮಾನ್ಯವಾಗಿ ನನಗೆ ನಮ್ಮನ್ನು ಕಾಲೇಜಿಗೆ ಹೊತ್ತಾಯ್ತು ಎದ್ದೇಳು ಅಂತಾ ಕೂಗಿದ ತಕ್ಷಣ ನನ್ನ ತಲೆಗೆ ಬರುವುದು. ನನ್ನ ಕಾಲೇಜಿನ ಹಾದಿ.

ಮೊದಲು ಅಯ್ಯೋ... ಯಾಕಪ್ಪ ಇಷ್ಟು ಬೇಗನೆ ಬೆಳಕರೀತು ಅನ್ನಿಸುತ್ತಿತ್ತು. ನಂತರ ನನ್ನ ಹಾದಿ ತಟ್ಟನೆ ನೆನಪಾದಾಗ ಒಂದು ಕ್ಷಣ..... ವಾವ್.... ಏನೋ ಒಂಥರಾ ಕಾಣದೆ ಇರುವಂತಹ ಖುಷಿ ಒಂದು ಕ್ಷಣ ಕಣ್ಮುಂದೆ ಬರುತ್ತಿತ್ತು. ಏಕೆಂದರೆ ನನ್ನ ಹಾದಿ ಅಷ್ಟೊಂದು ಸ್ಫೂರ್ತಿಯಾಗಿರುತ್ತಿತ್ತು.

ನನ್ನ ಹಾದಿಯಲ್ಲಿ ನಾನೊಬ್ಬಳೆ ಇರುತ್ತಿರಲಿಲ್ಲ. ನನ್ನ ಕಲ್ಪನೆಯಲ್ಲಿ ನನ್ನ ಹಾದಿ ಬರಿ ಹಾದಿಯಾಗಿರಲಿಲ್ಲ. ಅದೊಂದು ನನ್ನ ಕನಸನ್ನು ನನಸು ಮಾಡುವ ಸೇತುವೆಯಾಗಿತ್ತು. ನನ್ನ ಈ ಸೇತುವೆಯಲ್ಲಿ ಒಬ್ಬರಲ್ಲ ಇಬ್ಬರಲ್ಲ ಹಲವಾರು ಪ್ರಯಾಣಿಕರು ಜೊತೆಯಾಗಿ ಬಂದು, ನನ್ನ ಮುಂದಿನ ನಡೆಗೆ ತುಂಬಾ ವಿಶಿಷ್ಟವಾಗಿ ಪ್ರಭಾವ ಬೀರಿರುವುದು ಸಹ ನಿಜ.

ಹೌದು, ಅವರಿಂದ ನಾನು ಹಲವಾರು ಅನುಭವಗಳನ್ನು ಪಡೆದಿದ್ದುಂಟು. ಕಣ್ಣಾರೆ ಕಂಡಿದ್ದು ಉಂಟು, ಕಲಿತ್ತಿದ್ದು ಉಂಟು, ಖುಷಿ ಪಟ್ಟಿದ್ದು ಉಂಟು, ದುಃಖ ಪಟ್ಟಿದ್ದು ಉಂಟು, ಹಾಗೆ ಬದುಕು ಎಂದರೆ ಹೀಗಿರುತ್ತಾ ಎಂದು ಹೆಮ್ಮೆಪಟ್ಟಿದ್ದು ಉಂಟು, ಹೀಗೂ ಇರುತ್ತಾ ಅಂತ ಅಸಹ್ಯ ಪಟ್ಟಿದ್ದು ಉಂಟು.

ಹೌದು ಜೀವನದ ಹಾದಿಯೇ ಹಾಗೆ ನಮ್ಮ ಹಾದಿಯಲ್ಲಿ ಸಿಗುವ ಪಾತ್ರಾಧಾರಿಗಳೇ ನಮ್ಮ ಜೀವನವನ್ನು ವಿಶ್ಲೇಷಿಸಿ ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆದು ಬಂದ ಹಾದಿಯಲ್ಲಿ ಹೇಗೆ ಪ್ರಭಾವ ಬೀರಿರುತ್ತಾರೆಯೋ ಹಾಗೆ ನಾನು ನನ್ನ ಕಾಲೇಜಿನ ಹಾದಿಯಲ್ಲಿ ಅನುಭವಿಸಿದ್ದುಂಟು.

ನನ್ನ ಕಾಲೇಜಿನ ಹಾದಿಯು. ಕಲ್ಲು–ಮುಳ್ಳು ಇತ್ಯಾದಿಗಳಿಂದ ಕೂಡಿತ್ತು. ಬಹುಶಃ ಎಲ್ಲರ ಹಾದಿಲೂ ಇದು ಸಾಮಾನ್ಯ. ಇಲ್ಲಿ ಕಲ್ಲು ಮುಳ್ಳು ಇತ್ಯಾದಿಗಳೆಂದರೆ ಏನು ಅಂತಾ ಊಹಿಸುವಷ್ಟು ನೀವು ದಡ್ಡರಲ್ಲ ಎಂದು ನಂಬಿದ್ದೇನೆ.

ಒಟ್ಟಾರೆಯಾಗಿ ಹಾದಿನ ಇನ್ನೊಂದು ಹಾದಿ ಜೊತೆ ಕೂಡಿದರೂ, ಕಳೆದರೂ, ಗುಣಿಸಿದರೂ ಭಾಗಿಸಿದರೂ ಅದೂ ಹಾದಿಯಾಗಿಯೇ ಉಳಿಯುತ್ತದೆ. ಕೂಡಿದರೆ ಮಾರ್ಗವಾಗು ತ್ತದೆ. ಕಳೆದರೆ ಕ್ಲಿಷ್ಟವಾಗುತ್ತದೆ. ಗುಣಿಸಿದರೆ ಗೊಂದಲ ವಾಗುತ್ತದೆ. ಭಾಗಿಸಿದರೆ ವಿಭಜವಾಗುತ್ತದೆ.

ಹಾಗಾದರೆ ಇಲ್ಲಿ 'ಹಾದಿ' ಎಂದರೆ ಏನು? ದಾರಿನ... ಖಂಡಿತಾ ಇಲ್ಲ.... ಇನ್ನೊಮ್ಮೆ ಓದಿ ಬಹುಶಃ ಅರಿವಾಗಬಹುದು.... ಅರಿವಾದರೆ ಅರಿಯದಿದ್ದವರಿಗೆ ತಿಳಿಸಿ. ಧನ್ಯವಾದಗಳು..... ಆ ಹೇಳುವುದ್ದನ್ನೇ ಮರೆತರೂ, ನಾನು ನನ್ನ ಕಾಲೇಜನ್ನು ಮರೆತರೂ..... 'ಹಾದಿ'ನ ಮರೆಯೋದಿಲ್ಲ.

## ಆತ್ಮ ವಿಶ್ವಾಸ



● ಎಲ್. ಸೋಮಪ್ರಭ
ತೃತೀಯ ಬಿ.ಎ. (ಹೆಚ್.ಇ.ಕೆ.)

ವ್ಯಕ್ತಿಗೆ ಆತ್ಮವಿಶ್ವಾಸ ತಂದೆ–ತಾಯಿ, ಬಂಧು–ಬಳಗವಿದ್ದಂತೆ, ಗಟ್ಟಿಯಾದ ಮನಸ್ಸು ನಿರ್ದಿಷ್ಟ ಗುರಿಯನ್ನು ಮುಟ್ಟಿಸುತ್ತದೆ. ದಡ ಸೇರಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ರನ್ನನ ಹೆಸರು ಚಿರಸ್ಮರಣೀಯ ವಾದುದು. ಹುಟ್ಟಿದ್ದು ಮುದುವೊಳಲಿನಲ್ಲಿ ಬಳೆಗಾರ ಮನೆತನ, ಕಲಿಯಲು ಯಾರಿಂದಲೂ ಪ್ರೋತ್ಸಾಹವಿರಲಿಲ್ಲ. ರನ್ನನ ಆಸೆಗೆ ಎಲ್ಲರೂ ತಣ್ಣೀರು ಎರಚಿದರು. ಕಲಿಯಬೇಕೆಂಬ ಆತ್ಮವಿಶ್ವಾಸ ಹೊತ್ತು ಬಂಕಾಪುರಕ್ಕೆ ಬಂದರು. ಇದನ್ನು ಪಂಡಿತಪುರಿ ಎಂದು ಕರೆಯುತ್ತಿದ್ದರು. ರನ್ನನ ಬಯಕೆಯನ್ನು ತಿಳಿದು, ಸಾಹಿತ್ಯಾಭ್ಯಾಸ ಮತ್ತು ಕಾವ್ಯರಚನೆಯ ಕಲೆಯನ್ನು ಕಲಿಯಲು ಬಂದ ರನ್ನನಿಗೆ ಎಲ್ಲಾ ಅನುಕೂಲಗಳನ್ನು ಗುರುಗಳು ಮಾಡಿಕೊಟ್ಟರು. ರನ್ನ ಕಾವ್ಯಶಾಸ್ತ್ರಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದ, ರತ್ನತ್ರಯರಲ್ಲಿ ಒಬ್ಬನಾದ, 'ಗದಾಯುದ್ಧ' ಮತ್ತು 'ಅಜಿತ ತೀರ್ಥಂಕರ ಪುರಾಣ ತಿಲಕಂ' ಕೃತಿಗಳನ್ನು ರಚಿಸಿದರು. ಕುವೆಂಪುರವರು 'ರನ್ನ ವರಕವಿ, ಚಿರಕವಿ ಮತ್ತು ಮಹಾಕವಿಯಾಗಿ ನಿಂತಿದ್ದಾನೆ' ಎಂದಿರುವ ಮಾತು ಅರ್ಥಪೂರ್ಣವಾದುದು.

ನಮ್ಮ ವಿದ್ಯಾರ್ಥಿಗಳು ಕಲಿಯಲು ಪಟ್ಟಣಗಳಿಗೆ ಬರುತ್ತಾರೆ. ಇಲ್ಲಿ ಎಲ್ಲಾ ಅನುಕೂಲಗಳು ಇರುತ್ತವೆ. ಬಡ ವಿದ್ಯಾರ್ಥಿಗಳಿಗೆ ಕೆಲವು ತೊಂದರೆಗಳಿರುತ್ತವೆ. ಆದರೆ ಆತ್ಮವಿಶ್ವಾಸವಿದ್ದರೆ ಬೇಕಾದ ವಿದ್ಯೆಯನ್ನು ಕಲಿಯಬಹುದು. ಪಟ್ಟಣದ ಆಕರ್ಷಣೆಗೆ ಒಳಗಾಗಿ ಕೆಲವು ವಿದ್ಯಾರ್ಥಿಗಳು ಓದುವುದನ್ನು ಬಿಟ್ಟು ದುಶ್ಚಟಗಳಿಗೆ ದಾಸರಾಗಿ ತಂದೆ, ತಾಯಿಯರಿಗೆ ಮನೆತನಕ್ಕೆ ಅಗೌರವ ತರುತ್ತಾರೆ. ವಿದ್ಯಾರ್ಥಿ ಜೀವನ ಒಂದು ತಪಸ್ಸು, ಹಗಲಿರುಳು ಕಷ್ಟಪಟ್ಟು ಓದಬೇಕು ಗ್ರಂಥಾಲಯ ಸಹಾಯ, ಗುರುಗಳ ಮಾರ್ಗದರ್ಶನ ಪಡೆಯಬೇಕು. ಹಿಂದೆ ಗುರು, ಮುಂದೆ ಗುರಿಯನ್ನು ಇಟ್ಟುಕೊಂಡು ಆತ್ಮಸಾಕ್ಷಿಯಾಗಿ ಅಭ್ಯಾಸ ಮಾಡಿ, ಕಲಿಕೆಯಲ್ಲಿ ಮುನ್ನಡೆ ಸಾಧಿಸಬೇಕು. ಒಳ್ಳೆಯ ಗೆಳೆಯರ ಸಹವಾಸ ಬಹಳ ಅವಶ್ಯಕ. ಕರ್ತವ್ಯಪ್ರಜ್ಞೆ ಇಲ್ಲದಿದ್ದರೆ ವಿದ್ಯಾರ್ಥಿಗಳ ಜೀವನ ಅಧಃಪತನವಾಗುತ್ತದೆ. ತಮ್ಮ ಭವಿಷ್ಯದ ಬಗ್ಗೆ ಚಿಂತಿಸಬೇಕು.

ವ್ಯಾಪಾರಿಗಳಿಗೆ, ಶಿಕ್ಷಕರಿಗೆ ಸಮಾಜಸೇವಕರಿಗೆ ಆತ್ಮವಿಶ್ವಾಸ ಬಹಳ ಮುಖ್ಯ. ಉದ್ಯಮಗಳನ್ನು ನಡೆಸುವವರಿಗೆ ಆತ್ಮವಿಶ್ವಾಸವಿಲ್ಲದಿದ್ದರೆ, ಪ್ರಗತಿ ಸಾಧಿಸಲಾಗುವುದಿಲ್ಲ. ಶ್ರದ್ಧೆ, ಧೈರ್ಯ, ಸಾಹಸ, ಕಷ್ಟಸಹಿಷ್ಣುತೆ, ಸಹಕಾರ ಪಡೆಯುವುದು, ಸಹಕಾರ ನೀಡುವುದರಿಂದ ಹಿಡಿದ ಕೆಲಸದಲ್ಲಿ ಜಯಗಳಿಸಬಹುದು. ಪ್ರಾರಂಭದಲ್ಲಿ ಪ್ರತಿಯೊಂದು ಕೆಲಸದಲ್ಲೂ ಹಿನ್ನಡೆ ಸ್ವಾಭಾವಿಕ. ದಿನ ಕಳೆದಂತೆ ಮಾಡಿದ ತಪ್ಪನ್ನು ಸರಿಪಡಿಸಿಕೊಂಡು, ಆತ್ಮವಿಶ್ವಾಸದಿಂದ ಹಿಡಿದ ಕೆಲಸದಲ್ಲಿ ಪ್ರಗತಿ ಸಾಧಿಸಬಹುದು. ಆಸೆಯೇ ಜೀವನ, ನಿರಾಶೆಯೇ ಮರಣ, ತೃಪ್ತಿಯೇ ಜೀವನ, ಅತೃಪ್ತಿಯೇ ಮರಣ. ಆತ್ಮವಿಶ್ವಾಸವಿಲ್ಲದ ಬದುಕು ಶೂನ್ಯ.

# ಮಹಿಳಾ ಸಬಲೀಕರಣದಲ್ಲಿ ಮಹಿಳಾ ಮೀಸಲಾತಿ ಪಾತ್ರ



● **ಎನ್. ರಂಜಿತ**
ಪ್ರಥಮ ಬಿ.ಬಿ.ಎ.

ಮಹಿಳೆಯರನ್ನು ಪುರುಷರಷ್ಟೇ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮಹಿಳೆಯರನ್ನು ಶಕ್ತಗೊಳಿಸುವುದನ್ನು ಮಹಿಳಾ ಸಬಲೀಕರಣ ಎನ್ನುವರು. ಮಹಿಳೆಯರನ್ನು ಪುರುಷರ ಸಮಾನವಾಗಿ ನೋಡಬೇಕು. ನಮ್ಮ ಭಾರತ ದೇಶದಲ್ಲಿ ಮಹಿಳೆಯರಿಗೆ ಒಂದು ಪೂಜ್ಯ, ಮಹತ್ವವಾದ ಸ್ಥಾನಮಾನ ಇದೆ. ಆದರೆ ನಿಜ ಜೀವನದಲ್ಲಿ ಸ್ತ್ರೀಯನ್ನು 2ನೇ ದರ್ಜೆಯ ಪ್ರಜೆ ಎಂದು ಪರಿಗಣಿಸಲಾಗಿದೆ. ಆದರೂ ಸ್ತ್ರೀಯರ ಸ್ಥಾನ ಮಾತ್ರ ದೊಡ್ಡದು. ಅವರಿಗೆ ಶಕ್ತಿ ದೇವತೆ ಎಂದು ಪೂಜಿಸಲಾಗಿದೆ.

ಆದರೆ ಸಮಾಜದಲ್ಲಿರುವ ಲಿಂಗ ತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನ ಸರ್ಕಾರದ್ದು ಮಾತ್ರವಲ್ಲ ನಮ್ಮೆಲ್ಲರದೂ ಕೂಡ ಹೌದು. ಸಮಾಜದಲ್ಲಿರುವ ಲಿಂಗ ತಾರತಮ್ಯವನ್ನು ತೊಡದು ಹಾಕಿ, ಮಹಿಳೆಯರನ್ನು ಸಾಮರ್ಥ್ಯದಾಯಕವಾಗಿ ಮಾಡಬೇಕು.

ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಲೆ ಇದೆ. ಅದು ಕುಟುಂಬದ ದೌರ್ಜನ್ಯ, ಭ್ರೂಣಹತ್ಯೆ, ಹೆಣ್ಣುಶಿಶು ಹತ್ಯೆ, ಮೂಢನಂಬಿಕೆ ಹೀಗೆ ಹತ್ತು ಹಲವಾರು ವಿಶೇಷದಿಂದ ಹೆಣ್ಣು ಮಕ್ಕಳ ಸಂಖ್ಯೆ ಕಾಲಕ್ರಮೇಣ ಕುಗ್ಗುತ್ತ ಹೋದಂತೆ ಮುಂದಿನ ಪೀಳಿಗೆಗೆ ಏನಾಗಬಹುದು ಎಂಬ ಭರವಸೆ ನಮ್ಮಲ್ಲಿ ಯಾರಿಗೂ ಇಲ್ಲ. ಹೆಣ್ಣು ಸಂತತಿ ಬಹಳ ಮುಖ್ಯವಾಗಿದೆ.

ಮಹಿಳೆಯರ ಸ್ಥಾನಮಾನ, ಘನತೆ, ಗೌರವ ಹೆಚ್ಚಿಸಿ, ಅವರ ಸಾಮರ್ಥ್ಯದ ಅರಿವನ್ನು ಅವರಿಗೆ ತಿಳಿಸಬೇಕಾಗಿದೆ ಹಾಗಾಗಿ ಮಹಿಳೆಯರನ್ನು ರಾಜಕೀಯವಾಗಿ ಬಲಪಡಿಸಲು ನಮ್ಮ ದೇಶದಲ್ಲಿ ಒಂದು ರಾಜಕೀಯ ಪಕ್ಷ ಆರಂಭವಾಯಿತು. ಈ ಪಕ್ಷದ ಹೆಸರು ಏನೆಂದರೆ "All India Mahila Empowerment Party" (AIMEP)

ಈ ಒಂದು ಪಕ್ಷದ ಅಧ್ಯಕ್ಷೆ ಒಬ್ಬ ಮಹಿಳೆ ಅದು ಮುಸ್ಲಿಂ. ಇವರ ಹೆಸರು "ನೌಹಿರಾ ಶೇಕ್" ಇವರು ಮಹಿಳಾ ಸಬಲೀಕರಣದಲ್ಲಿ ಮಹಿಳಾ ಮೀಸಲಾತಿಯ ಬಗ್ಗೆ ತಿಳಿಸಿ ಮಹಿಳೆಯರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಈ ಪಕ್ಷದ ಚಿಹ್ನೆ 'ವಜ್ರ', ಇದರ ಧ್ಯೇಯ ಭಾರತದ ಒಟ್ಟು ಜನಸಂಖ್ಯೆಯಲ್ಲಿರುವ ಅರ್ಧದಷ್ಟು ಮಹಿಳೆಯರ ಬಾಳಿನಲ್ಲಿ ಬೆಳಕನ್ನು ಮೂಡಿಸುವುದಾಗಿದೆ. ನೌಹಿರಾ ಶೇಕ್‌ರವರು ಈ ದೇಶದಲ್ಲಿ ಅಲ್ಲದೆ ಹೊರದೇಶದಲ್ಲೂ ಗುರುತಿಸಿಕೊಂಡಿದ್ದಾರೆ. ಇವರು "ಹೀರಾ ಕಂಪನಿಯ" ಸಂಸ್ಥಾಪಕರು ಹಾಗೂ CEO. ಈ ಹೀರಾ ಕಂಪನಿಯು ಭಾರತ, ಚೀನಾ, ಕೆನಾಡ ಹೀಗೆ ಅನೇಕ ದೇಶಗಳಲ್ಲಿ ಹಂಚಿಕೆಯಾಗಿದೆ. ಇದರಲ್ಲಿ ಜವಳಿ ಹಾಗೂ ಆಭರಣ ಉದ್ಯಮ ಪ್ರಸಿದ್ಧವಾಗಿದೆ.

AIMEP ಪಕ್ಷದ ಆಶಯವೆಂದರೆ ಸ್ತ್ರೀ ಬದುಕನ್ನು ಇನ್ನು ಉತ್ತಮಗೊಳಿಸುವುದು. ಯಾವುದೇ ಜಾತಿ ಧರ್ಮದ ಭೇದವಿಲ್ಲದೆ ಎಲ್ಲರು ಸಮ ಎಂಬ ಭಾವನೆ ಮೂಡಿಸುವುದು.

1. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಉಚಿತ ಸಾರಿಗೆ ವ್ಯವಸ್ಥೆ.
2. ನೌಕರರಿಗೆ ಮನೆಯ ಹಂಚಿಕೆ
3. ಮಹಿಳೆಯ ಸ್ಥಾನಮಾನ ಅಭಿವೃದ್ಧಿ ಪಡಿಸುವುದು.
4. ಸರ್ಕಾರಿ ಶಾಲೆಯನ್ನು ಹಾಗೂ ಅಲ್ಲಿಯ ಶಿಕ್ಷಣವನ್ನು ಡಿಜಿಟಲೀಕರಣಗೊಳಿಸಿ, ಅಂತರಾಷ್ಟ್ರೀಯ ಶಿಕ್ಷಣ ನೀಡುವುದು.
5. ರಾಜ್ಯದ ಮೂಲೆ ಮೂಲೆಗೂ ಸಾರಿಗೆ– ಸಂಪರ್ಕ ಕಲ್ಪಿಸಿಕೊಡುವುದು.

ಹೀಗೆ ಅನೇಕ ಆಶಯವನ್ನು ಒಳಗೊಂಡಿರುವ ಈ ಪಕ್ಷವು ಮಹಿಳೆಯರಿಗಾಗಿಯೇ ಕಟ್ಟಿರುವ ಪಕ್ಷ. ಇದರ

ಸಂಪೂರ್ಣ ಉಪಯೋಗವನ್ನು ಮಹಿಳೆಯರು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕು. ಮಾರ್ಚ್ 08ರಂದು ಮಹಿಳೆಯರಿಗಾಗಿ ಒಂದು ಸ್ಥಾಯಿ ಸಂಸ್ಥೆಯು ಪ್ರಾರಂಭವಾಯಿತು. ಇದನ್ನು ಈಗ "ಅಂತರಾಷ್ಟ್ರೀಯ ಮಹಿಳಾ ದಿನಚರಣೆ" ಎಂದು ಎಲ್ಲರು ಆಚರಿಸುತಿದ್ದಾರೆ.

ಅಂತರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುತ್ತಿರುವ ಸರ್ಕಾರಕ್ಕೆ ನನ್ನದೊಂದು ಸಲಾಂ. ಇದು ನಿಜಕ್ಕೂ ಒಳ್ಳೆಯದು. ಇದರಿಂದ ಹಳ್ಳಿಯ ಕಡೆ ಇರುವ ತಿಳಿಯದ ಮಹಿಳೆಯರಿಗೂ ಅರಿವು ಮೂಡುತ್ತಿದೆ. ಮಹಿಳಾ ಸಬಲೀಕರಣ ಎಂದರೆ ಇಂದು ಎಲ್ಲರಿಗೂ ಅಕ್ಷರ ಜ್ಞಾನ ನೀಡುವುದಾಗಿದೆ. ಹಳ್ಳಿಯ ಅನಕ್ಷರಸ್ಥ ಜನರಿಗೆ ಕೂಲಿ ಕೆಲಸ ಬಿಟ್ಟರೆ ಬೇರೆ ಏನು ಕೂಡ ಗೊತ್ತಿಲ್ಲ. ನಾನು ಅದನ್ನು ಕಣ್ಣಾರೆ ನೋಡಿದ್ದೇನೆ. ಅದಕ್ಕೆ ಇಂದು 'ಸ್ತ್ರೀ ಶಕ್ತಿ ಸಂಘ', 'ಸ್ವ-ಸಹಾಯ ಗುಂಪು' ಹೀಗೆ ಮಹಿಳೆಯರ ಒಳಿತಿಗಾಗಿ ಪ್ರಾರಂಭವಾಗಿವೆ. ಇದರಿಂದ ಮಹಿಳೆಯರು ಸಾಕಷ್ಟು ಅನುಕೂಲವನ್ನು ಪಡೆದಿದ್ದಾರೆ.

ಉದಾ:- ಒಬ್ಬ ಮಹಿಳೆಗೆ 10 ಲಕ್ಷ ಸಾಲವನ್ನು ನೀಡಿದರೆ ಅವರಿಗೆ ಅದರಲ್ಲೂ 5 ಲಕ್ಷ ಬಡ್ಡಿರಹಿತ ಇನ್ನು ಉಳಿತ 5 ಲಕ್ಷಕ್ಕೆ 4% ವಾರ್ಷಿಕ ಬಡ್ಡಿದರ ನೀಡಲಾಗುತ್ತಿದೆ. ಈ ರೀತಿಯಾಗಿ ಸ್ತ್ರೀ ಶಕ್ತಿ ಸಂಘ ಹಾಗೂ ಸ್ವ-ಸಹಾಯ ಗುಂಪುಗಳು. ಮಹಿಳೆಗೆ ಬಡ್ಡಿದರ ಕಡಿತಗೊಳಿಸಿ ಸ್ತ್ರೀಯು ಆರ್ಥಿಕವಾಗಿ ಮುಂದುವರಿಯಲು ಸಹಾಯ ಮಾಡಿವೆ.

## ವಿಜ್ಞಾನ ವಿಶೇಷ

| | | |
|---|---|---|
| * | ಎರಡು ಮೆದುಳುಗಳಿರುವ ಪ್ರಾಣಿ | – ಡೈನೋಸಾರ್ |
| * | ದಿನಕ್ಕೆ ಅತಿ ಹೆಚ್ಚು ಮೊಟ್ಟೆಗಳನ್ನು ಇಡುವ ಹುಳು | – ದೀಪದ ಹುಳು |
| * | ಮಾನವನನ್ನು ಹೊರತು ಅತಿ ಬುದ್ಧಿವಂತ ಪ್ರಾಣಿ | – ಡಾಲ್ಫಿನ್ |
| * | ಸಮುದ್ರದ ಆಳವನ್ನು ಅಳೆಯುವ ಉಪಕರಣ | – ಫ್ಯಾಥೋಮೀಟರ್ |
| * | ದೂರದ ವಸ್ತುವನ್ನು ನೋಡುವ ಸಾಧನ | – ಬೈನಾಕ್ಯೂಲರ್ |
| * | ಅತಿ ದೊಡ್ಡ ನೀರು ಹಾವು | – ಅನಕೊಂಡಾ |
| * | ದೀರ್ಘಕಾಲ ಬಾಳುವ ಪ್ರಾಣಿ | – ಆಮೆ |
| * | ಶಬ್ದವನ್ನೇ ಮಾಡಲಾರದ ಪ್ರಾಣಿ | – ಜಿರಾಫೆ |
| * | ಪ್ರಪಂಚದಲ್ಲೇ ಅತ್ಯಂತ ದೊಡ್ಡ ಪಕ್ಷಿ | – ಆಸ್ಟ್ರೀಚ್ |
| * | ಅತ್ಯಂತ ಪ್ರಕಾಶಮಾನವಾದ ನಕ್ಷತ್ರ | – ಸೀರಿಯಸ್ |
| * | ಸೂರ್ಯನ ಸುತ್ತ ಅತಿ ವೇಗವಾಗಿ ಸುತ್ತುವ ಗ್ರಹ | – ಬುಧ |
| * | ಅತಿ ವೇಗವಾಗಿ ಬೆಳೆಯುವ ಮರ | – ಬಿದಿರು |
| * | ಮಲೇರಿಯ ಜ್ವರವನ್ನು ತರುವ ಸೊಳ್ಳೆ | – ಅನಾಫಿಲಿಸ್ |
| * | ನಿಂಬೆಯಲ್ಲಿರುವ ಆಮ್ಲದ ಹೆಸರು | – ಸಿಟ್ರಿಕ್ ಆಮ್ಲ |
| * | ಮಾನವನ ದೇಹದಲ್ಲಿ ಹರಡಿರುವ ನರಗಳ ಸಂಖ್ಯೆ | – 72,000 |
| * | ಮನುಷ್ಯನ ದೇಹದಲ್ಲಿ ಸಣ್ಣ ಕರುಳಿನ ಉದ್ದ | – 8 ಮೀ. |
| * | ಭೂಮಿಯಿಂದ ಚಂದ್ರನಿಗಿರುವ ದೂರ | – 2,28,840 ಮೈಲಿಗಳು |
| * | ಭೂಮಿಯಿಂದ ಸೂರ್ಯನಿಗೆ ಇರುವ ದೂರ | – 93 ದಶಲಕ್ಷ ಮೈಲಿ |
| * | ಶಬ್ದದ ವೇಗ ಒಂದು ನಿಮಿಷಕ್ಕೆ | – 20 ಕಿ.ಮೀ. |

## ರಾಷ್ಟ್ರೀಯವಾದಿ ಸ್ವಾಮಿ ವಿವೇಕಾನಂದರು

● ಆರ್. ಸುನೀತ
ತೃತೀಯ ಬಿ.ಎ. (ಹೆಚ್.ಇ.ಪಿ.)

ಯುವಶಕ್ತಿಯ ಪ್ರೇರಣಾಶಕ್ತಿ, ಚೈತನ್ಯದ ಚಿಲುಮೆ ಹಾಗೂ ವಿಶ್ವ ವಿಜೇತರಾದಂತಹ ಸ್ವಾಮಿ ವಿವೇಕಾನಂದರು ಭಾರತ ದೇಶದಾದ್ಯಂತ ಜನಜನಿತರಾಗಿದ್ದಾರೆ. ಆಧುನಿಕ ಭಾರತದ ಶ್ರೇಷ್ಠ ವಿದ್ವಾಂಸರಲ್ಲಿ ಅಥವಾ ಆಧ್ಯಾತ್ಮಿಕರಲ್ಲಿ ಪ್ರಮುಖರು.

ವಿವೇಕಾನಂದರು 1863 ಜನವರಿ 12ರಂದು ಕೊಲ್ಕತ್ತಾದಲ್ಲಿ ಜನಿಸಿದರು. ತಂದೆ – ವಿಶ್ವನಾಥದತ್ತ, ತಾಯಿ –ಭುವನೇಶ್ವರಿ ದೇವಿ. ಇವರ ಪ್ರಾರಂಭದ ಹೆಸರು ನರೇಂದ್ರನಾಥದತ್ತ ಇವರ ಗುರುಗಳು ರಾಮಕೃಷ್ಣ ಪರಮಹಂಸರು.

ದೇಶದ ಬಗ್ಗೆ ತುಂಬಾ ಅಭಿಮಾನವನ್ನು ಹೊಂದಿದ್ದಂತಹ ಇವರು ಪಾಶ್ಚಾತ್ಯ ದೇಶಗಳು ಭಾರತದ ಬಗ್ಗೆ ಹೊಂದಿದ್ದಂತಹ ಕೀಳು ಅಭಿಪ್ರಾಯಗಳನ್ನು ಮಾರ್ಪಡಿಸಿದರು.

ಪಾಶ್ಚಾತ್ಯ ದೇಶಗಳು ಭಾರತವನ್ನು ಆಧ್ಯಾತ್ಯ, ಸಾಮರಸ್ಯ ಹಾಗೂ ಸಮೃದ್ಧ ಸಂಸ್ಕೃತಿಯ ತವರೂರೆಂದು ಬಣ್ಣಿಸಿದವು. ಹಾಗೆಯೇ ವಿವೇಕಾನಂದರು ಭಾರತದ ಪ್ರತಿಷ್ಠೆಯನ್ನು ಉತ್ತುಂಗ ಶಿಖರಕ್ಕೆ ಏರಿಸಿದರು.

1893 ಸಪ್ಟೆಂಬರ್ 11 ರಂದು ಅಮೇರಿಕಾದ ಚಿಕಾಗೋ ನಗರದಲ್ಲಿ ಸರ್ವಧರ್ಮಗಳ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ತಮ್ಮನ್ನು ಪರಿಚಯಿಸಿಕೊಳ್ಳುವಾಗ, 'ತಾನು ಹಿಂದೂ ಧರ್ಮದ ಪ್ರತಿನಿಧಿ' ಎನ್ನಲಿಲ್ಲ. ಅದಕ್ಕೆ ಬದಲಾಗಿ ಎಲ್ಲಾ ಧರ್ಮಗಳ ತಾಯಿಯ ಪರವಾಗಿ ನಾನಿಲ್ಲಿ ನಿಂತಿದ್ದೇನೆ. ಎಲ್ಲಾ ದೇಶಗಳಲ್ಲಿ ಎಲ್ಲಾ ಧರ್ಮಗಳಲ್ಲಿ ಯಾರೂ ಯಾರೂ ಹಿಂಸೆಗೆ ಒಳಗಾದರೋ ಅವರಿಗೆಲ್ಲಾ ಆಶ್ರಯ ನೀಡಿದ ದೇಶಕ್ಕೆ ಸೇರಿದವನು ಎಂಬ ಹೆಮ್ಮೆಯಿಂದ ಎದೆಯುಬ್ಬಿಸಿ ತೋರಿಕೊಂಡರು.

ಮೊದಲ ಭಾಷಣದಲ್ಲಿಯೇ ತನ್ನ 'ಮಾತೃ ದೇಶದ ಬಗ್ಗೆ ಹಾಗೂ ಮಾತೃ ಧರ್ಮ'ದ ಬಗ್ಗೆ ಎಲ್ಲರಿಗಿಂತ ಭಿನ್ನವಾಗಿ ಪ್ರಸ್ತುತ ಪಡಿಸಿದರು.

"ಜಗತ್ತು ಧರ್ಮ ಸಹಿಷ್ಣುತೆಯ ಬಗ್ಗೆ ಮಾತನಾಡುತ್ತಿದ್ದರೆ, ವಿವೇಕಾನಂದರು ಎಲ್ಲರನ್ನೂ ಒಪ್ಪಿಕೊಳ್ಳುವ ಧರ್ಮವನ್ನು ತನ್ನ ಭಾರತ ದೇಶ ಅನುಸರಿಸುತ್ತಿದೆ" ಎಂಬ ಮೂಲ ಸತ್ಯವನ್ನು ಇಡೀ ಜಗತ್ತಿಗೆ ಸಾರಿದರು.

"ಶಕ್ತಿಯೇ ಜೀವನ ದೌರ್ಬಲ್ಯವೇ ಮರಣ."

ವಿವೇಕಾನಂದರು ಭಾರತದ ಯುವಕರಿಗೆ ಸ್ಫೂರ್ತಿದಾಯಕರಾಗಿದ್ದಾರೆ. ರಾಷ್ಟ್ರ ಪ್ರೇಮಿಯಾಗಿದ್ದಂತಹ ಇವರು ಪಾಶ್ಚಾತ್ಯ ದೇಶಗಳಿಗೆ "ಭಾರತದ ತತ್ತ್ವಜ್ಞಾನ, ವೇದಾಂತ, ಯೋಗಗಳನ್ನು ಪ್ರಚಾರ ಮಾಡಿದರು."

"ನಿಮ್ಮ ಗುರಿ ಸದಾ ಯಶಸ್ಸಿನ ಕಡೆಗೆ ನೋಡುತ್ತಿರಲಿ."

ವಿವೇಕಾನಂದರು ತನ್ನ ದೇಶಕ್ಕಾಗಿಯೇ ತನು, ಮನವನ್ನೇ ಅರ್ಪಿಸಿದ್ದಂತಹ ಮಹಾನ್ ದೇಶಪ್ರೇಮಿ.

ರಾಷ್ಟ್ರೀಯವಾದಿಯಾಗಿದ್ದಂತಹ ಭಾರತೀಯ ಜನರಿಗೆ ಅದ್ಭುತ ಶಕ್ತಿಯೂ ನಿನ್ನಲ್ಲೆ ಅಡಗಿದೆ. ಆ ಶ್ರದ್ಧೆಯು ದೇಶಕ್ಕಾಗಿ ಒಳ್ಳೆಯ ಕೆಲಸವನ್ನು ಮಾಡಿಸುತ್ತದೆ.

"ಜಗತ್ತಿನ ಇತಿಹಾಸವು ಆರು ಜನ ಶ್ರದ್ಧಾಳುಗಳ ಮೇಲೆ, ಆರು ಜನ ಶುದ್ಧ ಚಾರಿತ್ರ ಉಳ್ಳವರ ಮೇಲೆ ನಿಂತಿದೆ. ನಮಗೆ ಅವಶ್ಯವಿರುವುದು 3 ಸಾಧನಗಳು ಸಂವೇದನಾಶೀಲ ಹೃದಯ, ಸೃಜನಾತ್ಮಕ ಮಿದುಳು, ಕ್ರಿಯಾಶೀಲವಾದ ಕೈಗಳು. ನಿಮ್ಮನ್ನು ನೀವೆ ಒಂದು ಅದ್ಭುತ ಶಕ್ತಿಯ ಕೇಂದ್ರವಾಗಿಸಿಕೊಳ್ಳಿ. ದೇಶದ ಬಗ್ಗೆ ಮೊದಲು ಅನುಕಂಪವಿರಲಿ, ನಿಮ್ಮ ಮನಸ್ಸು ದ್ವೇಷ, ಅಸೂಯೆ ಭಾವನೆಗಳಿಂದ ಪ್ರತಿಕ್ರಿಯಿಸುತ್ತಿದ್ದರೆ ನಿಮಗೆ ನೀವೇ ಪ್ರಶ್ನೆ ಹಾಕಿಕೊಳ್ಳಿ. ಕಾರಣ ಜಗತ್ತಿನಲ್ಲಿ ಜನರ ದ್ವೇಷ, ಅಸೂಯೆ

ಟನ್‌ಗಟ್ಟಲೆ ಸುರಿಯುತ್ತಿದೆ. ಅದರಿಂದ ಒಳ್ಳೆ ಕೆಲಸಗಳೆಲ್ಲವೂ ಹಾಳುಗೆಡುವುತಿದೆ. 'ನೀವು ಪರಿಶುದ್ಧರಾಗಿದ್ದರೆ, ಧೀರರಾಗಿದ್ದರೆ, ನೀವು ಒಬ್ಬರೇ ಇಡೀ ಜಗತ್ತಿಗೆ ಸರಿಸಾಟಿ" ಎಂಬುದು ಪ್ರತಿಯೊಬ್ಬ ಭಾರತೀಯನಿಗೂ ಹೇಳಿದ ಮಾತು.

"ಏನು ನಡೆಯಿತೋ, ನಡೆಯಿತು ಎಂಬುದನ್ನು ಮರತೆಬಿಡು, ಅದಕ್ಕಾಗಿ ಕೊರಗಬೇಡ ಮತ್ತೆ ಆ ತಪ್ಪು ಆಗದಂತೆ ಎಚ್ಚರ ವಹಿಸು" ಎಂಬುದನ್ನು ತಿಳಿಸುತ್ತಾರೆ.

ವಿವೇಕಾನಂದರು ತನ್ನೆಲ್ಲಾ ಭೋದನೆಗಳು ಹಾಗೂ ತತ್ವಗಳನ್ನು ಯುರೋಪಿನಾದ್ಯಂತ ಪ್ರವಾಸ ಕೈಗೊಂಡು ತಿಳಿಸಿದರು.

"ಆಧಾತ್ಮದ ಬೆಳಕು" ಇದು ಭಾರತ ಜಗತ್ತಿಗೆ ನೀಡಿದ ಕೊಡುಗೆಯಾಗಿರುತ್ತದೆ.

"ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಅಮೃತವಾಣಿಯನ್ನು ಕೂಡ ಹೇಳಿದರು.

"ಬಡವರ ಸೇವೆಯೇ ದೇವರ ಸೇವೆ" ಎಂದು ಭಾರತೀಯರಿಗೆಲ್ಲರಿಗೂ ಮನವರಿಕೆ ಮಾಡಿದವರು. ತನ್ನ ದೇಶವನ್ನು ಎಲ್ಲಿಯೂ ಬಿಡದಂತಹ ಮಹಾನ್ ಪುರುಷ.

ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಪ್ರಬುದ್ಧತೆಯನ್ನು ಹೊಂದಿದ್ದ ಇವರ ತತ್ವಗಳನ್ನು ಜೀವನದಲ್ಲಿ ರೂಢಿಸಿ ಕೊಂಡು ಸಮಾಜಕ್ಕೆ, ದೇಶಕ್ಕೆ ಉತ್ತಮ ಕೊಡುಗೆ ನೀಡಬೇಕಾಗಿದೆ.

ನಮ್ಮ ರಾಷ್ಟ್ರೀಯ ಬಂಧುಗಳ ಆದರ್ಶ, ತ್ಯಾಗ ಮತ್ತು ಸೇವೆ. ಈ 2 ಆದರ್ಶಗಳನ್ನು ದೇಶದಲ್ಲೆಡೆ ತೊಡಗಿಸಿ ಕೊಂಡರೆ ಉಳಿದೆಲ್ಲವೂ ತನಗೆ ತಾನೇ ಸರಿ ಹೋಗುತ್ತವೆ.

ವಿವೇಕಾನಂದರು ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಮಾಡಿದ ಭಾಷಣ ಉಳಿದೆಲ್ಲರನ್ನೂ ಪ್ರಜ್ಞಾವಂತಿಕೆಯ ಸುನಾಮಿಯಲ್ಲಿ ಕೊಚ್ಚಿಕೊಂಡು ಹೋಗುವಂತೆ ಮಾಡಿತು. ಭಾರತವನ್ನು ಮುಂಚೂಣಿ ಸ್ಥಾನಕ್ಕೆ ತಂದು ಬಿಟ್ಟಿತು.

ಸ್ವಾಮಿ ವಿವೇಕಾನಂದರು ನಮ್ಮ ದೇಶದ ಯುವಕರಿಗೆ ಆತ್ಮಶಕ್ತಿಯನ್ನು ತುಂಬಿದರು. ಇವರ ತತ್ವ ಮತ್ತು ಬೋಧನೆಗಳನ್ನು ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಅಳವಡಿಸಿಕೊಂಡರೆ ನೈಜ ಸಾರ್ಥಕತೆಯನ್ನು ಗಳಿಸಿಕೊಳ್ಳ ಬಹುದು ಮತ್ತು ಶಾಂತಿಯನ್ನು ಪಡೆದುಕೊಳ್ಳಬಹುದು.

ರಾಷ್ಟ್ರೀಯುವಾದಿಯಾಗಿದ್ದ ಇವರು ತಮ್ಮ ಜೀವನವನ್ನೆಲ್ಲಾ ದೇಶಕ್ಕಾಗಿ ಮುಡಿಪಾಗಿಟ್ಟಿದ್ದವರು. ತಮ್ಮ 39ನೇ ವರ್ಷಕ್ಕೆ ಮರಣವನ್ನು ಹೊಂದುತ್ತಾರೆ.

ವಿವೇಕಾನಂದರ ಹಿತನುಡಿಗಳು, ಬೋಧನೆಗಳು ಅದ್ಭುತ. ಇವನ್ನು ಜೀವನದಲ್ಲಿ ಅಳವಡಿಸಿಕೊಂಡು ದೇಶಕ್ಕೆ ಉತ್ತಮ ಕೊಡುಗೆ ನೀಡಬೇಕಾಗಿದೆ. ಸದೃಢ ದೇಶವನ್ನು ಕಟ್ಟಲು ಶ್ರಮಿಸಬೇಕಾಗಿದೆ.

"ಅದ್ಭುತ ಶಕ್ತಿಯೂ ನಿನ್ನಲ್ಲೇ ಅಡಗಿದೆ. ಕಣ್ಣನ್ನು ಮುಚ್ಚಿಕೊಂಡು ಕತ್ತಲು ಎಂದರೆ, ಅರ್ಥವಿಲ್ಲ. ನಿಮ್ಮ ಕಣ್ಣನ್ನು ತೆರೆಯಿರಿ ಆಧ್ಯಾತ್ಮದ ಬೆಳಕು ಬೀರುವುದು" ಎಂದು ತಿಳಿಸಿದ್ದಾರೆ.

"ಹಣ, ಸಂಪತ್ತು, ವಿದ್ವತ್ತು, ಕೀರ್ತಿ ಪ್ರಯೋಜನಕ್ಕೆ ಬರುವುದಿಲ್ಲ. ಚಾರಿತ್ರ್ಯವು ಒಳ್ಳೆಯ ದೇಶ ಕಟ್ಟಲು ಸಹಾಯವೆಂದರು."

ಭಾರತದ ಬಡವರ, ದೀನದಲಿತರ ಬಗ್ಗೆ ಹೆಚ್ಚಿನ ಸಹಾನುಭೂತಿಯನ್ನು ಹೊಂದಿದ್ದರು.

ವಿವೇಕಾನಂದರ ರಾಷ್ಟ್ರಪ್ರೇಮವನ್ನು ಪ್ರತಿಯೊಬ್ಬ ಭಾರತೀಯನು ತಿಳಿದುಕೊಂಡು ಅವರಂತೆಯೇ ಜಗತ್ತಿನಲ್ಲಿ ಭಾರತವನ್ನು ಪ್ರತಿನಿಧಿಸಬೇಕು. ಇಂದಿಗೂ ಮರೆಯಲಾಗ ದಂತಹ ಒಳ್ಳೆಯ ಹಿತನುಡಿಗಳನ್ನು ಹೇಳಿದ್ದಾರೆ. ಇವರಂತೆಯೇ ಪ್ರತಿಯೊಬ್ಬರೂ ದೇಶಕ್ಕಾಗಿ ದುಡಿಯಬೇಕೆಂದು ಹೇಳುತ್ತಾ ವಂದಿಸುತ್ತೇನೆ.

**"ನಮ್ಮ ಮನದ ಬಾಗಿಲು ಯಾವಾಗಲೂ ಮುಚ್ಚಿರುತ್ತದೆ. ಆದುದರಿಂದ ಹೊರಗಿನವರಿಗೆ ನಾವು ನಯವಾಗಿ ನಾಗರಿಕರಾಗಿ ಕಾಣುತ್ತೇವೆ." – ತ್ರಿವೇಣಿ**

# ನಿತ್ಯ ಚಿಂತನೆ



● ಎನ್. ಗೀತಾ
ತೃತೀಯ ಬಿ.ಎ. (ಹೆಚ್.ಇ.ಕೆ.)

ಮಾನವನ ಮನಸ್ಸಿಗೆ ಸಂಕಲ್ಪಗಳೇ ಆಹಾರ. ಪ್ರತಿ ದಿನವೂ ನೂತನ ಸಂಕಲ್ಪಗಳನ್ನು ಮಾನವ ಮಾಡಿದರೆ ಅದು ಮನಸ್ಸನ್ನು ಆರೋಗ್ಯಕರವಾಗಿಯೂ, ಉತ್ಸಾಹ ಭರಿತವಾಗಿಯೂ, ಜೀವನದ ಸವಿಯನ್ನನುಭವಿಸಲು ಪೋಷಿತವಾಗಿಯೂ ಹಾಗೂ ಚೈತನ್ಯದಾಯಿನಿಯಾಗಿಯೂ ಇಡುವುದು. ಇದು ಇಂದಿನ ಗೊಂದಲಮಯ ಹಾಗೂ ನಿರಾಶಾದಾಯಕ ಜೀವನಕ್ಕೆ ಅತ್ಯಗತ್ಯವೆನಿಸಿದೆ. ವಾರದ ಪ್ರತಿಯೊಂದು ದಿನಕ್ಕೂ ಇಲ್ಲಿ ಒಂದೊಂದು ವಿಶೇಷವಾದ ಸಂಕಲ್ಪಗಳಿವೆ.

1. ಭಾನುವಾರ – ಆನಂದ
2. ಸೋಮವಾರ – ಶಾಂತಿ
3. ಮಂಗಳವಾರ – ಪ್ರೇಮ
4. ಬುಧವಾರ – ಶಕ್ತಿ
5. ಗುರುವಾರ – ಜ್ಞಾನ
6. ಶುಕ್ರವಾರ – ಪವಿತ್ರತೆ
7. ಶನಿವಾರ – ದಯೆ

ಇವು ಆತ್ಮಕ್ಕೆ ಮನಸ್ಸಿಗೆ ಆನಂದವನ್ನುಂಟು ಮಾಡಲು ಶಿಫಾರಸ್ಸು ಮಾಡಿದ ಪ್ರಥಮ ದರ್ಜೆಯ ಆರೋಗ್ಯಕರ ಆಹಾರ.

1. **ಆನಂದ** :– ಇಂದ್ರಿಯಾತೀತವಾದ ಸುಖವೇ ನಿಜವಾದ ಆನಂದ, ನಗು ಅಥವಾ ಸಂತೋಷಕ್ಕಿಂತಲೂ ಉನ್ನತವಾದದ್ದು. ಆನಂದ ನನಗೆ ಗೊತ್ತಿರುವಂತೆ ಎಲ್ಲಾ ಖುಷಿಗಳಿಗಿಂತಲೂ ಮಿಗಿಲಾದದ್ದು.

2. **ಶಾಂತಿ** :– ನಮ್ಮ ಸುತ್ತಲೂ ನಾವು ಸದಾಕಾಲಕ್ಕೆ ಅಶಾಂತಿಯ ವಾತಾವರಣವನ್ನೇ ನೋಡುತ್ತಿರುವಾಗ ನಾವು ಶಾಂತಿಯ ಬಗ್ಗೆ ಮಾತನಾಡುವುದು ನಿರರ್ಥಕವೆಂದು ಭಾವಿಸಬಹುದು. ಈ ವಾತಾವರಣವೇ ನಮ್ಮನ್ನು ನಮ್ಮದೇ ಆದ ಶಾಂತಿಯ ಮೂಲದಲ್ಲಿ ನೆಲೆಸಲು ಪ್ರೇರೆಪಿಸುತ್ತದೆ.

3. **ಪ್ರೇಮ** :– ಪ್ರೇಮವು ಒಂದು ಮಹಾಶಕ್ತಿ. ಅದು ನಮ್ಮನ್ನು ಗಗನಕ್ಕೇರಿಸಿ ಹಗುರವಾಗಿಯೂ ಉತ್ಸಾಹಿಗಳ ನ್ನಾಗಿಯೂ ಮಾಡಬಲ್ಲದು.

4. **ಶಕ್ತಿ** :– ಜೀವನದಲ್ಲಿ ಎಲ್ಲವನ್ನು ಗೆಲ್ಲಲು ಸಾಧ್ಯವಾಗದಿದ್ದರೂ ಅದರ ಅಂತಿಮ ಧ್ಯೇಯವನ್ನು ಮುಟ್ಟುವ ಮಹಾಕಾಂಕ್ಷೆಯು ನೆರವೇರಬೇಕಾದರೆ ಶಕ್ತಿ ಮಾನವನಿಗೆ ಬೇಕಾಗುತ್ತದೆ.

5. **ಜ್ಞಾನ** :– ಈ ಪ್ರಪಂಚದಲ್ಲಿ ಜೀವನೋಪಾದಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ವಿದ್ಯಾಭ್ಯಾಸದ ಅವಶ್ಯಕತೆಯಿದೆ ಎನ್ನುವುದನ್ನು ಎಲ್ಲರೂ ತಿಳಿಸಿದ್ದಾರೆ. ಆದರೆ ಜೀವನವನ್ನು ನಿಜವಾಗಿ ಜಯಪ್ರದವನ್ನಾಗಿ ಮಾಡಲು ಪ್ರತಿಕ್ಷಣವನ್ನು ಹೊಸ ರೀತಿಯಿಂದ ಅನುಭವಿಸಲು ಪ್ರತಿದಿನವನ್ನು ಆನಂದ ಮಯವಾಗಿ ಕಳೆದು, ಉನ್ನತಿಗೆ ದಾರಿಮಾಡಿಕೊಡಲು, ಚಿರಶಾಂತಿಯನ್ನು ಹೊಂದಲು ಜ್ಞಾನಕ್ಕಿಂತ ಮುಖ್ಯವಾದುದು ಬೇರೊಂದಿಲ್ಲ.

6. **ಪವಿತ್ರತೆ** :– ಪವಿತ್ರತೆಯೇ ನಮ್ಮನ್ನು ಸ್ವತಂತ್ರರನ್ನಾಗಿ ಮಾಡುವುದು. ಪವಿತ್ರತೆಯೇ ನಮಗೆ ಜ್ಞಾನ, ಶಾಂತಿ, ಸಂತೋಷ ಶಕ್ತಿಯನ್ನು ಅರಿಯಲು ಬುದ್ಧಿಯ ಬೀಗ ತೆರೆಯುವ ಕೀಲಿಯಾಗಿದೆ.

7. **ದಯೆ** :– ಪ್ರಪಂಚದಲ್ಲಿ ನಾವು ಏನೇ ತಪ್ಪು ಮಾಡಿದರು, ನಮ್ಮ ಸುತ್ತಲೂ ದಯೆ ತೋರಿಸುವುದಿಲ್ಲ ಎನ್ನುತ್ತೇವೆ. ಆದರೆ ಜೀವನದ ವಿವಿಧ ಸಂದರ್ಭಗಳಲ್ಲಿ ದಯೆ ಸರಿಯಾದ ಅರ್ಥವನ್ನು ತಿಳಿದುಕೊಳ್ಳುವ ಜ್ಞಾನಿಯೂ ಹೌದು.

# ನಿಮ್ಮಲ್ಲೇ ಅಡಗಿದೆ ಗೆಲುವಿನ ಮಂತ್ರ



● ಎಂ. ಶಕ್ತಿಪ್ರಿಯಾ
ಪ್ರಥಮ ಬಿ.ಬಿ.ಎ.

ಜೀವನ ದೇವರು ನೀಡಿರುವ ಅಪರೂಪದ ಉಡುಗೊರೆ. ಅಂತಹ ಜೀವನವನ್ನು ನಕಾರಾತ್ಮಕ ಯೋಚನೆಗಳಿಗೆ ಬಲಿಕೊಡಬಾರದು. ಜೀವನದಲ್ಲಿ ಸಕಾರಾತ್ಮಕತೆ ಎನ್ನುವ ಪದ ಉಲ್ಲಾಸ, ಉತ್ಸಾಹ ತುಂಬಿಸುತ್ತದೆ. ಜೀವನ ಬದುಕಲು ಯೋಗ್ಯ ಎನಿಸುವಂತೆ ರೂಪಿಸುತ್ತದೆ. ಪಾಸಿಟಿವ್ ಎನ್ನುವ ಪದ ಪಲಕುವ ಸಮಯದಲ್ಲಿ ನಮ್ಮ ಸ್ವರದಲ್ಲಿ ದೃಢತೆ ಎದ್ದು ಕಾಣಿಸತ್ತದೆ. ಜೀವನಕ್ಕೆ ನೆಲೆ ಬೇಕು. ಅಲ್ಲಿ ಉತ್ತಮ ಗುಣಗಳು ರೂಪು ಪಡೆದುಕೊಳ್ಳಬೇಕು. ಆಗ ನಮ್ಮ ಜೀವನದ ದಾರಿ ನಿಚ್ಚಳ ಮತ್ತು ಸ್ಪಷ್ಟ ಆಗಿರುತ್ತದೆ. ಆಗ ನಮ್ಮ ಬದುಕು ಅರ್ಥಪೂರ್ಣ, ಪರಿಪೂರ್ಣ ಆಗುತ್ತದೆ. ಪಾಸಿಟಿವ್ ಯೋಚನೆಗಳು ನಮ್ಮ ಜೀವನಕ್ಕೆ ಧೈರ್ಯ, ಛಲ ತುಂಬಿಸುತ್ತವೆ. ಹೀಗೆ ಮನುಷ್ಯ ತನ್ನ ಭವಿಷ್ಯದ ಬಗ್ಗೆ ಕನಸು ಕಾಣುವ ಮನಸ್ಸು ಹೊಂದಲು ಸಹಕರಿಸಿ ಜೀವನ ಸುಂದರ ಮಾಡುತ್ತವೆ.

ಪಾಸಿಟಿವ್ ಎನ್ನುವ ಪದ ನಮ್ಮ ಬದುಕಿನ ಬೆಳಕು ಆಗಬೇಕು. ಆಗಲೇ ಪ್ರಪಂಚ ಕೋರೈಸುವ ಬೆಳಕಿನಲ್ಲಿ ನಲಿಯುತ್ತದೆ. ನೀವು ಮಾತ್ರ ಸಕಾರಾತ್ಮಕ ಆಗಿದ್ದರೆ ಸಾಲದು, ನಿಮ್ಮ ಸುತ್ತಲಿನ ವಾತಾವರಣ ಸಹ ಪಾಸಿಟಿವ್ ಆಗಿರುವಂತೆ ನೋಡಿಕೊಳ್ಳಿ. ಗೆಲುವಿನ ಮಂತ್ರ ಪಾಸಿಟಿವ್ ಯೋಚನೆಗಳಲ್ಲಿ ಅಡಗಿದೆ. ಮನಸ್ಸು ಭರವಸೆಗಳ ಆಕಾಶಬುಟ್ಟಿ ಅಲ್ಲಿ ದೀಪ ಬೆಳಗಲು ಪಾಸಿಟಿವ್ ಯೋಚನೆಗಳು ಬೇಕು ಜೀವನದಲ್ಲಿ ಅತ್ಯಂತ ಸುಂದರ ಕ್ಷಣ ಎಂದರೆ ನಮಗೆ ನಾವು ಸಂತೋಷ, ಗೆಲುವು ಸಂಭ್ರಮದಿಂದ ಇರುವುದು. ದಿನ ನಿತ್ಯ ನಿಮ್ಮ ಬದುಕಿನಲ್ಲಿ ಮಹತ್ತರ ಕ್ಷಣಗಳನ್ನು ಅನುಭವಿಸಬೇಕು ಎನ್ನುವ ಹಂಬಲ ನಿಮ್ಮ ಮನಸ್ಸಿನಲ್ಲಿ ಇರಬೇಕು. ಆಗ ಪ್ರತಿ ಕ್ಷಣವೂ ಸಕಾರಾತ್ಮಕವಾಗಿ ಬದುಕು ಬದಲಾವಣೆ ಹೊಂದುತ್ತದೆ.

ಜೀವನ ಇರುವುದು ಕೇವಲ ಉತ್ತಮ ಸಂಗತಿಗಳನ್ನು ಅನುಭವಿಸುವುದಕ್ಕೆ ಎಂದು ತಿಳಿಯಿರಿ. ಆಗ ನಿಮ್ಮ ಜೀವನ ಸುಂದರವಾಗಿರುತ್ತದೆ.

ಬೇರೆಯವರು ಮಲಗಿದಾಗ ಅಭ್ಯಾಸ ಮಾಡಿರಿ;
ಬೇರೆಯವರು ಹರಟೆ ಹೊಡೆಯುತ್ತಿರುವಾಗ ಕೆಲಸ ಮಾಡಿರಿ;
ಇತರರು ಆಟವಾಡುತ್ತಿರುವಾಗ ನೀವು ಸಿದ್ಧತೆ ಮಾಡಿರಿ;
ಇತರರು ಇಚ್ಛಿಸುತ್ತಿರುವಾಗ ನೀವು ಕನಸು ಕಾಣಿರಿ;
ಇದುವೇ ಯಶಸ್ಸಿನ ನಳಪಾಕವಾಗಿದೆ.
**– ವಿಲಿಯಂ ವಾರ್ಡ್**

# ಡಿಜಿಟಲ್ ಇಂಡಿಯಾ



● ಎಸ್. ಮಾದಲಾಂಬಿಕೆ
ತೃತೀಯ ಬಿ.ಎ. (ಹೆಚ್.ಇ.ಕೆ.)

ಡಿಜಿಟಲ್ ಇಂಡಿಯಾ ಆಧುನೀಕರಣದ ಒಂದು ಸಂಕೇತ. ಇದು ಭಾರತಕ್ಕೆ ವಿಶ್ವದಲ್ಲೇ ಒಂದು ಅತ್ಯುತ್ತಮ ಸ್ಥಾನವನ್ನು ನೀಡುವುದಾಗಿದೆ. 1 ಲಕ್ಷ ಕೋಟಿಯ ಈ ಯೋಜನೆ ಇಡೀ ದೇಶವನ್ನು ಡಿಜಿಟಲೀಕರಣ ಮಾಡಲಿದೆ. ಇದು ಮಹತ್ವಕಾಂಕ್ಷೆಯ ಒಂದು ಯೋಜನೆಯಾಗಿದೆ. ಈ ಯೋಜನೆಯು ಜನರಿಗೆ ತ್ವರಿತ ಸೇವೆಯನ್ನು ಒದಗಿಸುತ್ತದೆ, ಆಡಳಿತವನ್ನು ಚುರುಕುಗೊಳಿಸುತ್ತದೆ. ತಂತ್ರಜ್ಞಾನದ ಮೂಲಕ, ಸೇವೆ ಒದಗಿಸುವುದರ ಮೂಲಕ, ದೇಶದ ಅಭಿವೃದ್ಧಿಗೆ ಸಹಾಯಕವಾಗುತ್ತದೆ.

ಸರ್ಕಾರಿ ಸಂಸ್ಥೆಗಳು, ಖಾಸಗಿ ಸಂಸ್ಥೆಗಳೆಲ್ಲವೂ ಬರೀ ದುಡ್ಡಿನ ಮೇಲೆ ನಿಂತಿವೆ. ವ್ಯವಸ್ಥೆ ಸರಿಯಿಲ್ಲವೋ ಇಲ್ಲ ಸರ್ಕಾರ ಸರಿಯಿಲ್ವೋ, ಜನರೇ ಸರಿ ಇಲ್ವೋ ಗೊತ್ತಿಲ್ಲ. ಇದಕ್ಕೆಲ್ಲ ಪರಿಹಾರ ಇಲ್ಲಿನ ವ್ಯವಸ್ಥೆ ಸರಿಯಾಗಬೇಕು. ಅಂದರೆ ಇದಕ್ಕೆ ಏಕೈಕ ಮಾರ್ಗ ಹಣದ ನಗದು ವರ್ಗಾವಣೆಯನ್ನು ನಿಲ್ಲಿಸೋದು, ಅಂದರೇ ಯಾವುದೇ ವ್ಯವಹಾರವನ್ನು ಅಕೌಂಟ್ ಮೂಲಕ ನಡೆಸಬೇಕು. ಆಗ ಎಲ್ಲ ವ್ಯವಹಾರಗಳು cash lesss ಆಗುತ್ತೆ.

ಭಾರತದಲ್ಲಿ ಹಳ್ಳಿ ಪ್ರದೇಶಿಗರು ಪೇಪರ್ ಕಂತೆಗಳಲ್ಲಿ ತೊಡಗಿದ್ರೆ ನಗರ ಪ್ರದೇಶದ ಜನರು ಪೇಪರ್ ಫ್ರೀ ಆಗಲು ಹೊರಟಿದ್ದಾರೆ. ಈ ಎರಡೂ ಪ್ರದೇಶಗಳನ್ನು ಡಿಜಿಟಲ್ ಪ್ಲಾಟ್ ಫಾರಂ ಮೇಲೆ ಸೇರಿಸೋಣ, ಇದರಿಂದ ಸರ್ಕಾರ ಆನ್‌ಲೈನ್‌ಲೀರುತ್ತೆ, ಜನರು ಆನ್‌ಲೈನ್‌ಲಿರುತ್ತಾರೆ. ಇದರಿಂದ ಏನು ಉಪಯೋಗಗಳು ಅಂತಾ ನೋಡಾದಾದ್ರೆ.

* ಓದು, ಮನೆ–ಮಠ ಬಿಟ್ಟು ಸರತಿ ಸಾಲಿನಲ್ಲಿ ನಿಲ್ಲೋದು ತಪ್ಪುತ್ತದೆ.
* ಇದರಿಂದ ಮಾನಸಿಕ ನೆಮ್ಮದಿ ಸಿಗುತ್ತದೆ.
* ಅನಗತ್ಯ ಇಂಧನದ ಖರ್ಚು ಉಳಿಯುತ್ತದೆ.

ಇವೆಲ್ಲ ಆಗಬೇಕು ಅಂದರೇ ಡಿಜಿಟಲ್ ಇಂಡಿಯಾ ಕಟ್ಟಬೇಕು.

ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಉದ್ದೇಶ ಎಲ್ಲಾ ಭಾರತೀಯ ನಾಗರಿಕ ಶಕ್ತಿಯನ್ನು ಬಲಪಡಿಸ ಬೇಕೆಂಬುದಾಗಿದೆ. ಇದನ್ನು ಬಲಪಡಿಸುವ ಸಲುವಾಗಿಯೇ ಒಂದು ಶಕ್ತಿ ಇದೆ, ಈ ಶಕ್ತಿಯ ಹೆಸರು JAM.

JAM ಎಂದರೆ J ಜನ್‌ಧನ್
A ಆಧಾರ್
M ಮೊಬೈಲ್

ಈ ಶಕ್ತಿಯ ವಿಸ್ತಾರವಾದ ರೂಪವೇ ಡಿಜಿಟಲ್ ಇಂಡಿಯಾ ಮಿಷನ್. ಈ ಡಿಜಿಟಲ್ ಇಂಡಿಯಾ ಮಿಷನ್ ಅನ್ನು ನಮ್ಮ ದೇಶಕ್ಕೆ ಪರಿಚಯಿಸುವುದು ಅಷ್ಟು ಸುಲಭವಲ್ಲ. ಮೊದಲನೆಯದಾಗಿ ಪ್ರತಿಯೊಬ್ಬ ನಾಗರಿಕನಿಗೂ ಡಿಜಿಟಲ್ ಪರಿಚಯಿಸುವುದು ಮುಖ್ಯ. ಅದು ಸಾಧ್ಯವಾಗುವುದು ಆಧಾರ್‌ಕಾರ್ಡ್‌ನಿಂದ. ಒಂದು ಸಾರಿ ನೊಂದಣಿ ಆದ ಮೇಲೆ ಅದರ ಸಂಪೂರ್ಣ ಅಧಿಕಾರ ಪಡೆಯುವುದು ಡಿಜಿಟಲ್ ಕನೆಕ್ಟಿವಿಟಿಯಿಂದ. ಇದು ಸಾಧ್ಯವಾಗುವುದು ಮೊಬೈಲ್‌ನಿಂದ ಮಾತ್ರ. ಇದರಿಂದ ದೇಶದ ಪ್ರತಿಯೊಬ್ಬರು ಡಿಜಿಟಲ್ ಇಂಡಿಯಕ್ಕೆ ಪ್ರವೇಶಿಸಬಹುದು. ಇದರಿಂದ ಮಧ್ಯವರ್ತಿಗಳ ತಾಪತ್ರಯವಿರುವುದಿಲ್ಲ. ಡಿಜಿಟಲ್ ಪಾವತಿ ಸೇವೆಯ ಉದ್ದೇಶದಲ್ಲಿ 18 ತಿಂಗಳ ನಂತರ ATM ನ್ನು ಮುಚ್ಚಲಾಗುತ್ತದೆ. ಭಾರತದಲ್ಲಿ 90 ಕೋಟಿ Debit Card, 3 ಕೋಟಿ Credit Card ಅನ್ನು 1½ ವರ್ಷದ ನಂತರ ಇವುಗಳು ಕಾರ್ಯನಿರ್ವಹಿಸುವುದನ್ನು ನಿಲ್ಲಿಸುತ್ತದೆ. ನಂತರ ಡಿಜಿಟಲ್ ಪಾವತಿ ಸೇವೆ ಕಾರ್ಯ ನಿರ್ವಹಿಸುತ್ತದೆ. ಎಂದು SBI ಅಧ್ಯಕ್ಷ 'ರಜನೀಶ್ ಕುಮಾರ್' ತಿಳಿಸಿದ್ದಾರೆ. ಡಿಜಿಟಲ್ ಇಂಡಿಯಾ ದೇಶದಲ್ಲಿ ಹೊಸ ಕ್ರಾಂತಿಯನ್ನು ಮಾಡಲಿದೆ.

ನಗದು ರಹಿತ ವ್ಯವಹಾರ ನಡೆಸೋಣ.....
ಲಂಚ, ಮೋಸ, ವಂಚನೆಗೆ ಕಡಿವಾಣ ಹಾಕೋಣ....
ಸುಭದ್ರ ಭಾರತವನ್ನು ನಿರ್ಮಾಣ ಮಾಡೋಣ....

# ಭರತಮಾತೆಯ ಆರ್ತನಾದ



● ಎಲ್. ಸೋಮಪ್ರಭ
ತೃತೀಯ ಬಿ.ಎ. (ಎಚ್.ಇ.ಕೆ.)

ಪುರುಷ ಸ್ವತಂತ್ರತೆಯ ಪರಮಸಿದ್ಧಿಯದೇನು
ಧರಣಿಗನುದಿನದ ರಕ್ತಾಭಿಷೇಚನೆಯೇ
ಕರವಾಲವನು ಪುಷ್ಪಸರವೆಂದು ಸೆಳೆದಾಡೆ
ಪರಿಮಳವ ಸೂಸುವುದೇ ಮಂಕುತಿಮ್ಮ

ಸ್ವಾತಂತ್ರ್ಯದ ಪರಮಸಿದ್ಧಿಯ ನಂತರವೇನು? ಸ್ವಾತಂತ್ರ್ಯದಿಂದ ಸಾಧಿಸಿದ್ದಾದರೂ ಏನು? ಭರತ ಭೂಮಿಯಲ್ಲಿ ಅನುದಿನ ರಕ್ತದ ಅಭಿಷೇಕ ಅಷ್ಟೆ. ಬೀಸುವ ಕತ್ತಿಯನ್ನು ಹೂವು ಎಂದು ಎಳೆದಾಡಿದರೆ ರಕ್ತವಾಗಿರುವ ಕೈಯಿಂದ ಹೂವಿನ ಸುಗಂಧ ಬರುವುದೇ?

ನೂರಾರು ವರ್ಷಗಳ ದಾಸ್ಯದ ನಂತರ ನಾವು ಸ್ವಾತಂತ್ರ್ಯ ದೊರಕಿದ ಸಂಭ್ರಮದಲ್ಲಿ ಸ್ವಾತಂತ್ರ್ಯದ ಉದ್ದೇಶಗಳನ್ನು ಮರೆತ ಪರಿಣಾಮವಾಗಿ ನೂರಾರು ಸಮಸ್ಯೆಗಳು, ತೊಂದರೆಗಳನ್ನು ಎದುರಿಸಿಕೊಂಡು ಭರತ ಮಾತೆ ನನ್ನನ್ನು ರಕ್ಷಿಸಿ ಎಂದು ತನ್ನ ಮಕ್ಕಳನ್ನು ಬೇಡುವ ದುಸ್ಥಿತಿ ಬಂದಿದೆ.

ನಮ್ಮ ಮುಂದೆ ಇರುವ ಕೆಲವು ಸಮಸ್ಯೆಗಳನ್ನು ಅವಲೋಕಿಸೋಣ.

### 1. ವಿದೇಶಿ ಕಂಪನಿಗಳ ಆಕ್ರಮಣ

ಈಸ್ಟ್ ಇಂಡಿಯ ಕಂಪನಿ ನಮ್ಮ ದೇಶಕ್ಕೆ ವ್ಯಾಪಾರಕ್ಕಾಗಿ ಬಂದು ಆ ನಂತರ ಅನೇಕ ವರ್ಷಗಳು ನಮ್ಮ ಮೇಲೆ ದಬ್ಬಾಳಿಕೆ ನಡೆಸಿತು. ಇಂದು ಸುಮಾರು 5000ಕ್ಕೂ ಹೆಚ್ಚು ವಿದೇಶಿ ಕಂಪನಿಗಳು ನಮ್ಮ ದೇಶದಲ್ಲಿ ತಮ್ಮ ಕಾರ್ಯವನ್ನು ವಿಸ್ತರಿಸಿವೆ.

### 2. ವಿದೇಶಿ ಅನುಕರಣೆ

ವಿದೇಶಿ ವಸ್ತುಗಳು ಎಂದೊಡನೆ ನೆನಪಿಗೆ ಬರುವುದು ನಾವು ತೊಡುವ ಬಟ್ಟೆ. ಖಾದಿ ನಮ್ಮ ಸ್ವಾಭಿಮಾನದ ಸಂಕೇತ. ಅದು ನಮ್ಮ ಜನರಿಗೆ ಉದ್ಯೋಗ ನೀಡುವ ಮೂಲವೂ ಹೌದು. ಇಂದು ಎಷ್ಟು ಮಂದಿ ಖಾದಿ ಬಳಸುತ್ತಿದ್ದಾರೆ?

### 3. ಮಾಧ್ಯಮ

ಒಂದು ಬಾರಿ ಸತ್ಯ ಹರಿಶ್ಚಂದ್ರ ನಾಟಕ ನೋಡಿ ಗಾಂಧಿ ಅದರಿಂದ ಪ್ರಭಾವಿತರಾದರು. ಇಂದು ಮಾಧ್ಯಮಗಳು ಕೇವಲ ವಿದೇಶಿ ಸಂಸ್ಕೃತಿ, ಅತ್ಯಾಚಾರ, ಅನಾಚಾರಗಳ ವೈಭವೀಕರಣದಿಂದ ನಮ್ಮ ಜನರ ಮೇಲೆ, ಅದರಲ್ಲಿಯೂ ಯುವ ಜನರ ಮೇಲೆ ಬೀರುತ್ತಿರುವ ಪ್ರಭಾವವಾದರೂ ಎಂತಹುದು?

### 4. ಕೃಷಿಯ ಮೇಲೆ ಆಕ್ರಮಣ

ನಮ್ಮ ಪೂರ್ವಜರು ಆಹಾರದಲ್ಲಿ ಪೌಷ್ಠಿಕಾಂಶವನ್ನು ಹೆಚ್ಚಿಸಲು ಹಣ್ಣು, ತರಕಾರಿ ಬೆಳೆಯಲು ಸಾವಯವ ಗೊಬ್ಬರವನ್ನು ಬಳಸುತ್ತಿದ್ದರು. ಆದರೆ ಇಂದು ರಾಸಾಯನಿಕ ಗೊಬ್ಬರಗಳ ಮತ್ತು ಕೀಟ ನಾಶಕಗಳ ಬಳಕೆಯಿಂದಾಗಿ ವಿವಿಧ ರೀತಿಯ ಅನಾರೋಗ್ಯಗಳಿಗೆ ನಮ್ಮ ಜನ ಬಲಿಯಾಗುತ್ತಿದ್ದಾರೆ.

ಅಮೇರಿಕವೂ ಸೇರಿದಂತೆ ಅನೇಕ ರಾಷ್ಟ್ರಗಳಲ್ಲಿ ನಿಷೇಧಿತ ಎಂಡೊ ಸಲ್ಫಾನ್ ಕೀಟನಾಶಕ ಭಾರತದಲ್ಲಿ ಮುಕ್ತವಾಗಿ ಲಭ್ಯವಿರುವುದು ನಮ್ಮ ಫಲವತ್ತತೆಯನ್ನು ನಾಶಪಡಿಸುವ ಹುನ್ನಾರವೇ ಅಲ್ಲವೇ?

### 5. ಸಂಸ್ಕೃತಿ ಮತ್ತು ಧರ್ಮದ ಮೇಲೆ ಆಕ್ರಮಣ

ಹಿಂದೂ ಧರ್ಮವೇ ಈ ದೇಶದ ಆತ್ಮ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಈ ಧರ್ಮದ ಮೇಲೆ ಆಕ್ರಮಣದಿಂದ ಈ ಸಂಸ್ಕೃತಿಯ ನಾಶದಿಂದ ಮಾತ್ರ ಇವರನ್ನು ಗುಲಾಮಗಿರಿಗೆ ಒಳಪಡಿಸುವುದು ಸಾಧ್ಯ ಎಂಬ ನಂಬಿಕೆ ಬ್ರಿಟಿಷರಿಗಿತ್ತು. ಗೋವನ್ನು ನಾಶಪಡಿಸಿದರೆ ಈ ದೇಶದ ಕೃಷಿ ಸಂಸ್ಕೃತಿಯ ಒಟ್ಟಾರೆ ನಾಶ, ಹಿಂದೂ – ಮುಸ್ಲಿಮರಲ್ಲಿ ಅಶಾಂತಿ ಎರಡೂ

ಆಗುವುದು ಎಂದು ಒಡೆದು ಆಳುವ ನೀತಿ ಅನುಸರಿಸಿದರು.

ನಮ್ಮ ಚರಿತ್ರೆಯನ್ನು ಅವಲೋಕಿಸಿದರೆ ಕೆಲವು ಘಟನೆಗಳು ಈ ಹುನ್ನಾರವನ್ನು ಎತ್ತಿ ಸಾರುತ್ತವೆ. ಮೊಘಲ್ ಸಾಮ್ರಾಟ್ ಬಾಬರ್ ಹಸುವನ್ನು ಕೊಲ್ಲುವವನಿಗೆ ಮರಣ ದಂಡನೆ ವಿಧಿಸುವ ಘೋಷಣೆ ಮಾಡಿದ್ದ. ಔರಂಗಜೇಬ್ ಸಹ ಗೋಹತ್ಯೆ ನಿಷೇಧಿಸಿದ್ದ. ಬಹೂದ್ದೂರ್ ಷಾ ಜಾಫರ್ ಬಕ್ರೀದ್ ಸಮಯದಲ್ಲಿ ಗೋ ಹತ್ಯೆ ನಿಷೇಧಿಸಿದ್ದ.

ರಾಷ್ಟ್ರಪಿತ ಮಹಾತ್ಮಗಾಂಧಿ ನಮಗೆ ಸ್ವರಾಜ್ಯಕ್ಕಿಂತ ಗೋ ರಕ್ಷಣೆ ಮುಖ್ಯ ಎಂದು ಪ್ರತಿಪಾದಿಸುತ್ತಿದ್ದರು. ಈ ರೀತಿ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ರೀತಿಯ ಆಕ್ರಮಣಗಳು ತನ್ನ ಮೇಲೆ ನಡೆಯುತ್ತಿರುವ ಧಾಳಿಯಿಂದ ರಕ್ಷಿಸಿ ಎಂದು ಭರತ ಮಾತೆ ಕೂಗಿಡುತ್ತಿದ್ದಾಳೆ.

ಸ್ವದೇಶಿ ವಸ್ತುಗಳ ಬಳಕೆ ಎಷ್ಟು ಮುಖ್ಯವೋ ವಿದೇಶಿ ವಸ್ತುಗಳನ್ನು ಬಳಸದೆ ಇರುವುದೂ ಅಷ್ಟೇ ಮುಖ್ಯ. ಜೊತೆಗೆ ಬಹಳ ಮುಖ್ಯವಾಗಿ ನಮ್ಮ ಯುವ ಜನತೆಗೆ, ಬೆಳೆಯುತ್ತಿರುವ ಮಕ್ಕಳಿಗೆ, ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯ ನೈತಿಕತೆಯ ಪರಿಚಯವನ್ನು ಕಥೆ ಹೇಳುವುದು, ನೈಜ ಘಟನೆಗಳ ನಿವೇದನೆ, ಅನೇಕ ಮಾದರಿ ವ್ಯಕ್ತಿಗಳ ಪರಿಚಯ, ದೇಶಭಕ್ತಿ ಉತ್ತೇಜಿಸುವ ಕಾರ್ಯಕ್ರಮಗಳು ಮುಂತಾದ ಪ್ರಕಾರಗಳ ಮೂಲಕ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಶ್ಲಾಘನೀಯ ಕೆಲಸ ಮಾಡಿಕೊಡುತ್ತಿರುವವರ ಜೊತೆ ನಮ್ಮ ಕೈಗೂಡಿಸಿ ಈ ಪರಿವಾರವನ್ನು ಬೆಳೆಸೋಣ.

ನೀವು ಹೊರಟಾಗ ಅನೇಕರು ನೀವು ಇಷ್ಟು ಬೇಗ ಹೋಗಬಾರದಿತ್ತು, ಇನ್ನೂ ಇರಬೇಕಿತ್ತು ಎಂದರೆ ನೀವು ಸಾರ್ಥಕ ಜೀವನ ನಡೆಸುತ್ತಿದ್ದೀರಿ ಎಂದರ್ಥ.



## ತಮಿಳುನಾಡಿನಲ್ಲಿ ಕನ್ನಡಿಗರ ಸಮ್ಮಿಲನದ ಜಾತ್ರೆ

● ವಿ. ರಂಜಿತ
ತೃತೀಯ ಬಿ.ಎ. (ಹೆಚ್.ಇ.ಕೆ.)



ಕರ್ನಾಟಕದ ಗಡಿಯಂಚಿನ ತಮಿಳುನಾಡು ವ್ಯಾಪ್ತಿಯ ಗೇರುಮಾಳಂನಲ್ಲಿ ಪ್ರತಿವರ್ಷ ಕನ್ನಡಿಗರೆ ಒಗ್ಗೂಡುವ ಮೂಲಕ ಹಬ್ಬದ ಮಾದರಿಯಲ್ಲಿ ಸಂಭ್ರಮ ಸಡಗರದಿಂದ ಗೇರುಮಾಳಂನ ಜಡರುದ್ರಕುಂಬೇಶ್ವರ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಆಚರಿಸುತ್ತಾರೆ. ತಮಿಳುನಾಡಿನ ಗೇರುಮಾಳಂನಲ್ಲಿ ಜಾತ್ರೆ ಪ್ರತಿವರ್ಷವೂ ಅದ್ಧೂರಿಯಾಗಿಯೇ ಸಾಂಪ್ರದಾಯಿಕ ರೀತಿಯಲ್ಲಿ ಜರುಗುತ್ತಿದೆ. ಇದು ಹೆಸರಿಗೆ ತಮಿಳುನಾಡು ವ್ಯಾಪ್ತಿಯಲ್ಲಿರುವ ಗ್ರಾಮವಾದರೂ ಇಲ್ಲಿ ವಾಸಿಸುವ ಶೇ. 80ರಷ್ಟು ಕನ್ನಡಿಗರು ಎಂಬುದೆ ಇಲ್ಲಿನ ವಿಶೇಷ. ಗೇರುಮಾಳಂ ಪುಟ್ಟ ಪಂಚಾಯ್ತಿಯಾದರೂ ಉತ್ತಮಶಿಸ್ತಿನ ಕನ್ನಡಿಗರ ಪಂಚಾಯ್ತಿ ಎಂಬ ಖ್ಯಾತಿಗೂ ಭಾಜನವಾಗಿದೆ, ಈ ಹಿನ್ನೆಲೆ ಪ್ರತಿವರ್ಷ ಇಲ್ಲಿ ನಡೆಯುವ ಗೇರುಮಾಳಂ ಜಾತ್ರೆಗೆ ವಿವಿದೆಡೆಯಿಂದ ಕನ್ನಡಿಗರ ದಂಡು ಆಗಮಿಸುತ್ತದೆ. ಜಾತ್ರೆಯಲ್ಲಿ ಉತ್ಸಾಹ ದಿಂದ ಪಾಲ್ಗೊಳ್ಳುವ ಮೂಲಕ ಜಡರುದ್ರ ಕುಂಬೇಶ್ವರ ಮಹೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ಹರಕೆ ತೀರಿಸುತ್ತಾರೆ. 3 ದಿನಗಳ ಕಾಲ ನಡೆಯುವ ಜಾತ್ರೆಮಹೋತ್ಸವದಲ್ಲಿ 3ನೇ ದಿನ ಜರುಗುವ ರಥೋತ್ಸವಕ್ಕೆ ಹಣ್ಣು–ಧವನ ಎಸೆಯುವ ಮೂಲಕ ಭಕ್ತಾದಿಗಳು ಪುನೀತರಾಗುತ್ತಾರೆ. ಇದಲ್ಲದೆ ನೆರೆಯ ತಮಿಳುನಾಡಿನ ಕೊಯಮತ್ತೂರು, ಸತ್ತಿ, ಗರಿಕೆಕಂಡಿ ಸೇರಿದಂತೆ ಇತರೆ ತಮಿಳುನಾಡಿನ ಭಕ್ತಾದಿಗಳು ಸಹಾ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಭಕ್ತರು ಕಾಣಿಕೆ ನೀಡಿ ರಶೀದಿ ಪಡೆದ ಬಗ್ಗೆಯೂ ರಥೋತ್ಸವದ ದಿನ ಮೈಕ್‌ನಲ್ಲಿ ಕನ್ನಡ ಹಾಗೂ ತಮಿಳಿನಲ್ಲಿ ಪ್ರಚಾರ ಮಾಡುವುದು ಈ ಜಾತ್ರೆಯಲ್ಲಿ ಮತ್ತೊಂದು ವಿಶೇಷ, ಪ್ರತಿ ವರ್ಷ ಇಲ್ಲಿ ಜಾತ್ರೆ ನಡೆಯುತ್ತೆ.

# ಆತ್ಮ ಸಂತೋಷ



● ಜಿ. ಸಿಂಧು
ತೃತೀಯ ಬಿ.ಎ. (ಹೆಚ್.ಇ.ಕೆ.)

ಎಲ್ಲ ಜನರ ಬದುಕಿನಲ್ಲಿ ಒಂದು ಮಹತ್ತರವಾದ ಮತ್ತು ಮುಖ್ಯವಾದ ಆಸೆಯೊಂದಿರುತ್ತದೆ. ಅದೇನೆಂದರೆ ನೆಮ್ಮದಿಯಿಂದ ಸುಖವಾಗಿ, ಸುದೀರ್ಘವಾಗಿ ಬಾಳುವುದು. ಆದರೆ ಹೇಗೆ ನೆಮ್ಮದಿಯಿಂದ ಇರಬೇಕೆಂದು ಅರಿಯುವುದೇ ದೊಡ್ಡ ಸವಾಲು. ಈ ಸವಾಲು ಎದುರಿಸಿ ಸುಖದಿಂದ ಇರಲು ಮನುಷ್ಯ ಮಾಡುವ ಪ್ರಯತ್ನಗಳು ಅಷ್ಟಿಷ್ಟಲ್ಲ. ಆದರೂ ಕೆಲವೇ ಕೆಲವರನ್ನು ಬಿಟ್ಟರೆ ಬಹುತೇಕ ಜನರ ಈ ಹಂಬಲ ಹಾಗೆಯೇ ಉಳಿದುಹೋಗಿ ಅಶಾಂತಿಯಿಂದಲೇ ಜೀವನ ಮುಗಿಸುತ್ತಾರೆ. ನಾವು ನಮ್ಮ ಅಂತರಂಗದಲ್ಲಿನ ಆಸೆಯ ಲಗೇಜುಗಳನ್ನು ಕಡಿಮೆ ಮಾಡಿಕೊಂಡರೆ, ದುಃಖದ ಶುಲ್ಕವನ್ನು ತಪ್ಪಿಸಿಕೊಂಡು ಕೊಂಚವಾದರೂ ನೆಮ್ಮದಿಯಿಂದ ಇರಬಹುದು.

'ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದು ಹಕ್ಕಿಯೇ ಮೇಲು' ಎಂಬ ಮಾತು ನಮಗೆ ದಾರಿ ತೋರುತ್ತದೆ. ದೊಡ್ಡ ಸಂತೋಷಗಳನ್ನೇ ಹುಡುಕದೆ ಸಣ್ಣ–ಪುಟ್ಟ ಸಂತಸದ ಘಟನೆಗಳನ್ನು ಅನುಭವಿಸುವ, ಆನಂದಿಸುವ ಅಭ್ಯಾಸ ಮಾಡಿಕೊಂಡರೆ ಒಳ್ಳೆಯದೆನಿಸುತ್ತದೆ. ಚಳಿಗಾಲದ ಎಳೆ ಬಿಸಿಲನ್ನು ಆಹ್ಲಾದದಿಂದ ಅನುಭವಿಸಿದಾಗ ಆಗುವ ಸಂತಸ ಕಡಿಮೆ ಏನಿಲ್ಲ. ಸುರ್ಯೋದಯ, ಸೂರ್ಯಾಸ್ತ ಸೊಬಗು, ಪಕ್ಷಿಗಳ ಕಲರವ, ಜುಳುಜುಳು ಹರಿವ ನದಿಯ ನೀರಿನ ಸಂಗೀತದಂತಹ ಚಲನೆ, ಮರಗಿಡಗಳಲ್ಲಿ ಅರಳಿ ನಗುವ ಹೂಗಳು ಮಗುವಿನ ನಿಷ್ಕಲ್ಮಶ ನಗು..... ಹೀಗೆ ಹಲವಾರು ಸಂಗತಿಗಳು ನಮಗೆ ನೆಮ್ಮದಿ ನೀಡಲು ಕಾಯುತ್ತಿರುತ್ತವೆ. ನಾವು ಅದನ್ನೆಲ್ಲಾ ಗಮನಿಸುವ ಆಸಕ್ತಿ ವಹಿಸಿದರೆ ಚೆನ್ನಾಗಿರುತ್ತದೆ. ನಾವು ಸಂತೋಷವಾಗಿರುವುದಕ್ಕಿಂತ ಬೇರೆಯವರಿಗೆ ನಮ್ಮ ಸಂತೋಷವನ್ನು ತೋರಿಸಿ ಅವರಿಗೆ ಅಸೂಯೆ ತರಬೇಕೆಂದೇ ಕೆಲವರು ಭಾವಿಸಿ, ಅದರಂತೆ ನಡೆದು ಇರುವ ಅಷ್ಟೋ ಇಷ್ಟೋ ಸಂತೋಷವನ್ನು ಕಳೆದುಕೊಂಡು ನೆಮ್ಮದಿ ಕೆಡಿಸಿಕೊಳ್ಳುತ್ತಾರೆ.

ಒಬ್ಬ ಯುವಕ ಸಾವಿರಾರು ರೂ. ಬೆಲೆಯ ಬೂಟುಗಳನ್ನು ಧರಿಸಿ ನಡೆಯುತ್ತಿರುತ್ತಾನೆ. ಅವುಗಳ ಕಾಂತಿಗೆ, ನಯನಾಜೂಕಿಗೆ ಮರುಳಾಗಿರುವ ಆತ ಬಿರುಸಾಗಿ ನಡೆಯತೊಡಗುತ್ತಾನೆ. ಎಷ್ಟೋ ಜನರು ಅವನು ಧರಿಸಿದ ಬೂಟುಗಳ ಗುಣಗಾನವನ್ನು ಮಾಡುತ್ತಾರೆ. ಅದನ್ನು ಕೇಳಿ ಈತ ಮತ್ತಷ್ಟು ಹುರುಪಿನಿಂದ ನಡೆಯುತ್ತಾನೆ. ಆ ಹೊಸ ಬೂಟುಗಳು ಅವನ ಕಾಲನ್ನು ಒತ್ತಿ ನೋಯಿಸುತ್ತಿರುತ್ತವೆ. ಸಾಕಷ್ಟು ನೋವು ಅವನಿಗೆ ಆಗುತ್ತಿರುತ್ತದೆ. ಕಾಲಲ್ಲಿ ಒಂದು ರೀತಿಯ ಬೆಂಕಿಯ ಉರಿಯ ಅನುಭವವಾಗುವ ಹಾಗೆ ಗಾಯವಾಗುತ್ತಿದ್ದರೂ ಬೇರೆಯುವರು ನೋಡಿ ಹೊಗಳಲೆಂದು ನಡೆಯುತ್ತಲೆ ಇರುತ್ತಾನೆ.

ಇದು ಸರಿಯಾದ ಮಾರ್ಗವೇ? ಖಂಡಿತ ಇಲ್ಲ ತನ್ನ ಕಾಲಿಗೆ ಗಾಯವಾದಾಗ ಬೂಟನ್ನು ತೆಗೆಯಬೇಕೇ ಹೊರತು ಹಾಗೆಯೇ ಮುಂದುವರಿಯುವುದಲ್ಲ. ಬೇರೆಯವರಿಗಿಂತ ತನ್ನ ಕಾಲಿಗೆ ಆಗುತ್ತಿರುವ ನೋವು ಅವನಿಗೆ ಮುಖ್ಯವಾಗಬೇಕು. ಬೂಟು ತೆಗೆದು ಆರಾಮವಾಗಿದ್ದರೆ ನೆಮ್ಮದಿ ದೊರೆಯುವುದು. ಬಹುತೇಕ ಜನ ತದ್ವಿರುದ್ಧವಾಗಿ ಮಾಡುತ್ತಾರೆ. ಮರೀಚಿಕೆಯಂತಾಗುವ ನೆಮ್ಮದಿಯನ್ನು ಹುಡುಕುತ್ತಾರೆ. ಬಹಳಷ್ಟು ವಿಚಾರಗಳಲ್ಲೂ ಬೇರೆಯವರಿದ ಮೆಚ್ಚಿಸಿಕೊಳ್ಳಲು ಮುಖವಾಡ ಹಾಕಿ ನಟಿಸಿ ಆತ್ಮವಂಚನೆ ಮಾಡಿಕೊಂಡು ಅಸಂತುಷ್ಟರಾಗುತ್ತಾರೆ.

ಒಮ್ಮೆ ಹಸುವೊಂದು ಕಾಡಿಗೆ ಹೋಗಿ ಒಂದು ಗಿಡದ ನೆರಳಿನಲ್ಲಿ ಮಲಗಿಕೊಂಡು ದುಃಖಿಸುತ್ತಿರುತ್ತದೆ. ಇದನ್ನು ನೋಡಿದ ಆ ಗಿಡ ಕೇಳುತ್ತದೆ. ಏಕೆ ಹಸುವೇ ಅಳುತ್ತಿರುವೆ? ಹಸು ಉತ್ತರಿಸುತ್ತದೆ. "ಏನು ಹೇಳಲಿ ನನ್ನ ಕಥೆ, ನಾನು

ಚೆನ್ನಾಗಿ ಹಾಲು ಕೊಡುತ್ತಿದ್ದಾಗ ನನಗೆ ಚೆನ್ನಾಗಿ ಮೇವು, ನೀರು ಕೊಟ್ಟು ನನ್ನನ್ನು ತುಂಬಾ ಚೆನ್ನಾಗಿ ನಾನಿರುವ ಮನೆಯ ಮಾಲೀಕ ನೋಡಿಕೊಳ್ಳುತ್ತಿದ್ದ. ಮನೆ ಮಂದಿಯೆಲ್ಲಾ ನನ್ನ ಮೈದಡವಿ ಪ್ರೀತಿ ತೋರುತ್ತಿದ್ದರು. ಈಗ ನಾನು ಹಾಲು ಕೊಡುವುದು ತುಂಬಾ ಕಡಿಮೆಯಾದ ಮೇಲೆ ನನ್ನನ್ನು ಸರಿಯಾಗಿ ಗಮನಿಸುವುದಿಲ್ಲ. ಹುಲ್ಲು ಮತ್ತು ನೀರನ್ನು ಹಾಕದೆ ಹಸಿವಿನಿಂದ ಕಂಗಾಲಾಗುವಂತೆ ಮಾಡಿದ್ದಾರೆ. ಹುಲ್ಲು ನೀರಿಲ್ಲದೇ ನಾನು ಹೇಗೆ ಜೀವಿಸಲಿ? ನೀನೇ ಹೇಳು" ಎನ್ನುತ್ತದೆ. ಆಗ ಗಿಡವು "ಹಾಗಾದರೆ ಈಗ ಇಲ್ಲಿಗೆ ಬಂದಿರುವೆಯೆಲ್ಲಾ ಇಲ್ಲಿಯೇ ಇದ್ದುಬಿಡು ಎನ್ನುತ್ತದೆ. ಇಲ್ಲಿ ಹುಲ್ಲು, ನೀರು ಹೇರಳವಾಗಿ ತಿಂದುಂಡು ಆರಾಮವಾಗಿರು ನೆಮ್ಮದಿಯನ್ನು ಕಾಣು" ಎನ್ನುತ್ತದೆ.

ಅದಕ್ಕೆ ಹಸುವು ಹೇಳುತ್ತದೆ "ನೀನು ಹೇಳುವುದು ಸರಿ ಗಿಡವೆ, ಆದರೆ ಆ ಮನೆಯೊಡತಿ ಪ್ರತಿದಿನ ಬೆಳಗ್ಗೆ ಮತ್ತು ರಾತ್ರಿ ನನ್ನ ಹಣೆಗೆ ಕುಂಕುಮ, ವಿಭೂತಿ ಇಟ್ಟು ಪೂಜಿಸಿ, ಆರತಿ ಬೆಳಗಿ ನನಗೆ ಕೈ ಮುಗಿಯುತ್ತಾಳೆ. ನನಗೆ ಅದರಿಂದ ತುಂಬಾ ಆನಂದವಾಗುತ್ತದೆ. ಅದನ್ನು ಬಿಟ್ಟು ಇಲ್ಲಿಗೆ ಬರಲಾರೆ" ಎನ್ನುತ್ತದೆ.

"ಕ್ಷಣಿಕ ಸುಖಕ್ಕೆ ಸಾಗರದಷ್ಟು ದುಃಖ" ಎಂಬಂತೆ ಈ ಹಸುವು ಹೇಗೆ ತಾನೇ ನೆಮ್ಮದಿ ಕಾಣುವುದು? ಕೆಲ ಮನುಷ್ಯರ ಪಾಡಂತೂ ಇದೇ ರೀತಿ ದ್ವಂದ್ವದಿಂದ ಕೂಡಿ ನೆಮ್ಮದಿ ಕಳೆದುಕೊಂಡಿದ್ದಾರೆ.

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ'? ಎನ್ನುತ್ತಾರೆ ಕವಿಯೋರ್ವರು. ಇಲ್ಲಿ ಮನುಷ್ಯ ಕೂಡ ಆಲೋಚಿಸಬೇಕು. ಇರುವುದರಲ್ಲಿಯೇ ಜೀವನ ನಡೆಸುವ ಕಲೆ ಕಲಿಯಬೇಕು. 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು', 'ಪ್ರತಿ ವಿಷಯವೂ ನಾನು ಅಂದುಕೊಂಡಂತೆ ನಡೆಯುತ್ತಿಲ್ಲ' ಎಂದುಕೊಳ್ಳುವುದಕ್ಕಿಂತ ನಮ್ಮಲ್ಲೇ ಕೆಲವು ಮಾರ್ಪಾಟು ಗಳನ್ನು ಮಾಡಿಕೊಳ್ಳಬೇಕು. ಜೇನುಹುಳು ಕಾಡೆಲ್ಲ ಅಲೆದು ಜೇನುಗೂಡು ಕಟ್ಟಿದರೆ ಮನುಷ್ಯ ಬೇಕೆಂದಾಗ ಅದು ನನ್ನದೆಂದು ಕಿತ್ತುಕೊಳ್ಳಬಾರದು. ಸ್ವಲ್ಪವಾದರೂ ಮಾನವೀಯ ಅಂಶ ಬೆಳೆಸಿಕೊಂಡು ಆಚರಣೆಗೆ ತರಬೇಕು. ಹಸುವು ಕೊಡುವ ಹಾಲು ನಮಗೆ ಪೂರ್ತಿ ಬೇಕೆಂದರೆ ಅದರ ಕರುಳ ಕುಡಿಯಾದ ಕರುವಿಗೆ ಮೋಸ ಮಾಡಿದಂತೆ ಎಂಬ ಅರಿವು ಬರಬೇಕು. ನಾನು ಪರಿಶ್ರಮದಿಂದ ದುಡಿದು ಚೆನ್ನಾಗಿರಬೇಕು. ಹಾಗೆಯೇ ಇತರರು ಚೆನ್ನಾಗಿರಬೇಕು, ಎಂಬ ಭಾವನೆ ಬರಬೇಕು. ಪ್ರತಿಯೊಂದರಲ್ಲೂ ನಾವೇ ಗೆಲ್ಲಬೇಕು ಎಂದರೆ ನೆಮ್ಮದಿ ದೂರವಾಗುತ್ತದೆ. "It's better to lose the argument than to lose the relationship." ಎನ್ನುವಂತೆ ಸೋತು ಗೆಲ್ಲುವ ಗುಣ ನಮ್ಮಲ್ಲಿ ಬಂದಾಗ, ನಮ್ಮಂತೆ ಇತರರು ಬಾಳಬೇಕು ಎನ್ನುವ ಅಭಿಪ್ರಾಯ ನಮ್ಮದಾದಾಗ ಸಕಲ ಜೀವಿಗಳಿಗೂ ಲೇಸನೇಬಯಸಿ, ಅವುಗಳನ್ನು ಪ್ರೀತಿಸುವ ಮನಸ್ಸು ಬಂದಾಗ ನೆಮ್ಮದಿ ನಮ್ಮತ್ತ ಬರುತ್ತದೆ.

ಸಿಕ್ಕಿದ್ದನೆಲ್ಲಾ ಸಂಗ್ರಹಿಸಿಕೊಂಡರೆ ಅದು ನೆಮ್ಮದಿ ಬದುಕಿಗೆ ಮಾರ್ಗವಾಗುವುದಿಲ್ಲ. ಅವಶ್ಯಬಿದ್ದಾಗ ನಮ್ಮಲ್ಲಿರುವುದನ್ನು ಅರ್ಹರಿಗೆ ನೀಡಿ, ನಮ್ಮಲ್ಲಿರುವ ಅರಿವನ್ನು ಹಂಚಿಕೊಂಡು ಆಚರಣೆಗೆ ತಂದಾಗ ನೆಮ್ಮದಿಯ ಜೀವನ ಪ್ರಾರಂಭವಾಗುತ್ತದೆ.

ಭೂಮಿ ಬಾನು ಇರುವತನಕ
ನಗುತಿರಲಿ ಕನ್ನಡ
ಕನ್ನಡ ಸವಿಗನ್ನಡ
ಕರಿಮಣ್ಣಿನ ಕಣಕಣದಲೂ
ಉಸಿರಾಡಿದೆ ಹಸಿರಿನ
ಕನ್ನಡ ಶುಭಗನ್ನಡ – **ದೊಡ್ಡ ರಂಗೇಗೌಡ**

# ಹಣಕ್ಕಿಂತ ಗುಣಮುಖ್ಯ



● ಎಮ್. ಹೇಮ
ದ್ವಿತೀಯ ಬಿ.ಕಾಂ.

'ಹಣವಿಲ್ಲದವನ ಬಾಳು ಹೆಣದ ಹಾಗೆ', 'ಕಾಸಿದ್ರೆ ಕೈಲಾಸ', 'ದುಡ್ಡೇ ದೊಡ್ಡಪ್ಪ' – ಮೊದಲಾದ ಹೇಳಿಕೆಗಳು ಹಣದ ಮಹತ್ವವನ್ನು ಸಾರಿ ಹೇಳುತ್ತವೆ. 'ಹಣವೇ ನಿನ್ನಯ ಗುಣವೆಷ್ಟು ವರ್ಣಿಸಲಿ' ಎಂದು ದಾಸರು ಹಾಡಿದ್ದಾರೆ. 'ಸರ್ವೇಗುಣಾಃ ಕಾಂಚನಮಾಶ್ರಯಂತಿ' – ಎಲ್ಲಾ ಗುಣಗಳೂ ಚಿನ್ನವನ್ನೇ ಎಂದರೆ ಹಣವನ್ನೇ ಆಶ್ರಯಿಸಿಸುತ್ತವೆ ಎಂದು ಸುಭಾಷಿತವು ಹೇಳುತ್ತದೆ.

ಹಣವುಳ್ಳವರ ಅವಗುಣಗಳೆಲ್ಲವೂ ಮರೆಯಾಗುತ್ತವೆ. ಹಣವುಳ್ಳ ವ್ಯಕ್ತಿ ಗೌರವಕ್ಕ ಪಾತ್ರನಾಗುತ್ತಾನೆ. ಹಣವಿದ್ದರೆ ಸಕಲ ಸುಖ–ಸೌಲಭ್ಯಗಳನ್ನು ಪಡೆಯಬಹುದೆಂಬ ನಂಬಿಕೆಯೂ ಇದೆ. ಹೀಗೆ ಹಣದ ಗುಣಗಳನ್ನು ವರ್ಣಿಸಲು ಸಾಕಷ್ಟು ಕಾರಣಗಳಿವೆ. ಹಣವಿರುವವರಿಗೆ ಸ್ನೇಹಿತರಿರುತ್ತಾರೆ. ಅವರಿಗೆ ಸಮೀಪ ಬಂಧುಗಳಿರುತ್ತಾರೆ. ಪ್ರಪಂಚದಲ್ಲಿ ಅವರೇ ನಿಜವಾದ ಮನುಷ್ಯರೆನಿಸುತ್ತಾರೆ. ಅವರು ಗೌರವದಿಂದ ಜೀವಿಸುತ್ತಾರೆ. ಹೀಗೆ ಹಣಕ್ಕೆ ವಿಶೇಷವಾದ ಶಕ್ತಿ ಇದೆ. ಹಣವು ಪ್ರೇರೇಪಿಸಿದಂತೆ ಹೊಟ್ಟೆ ಬಟ್ಟೆಗಳನ್ನು ಕಟ್ಟಿ ಜಿಪುಣತನದಿಂದ ಹಣವನ್ನು ಉಳಿಸಲು ತೊಡಗುತ್ತಾನೆ. ಆಗ ಅವನಿಗೆ ಹಣವು ಮುಖ್ಯವಾಗಿ ತೋರುತ್ತದೆ. ನೆಂಟರು, ಇಷ್ಟರು ಯಾರೂ ಬೇಕೆನಿಸುವುದಿಲ್ಲ. ಹಣ ಸೇರಿದಂತೆ ಅಹಂಕಾರ ತಲೆಗೇರುತ್ತದೆ. ಹಣವಿಲ್ಲದವರನ್ನು, ಬಡವರನ್ನು ತಾತ್ಸಾರದಿಂದ ನೋಡುತ್ತಾನೆ. ತನ್ನನ್ನು ಹೊಗಳುವವರು ಮಾತ್ರ ಅವನಿಗೆ ಗೆಳೆಯರು, ಆಪ್ತರು ಎನಿಸುತ್ತಾರೆ.

ನೂರುಳ್ಳವನು ಸಾವಿರವನ್ನೂ, ಸಾವಿರವುಳ್ಳವನು ಲಕ್ಷವನ್ನೂ, ಲಕ್ಷವುಳ್ಳವನು ರಾಜ್ಯವನ್ನು, ರಾಜ್ಯವುಳ್ಳವನು ಸ್ವರ್ಗವನ್ನು ಒಂದಾದಮೇಲೆ ಒಂದರಂತೆ ಬಯಸುತ್ತಲೇ ಇರುತ್ತಾನೆ. ಹಣವಿದ್ದಾಗ ದೊರೆಯುತ್ತಿದ್ದ ಗೌರವಾದರಗಳು ಹಣದೊಂದಿಗೇ ಹೋಗುತ್ತವೆ.

ಗುಣವಂತರಲ್ಲಿ ಹಣವಿದ್ದರೆ ಅದು ಪರೋಪಕಾರಕ್ಕಾಗಿಯೇ ವಿನಃ ಸ್ವಾರ್ಥಕ್ಕಾಗಿಯಲ್ಲ. ಯಾರಿಗೂ ತಿಳಿಯದಂತೆ ದಾನಮಾಡುವುದು, ಉಪಕಾರ ಮಾಡುವುದು, ಬಡವರಿಗೆ ಕೇಳುವುದಕ್ಕೆ ಮುಂಚೆಯೇ ನೀಡುವುದು, ಒಳ್ಳೆಯದನ್ನೇ ಯೋಚಿಸುವುದು ಗುಣವಂತನ ಲಕ್ಷಣಗಳಾಗಿವೆ.

ದುರ್ಜನರಲ್ಲಿ ಹಣ ಸೇರಿದಾಗ ದುರ್ಗುಣಗಳೇ ಬೆಳೆಯುತ್ತವೆ. ಸಜ್ಜನರಲ್ಲಿ, ಗುಣವಂತರಲ್ಲಿರುವ ಹಣ ಸದ್ವಿನಿಯೊಗವಾಗುತ್ತದೆ. ಹಣದಿಂದಾಗಿ ಅವರ ಗುಣಗಳು ಅವಗುಣಗಳಾಗುವುದಿಲ್ಲ. ಆದ್ದರಿಂದ 'ಹಣಕ್ಕಿಂತ ಗುಣವೇ ಮೇಲು' ಎನಿಸುತ್ತದೆ.

ಬೇಡಿದ್ದನ್ನೆಲ್ಲಾ ಕೊಡುವವನು ದೇವರಾದರೆ,
ಬೇಡದೆಯೇ ಜನ್ಮವನು ಕೊಟ್ಟು,
ಬಯಸಿದ್ದನ್ನೆಲ್ಲಾ ನೀಡಿ,
ನಮ್ಮ ಜೀವನದ ಕರ್ತೃವಾಗಿರುವ 'ಅಪ್ಪ'
ಆ ದೇವರಿಗಿಂತಲೂ ಮಿಗಿಲಾದವರು.

ಗಿಡದಲ್ಲಿ ಎಷ್ಟೇ ಮುಳ್ಳಿದ್ದರೂ
ಗುಲಾಬಿ ಅರಳುವುದಿಲ್ಲವೇ....
ಹಾಗೇ... ಮನಸ್ಸಿನಲ್ಲಿ ಎಷ್ಟೇ ನೋವಿದ್ದರೂ
ಮುಖದಲ್ಲಿ ನಗುವಿರಲೇ ಬೇಕು
'ಅದೇ ಜೀವನ'

# ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವ



● ಎಮ್. ಹೇಮ
ದ್ವಿತೀಯ ಬಿ.ಕಾಂ.

ಸಮುದಾಯಕ್ಕೆ ಸೇವೆಯನ್ನು ಸಲ್ಲಿಸುವ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಇರುವ ಯೋಜನೆಯೇ "ರಾಷ್ಟ್ರೀಯ ಸೇವಾ ಯೋಜನೆ" (National Service Scheme - NSS) ಆಗಿದೆ. ಇದು ಭಾರತ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಅಡಿಯಲ್ಲಿ ಬರುವ ಒಂದು ಕಾರ್ಯಕ್ರಮವಾಗಿದೆ. 1969ರ ಅಕ್ಟೋಬರ್ – 2ರಂದು ದೇಶದಾದ್ಯಂತ ಇರುವ 37 ವಿಶ್ವವಿದ್ಯಾಲಯಗಳ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ ಸ್ವಯಂ ಸೇವಕರೊಂದಿಗೆ ಈ ಯೋಜನೆಯು ಆರಂಭವಾಯಿತು. ಇಂದು 298 ಶಿಕ್ಷಣ ಸಂಸ್ಥೆಗಳ 32 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವುದರಿಂದ ವಿದ್ಯಾರ್ಥಿಗಳ ವ್ಯಕ್ತಿತ್ವವು ವಿಕಸನಗೊಳ್ಳುತ್ತದೆ. ಯಾವುದೇ ನಾಗರಿಕ ಸೌಲಭ್ಯಗಳಿಲ್ಲದೆ ಇರುವ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ರಸ್ತೆನಿರ್ಮಾಣ, ಚರಂಡಿಗಳ ಹೂಳೆತ್ತುವಿಕೆ, ಶುಚಿತ್ವ ಮುಂತಾದ ಶ್ರಮದಾನದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ದೈಹಿಕ ಸಾಮರ್ಥ್ಯ ಹೆಚ್ಚುತ್ತದೆ. ಭೇದಭಾವಗಳು ಅಳಿದು ಸಹಬಾಳ್ವೆಯ ಪ್ರಜ್ಞೆ ಮೂಡುತ್ತದೆ. ರಕ್ತದಾನ ಶಿಬಿರಗಳ ಆಯೋಜನೆಯು NSSನ ಮತ್ತೊಂದು ಕಾರ್ಯಕ್ರಮವಾಗಿದೆ. ಇದರಲ್ಲಿ ಭಾಗವಹಿಸುವುದರಿಂದ ರಕ್ತದಾನದ ಪ್ರವೃತ್ತಿ ಬೆಳೆಯುತ್ತದೆ. ಅಷ್ಟೇ ಅಲ್ಲದೆ ಶಿಬಿರಗಳನ್ನು ಆಯೋಜಿಸುವ ತರಬೇತಿಯೂ ದೊರೆಯುವುದರಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು ಬೆಳೆಯುತ್ತವೆ.

ಗಿಡಮರಗಳು ಇಲ್ಲದ ಬಯಲು ಪ್ರದೇಶದಲ್ಲಿ ಸಸಿಗಳನ್ನು ನೆಟ್ಟು ಆ ಪ್ರದೇಶವನ್ನು ಹಸಿರಾಗಿಸುವುದು NSSನ ಪ್ರಮುಖ ಉದ್ದೇಶಗಳಲ್ಲಿ ಒಂದು. ಈ ಅರಣ್ಯೀಕರಣದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದರಿಂದ ಅವರಲ್ಲಿ ಪರಿಸರ ಪ್ರಜ್ಞೆಯು ಹೆಚ್ಚುತ್ತದೆ. ಅಲ್ಲದೇ ಸಾರ್ವಜನಿಕರಲ್ಲಿಯೂ ಅರಿವು ಮೂಡುತ್ತದೆ ಮತ್ತು ಪರಿಸರ ಮಾಲಿನ್ಯವು ಕಡಿಮೆಯಾಗುತ್ತದೆ. ಪ್ರವಾಹ, ಭೂಕಂಪ, ಬೆಂಕಿ ಅವಘಡ ಮುಂತಾದ ದುರಂತದ ಸಂದರ್ಭದಲ್ಲಿ ಪರಿಹಾರ ಕಾರ್ಯಾಚರಣೆಯುನ್ನು ನಡೆಸುವಾಗಕೂಡ NSS ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲಾಗುತ್ತದೆ. ಇದರಿಂದ ಅವರಲ್ಲಿ ಕಷ್ಟಗಳನ್ನು ಮತ್ತು ಕಠಿಣ ಪರಿಸ್ಥಿತಿಗಳನ್ನು ನಿರ್ವಹಿಸುವ ಸಾಮರ್ಥ್ಯ ಬೆಳೆಯುತ್ತದೆ. NSS ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲೂ ಹಲವು ಅವಕಾಶಗಳನ್ನು ನೀಡಲಾಗುತ್ತದೆ.

ಈ ಎಲ್ಲಾ ಕಾರಣಗಳಿಂದಾಗಿ ವಿದ್ಯಾರ್ಥಿಗಳು "ರಾಷ್ಟ್ರೀಯ ಸೇವಾ ಯೋಜನೆ"ಯಲ್ಲಿ ಭಾಗವಹಿಸುವುದು ಅತ್ಯಗತ್ಯವಾಗಿದೆ.

ತುಟಿ ತುಂಬಾ ನಗುವಿರಲಿ
ನಗುವಿನಲ್ಲಿ ನನ್ನ ನೆನಪಿರಲಿ
ನೀವು ಸದಾ ನಗುತಿರಲಿ
ನನ್ನ ನೆನಪು ಸದಾ ನಿಮಗಿರಲಿ....!

# ಅಮ್ಮ



● ಎಸ್. ಸಂಧ್ಯಾ
ತೃತೀಯ ಬಿ.ಎ. (ಹೆಚ್.ಇ.ಕೆ.)

ಅಮ್ಮ ಎನ್ನುವ ಪದವೇ ಒಂದು ಸುಂದರವಾದ ಕಾವ್ಯ. ಅವಳು ಪ್ರೀತಿ, ವಾತ್ಸಲ್ಯ, ಮಮತೆಗಳ ಪ್ರತಿರೂಪ. ಪ್ರೀತಿ ಮಮತೆಗೆ ಅವಳೇ ಸರಿಸಾಟಿ. ನಿಷ್ಕಲ್ಮಶ ಪ್ರೀತಿ ಎಂದರೆ ತಾಯಿಯದು. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ದೇವರ ಪ್ರತಿರೂಪ ಅವಳು. ಆದುದರಿಂದಲೇ 'ಮಾತೃದೇವೋಭವ' ಎಂದಿರುವುದು. ಯಾವ ಪ್ರತಿಫಲವನ್ನು ಬಯಸದೇ ಮಕ್ಕಳನ್ನು ಪ್ರೀತಿಸಿ, ಮುದ್ದಿಸಿ, ಸಾಕಿ, ಸಲಹಿ, ವಿದ್ಯಾವಂತರನ್ನಾಗಿ ಮಾಡಿ ಹರಸುವ ತಾಯಿಂ ದೇವರು. 'ತಾಯಿ' ಎಂದರೆ ನಿಸ್ವಾರ್ಥ, ಸತ್ಯ, ಮಮತೆ, ಆತ್ಮವಿಶ್ವಾಸ, ಹೃದಯ ಶ್ರೀಮಂತಿಕೆ, ನಂಬಿಕೆ, ವಿಶ್ವಾಸ ಕರುಣೆ, ಸಹನಾಮೂರ್ತಿ. ಅವಳ ವ್ಯಕ್ತಿತ್ವದ ಸೌಂದರ್ಯ ಬಹುದೊಡ್ಡದು. ಅವಳು ತನ್ನ ಮಕ್ಕಳ ಮೇಲೆ ತೋರುವ ಪ್ರೀತಿ, ಮಮತೆ ವಾತ್ಸಲ್ಯಕ್ಕೆ ಯಾವುದೇ ನಿರೀಕ್ಷೆಯನ್ನು ಬಯಸುವುದಿಲ್ಲ. ಬದಲಿಗೆ ಮಕ್ಕಳ ನಗುವಿನಲ್ಲೇ ಅವಳ ನೋವನ್ನು ಮರೆಯುತ್ತಾಳೆ.

ಅಮ್ಮ ಎನ್ನುವ ರಾಗ ಒಂದು ಮೋಹಕ ರಾಗ 'ಕಂದ' ಕರೆವ ಮೊದಲ ಮಾತು 'ಅಮ್ಮ' ಅವಳೇನೆ ಪ್ರಥಮ ಗುರು ಎಂದು ಕರೆಯುತ್ತಾರೆ. ಕಲಿವ ಎಲ್ಲ ಪಾಠಕ್ಕೆ ಅಮ್ಮನೇ ದಾರಿದೀಪ. ಬಾಳ ಪಯಣಕ್ಕೆ ಅಮ್ಮನೇ ಆರಂಭವು, ಎಲ್ಲ ಭವ್ಯ ಚರಿತ್ರೆಗೂ ಅವಳೇ ಜೀವದಾತೆ. 'ಅಮ್ಮ' ಮಗುವನ್ನು ಹೆರುವಾಗ ನೋವಿನಲ್ಲೂ ನಗುತ್ತಾಳೆ. ಅದಕ್ಕೆ ಮುಂದೆ ಗಾಯವಾದರೆ ನೋವಿನಿಂದ ಅಳುವಳು. ಆ ಮಗು ಮೊದಲ ಹೆಜ್ಜೆ ಹಾಕುವಾಗ ನೋಡಿ ನೋಡಿ ನಗುವಳು. ಆ ಮಗು ಬಿದ್ದಾಗ ಓಡಿ ಬಂದು ಮೇಲೆ ಎತ್ತುವವಳು ಅಮ್ಮ ತಾನೆ. ಇತಿಹಾಸದ ವೀರಾಧಿವೀರರು ಕೀರ್ತಿಯನ್ನು ಪಡೆದದ್ದು ಅಮ್ಮನಿಂದಲೆ. ಜೀವನದ ಹಾದಿಯಲ್ಲಿ ಮರೆಯಲಾಗದ ಮಾಣಿಕ್ಯ ಎಂದರೆ ಅಮ್ಮ ಮಾತ್ರ. ಅಮ್ಮ ಎನ್ನುವ ಪದಕ್ಕೆ ಹಲವಾರು ಸಮನಾರ್ಥಗಳು ಇವೆ. ಮಕ್ಕಳಿಗೆ ಪ್ರೀತಿಯ ಕೈ ತುತ್ತನ್ನು ಹಾಕಿ ಬೆಳೆಸುತ್ತಾಳೆ. ಅಮ್ಮ ಇಲ್ಲದೆ ಮಗುವು ಒಂದು ನಿಮಿಷವೂ ಇರುವುದಿಲ್ಲ. ಅಮ್ಮನಿಗೆ ಬೆಲೆಕಟ್ಟಲು ಆಗುವುದಿಲ್ಲ.

ತನ್ನೊಡಲಲ್ಲಿ ಮುದ್ದು ಮಗುವೊಂದು ಚಿಗುರೊಡೆಯುತ್ತಿದೆ ಎಂಬುದು ತಿಳಿಯುತ್ತಿದ್ದಂತೆಯೇ ಹೆಣ್ಣು ತಾಯ್ತನದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಳ್ಳುತ್ತಾಳೆ. ಒಬ್ಬ ಸಾಮಾನ್ಯ ಹೆಣ್ಣು ದೈವತ್ವಕ್ಕೇರುವ ಪಯಣ ಆರಂಭವಾಗೋದೆ ಆಗ. ತೊದಲ ನುಡಿಯ ಕಂದನ ಬಾಯಿಂದ ಮೊದಲ ಬಾರಿಗೆ ಬಂದ 'ಅಮ್ಮ' ಎಂಬ ಪದಕ್ಕೆ ಹೆಣ್ಣಿನ ಬದುಕನ್ನೇ ಸಾರ್ಥಕಗೊಳಿಸುವ ಶಕ್ತಿಯಿದೆ.

ತಾಯಿ ಖುಷಿಯಾಗಿದ್ದರೆ ಕುಟುಂಬ ಖುಷಿಯಾಗಿರುತ್ತದೆ. ಕುಟುಂಬ ಖುಷಿಯಾಗಿದ್ದರೆ ದೇಶ ಖುಷಿಯಾಗಿರುತ್ತದೆ. ಅಂದರೆ ಇಡೀ ದೇಶದ ಖುಷಿ ತಾಯಿಯ ಮೇಲೆ ನಿಂತಿದೆ ಎಂಬ ಭಾರತದ ಹೆಮ್ಮೆಯ ರಾಷ್ಟ್ರಪತಿಯಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮಾತಲ್ಲಿ ತಾಯಿಗಿಂತ ದೊಡ್ಡದು ಇನ್ನೇನು ಇಲ್ಲ ಎಂಬ ಭಾವ ವ್ಯಕ್ತವಾಗಿದೆ. ಹೌದು, ಮತ್ತೆ ಬಂದಿದೆ ಅಮ್ಮಂದಿರ ದಿನ (ಮೇ, 14) ಆಕೆಯ ಬಗ್ಗೆ ಬರೆಯುವುದಕ್ಕೆ ಹೋದರೆ ಭಾಷೆ ಬಡವಿ ಅನ್ನಿಸುತ್ತೆ, ಯಾವುದೇ ಪದದಲ್ಲಿ ಅವಳನ್ನು ವರ್ಣಿಸುವುದಕ್ಕೆ ಹೋದರೂ, ಆಕೆಯ ಪಾತ್ರದೆದುರು ಆ ಪದವೇ ಸೋತು ಬಿಡುತ್ತದೆ. ಒಂದು ಪದವಲ್ಲ; ಒಂದು ವಾಕ್ಯವಲ್ಲ; ಒಂದು ಕಥೆಯಲ್ಲ; ಒಂದು ಹೊತ್ತಿಗೆಯಲ್ಲಿ ಹಿಡಿದಿಡಲು ಸಾಧ್ಯವಾಗದ ಮಹೋನ್ನತ ವ್ಯಕ್ತಿತ್ವ ಅಮ್ಮನದು. ಅಕ್ಷರದಿಂದ ಅಮ್ಮಂದಿರನ್ನು ವರ್ಣಿಸಲು ಸಾಧ್ಯವಿಲ್ಲ.

ಹುಟ್ಟುವಾಗ ಅಮ್ಮ, ಅಳುವಾಗ ಅಮ್ಮ
ನಗುವಾಗ ಅಮ್ಮ, ಬಿದ್ದಾಗ ಅಮ್ಮ
ಅವಳಿಂದಲೇ ಸಿಕ್ಕಿದೆ ನಮಗೆ ಈ ಜನ್ಮ
ಆಕಾಶದ ಎತ್ತರ ಅಳೆದವರಿಲ್ಲ
ಮೇಘಗಳನ್ನು ಹಿಡಿದವರಿಲ್ಲ
ಸಾಗರದ ಅಲೆಗಳನ್ನು ತಡೆದವರಿಲ್ಲ
'ಅಮ್ಮ' ನಿನ್ನ ಪ್ರೀತಿ ವಾತ್ಸಲ್ಯಕ್ಕೆ ಸರಿಸಾಟಿಯಿಲ್ಲ.

## ಕ್ರೀಡೆ ಮತ್ತು ಆರೋಗ್ಯ



● ಎಮ್. ಹೇಮ
ದ್ವಿತೀಯ ಬಿ.ಕಾಂ.

ಕ್ರೀಡೆಗಳು ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯದ ರಕ್ಷಣೆಗೆ ಕಡ್ಡಾಯವಾಗಿ ಆಟವಾಡುವುದು ಅತ್ಯಗತ್ಯ.

ಆಟಗಳಲ್ಲಿ ಹೊರಾಂಗಣ ಆಟ ಮತ್ತು ಒಳಾಂಗಣ ಆಟ ಎಂಬ 2 ವಿಧಗಳಿವೆ. ಇದರಲ್ಲಿ ಕ್ರಿಕೆಟ್, ಹಾಕಿ, ಬ್ಯಾಸ್ಕೆಟ್‌ಬಾಲ್, ಥ್ರೋಬಾಲ್, ಜೂಟಾಟ..... ಮುಂತಾದ ಆಟಗಳಲ್ಲಿ ಆಟಗಾರರು ವೇಗವಾಗಿ ಓಡುವುದರಿಂದ ದೇಹದಲ್ಲಿರುವ ಅನಗತ್ಯವಾದ ಕೊಬ್ಬು ಕರಗುತ್ತದೆ. ಸ್ನಾಯುಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತವೆ. ಕೀಲುಗಳ ಚಲನೆ ಸುಲಭವಾಗುತ್ತದೆ. ದೈಹಿಕ ಆರೋಗ್ಯವು ಉತ್ತಮಗೊಳ್ಳುತ್ತದೆ. ಹೃದ್ರೋಗ, ಮಧುಮೇಹ, ರಕ್ತದ ಒತ್ತಡ ಇತ್ಯಾದಿ ರೋಗಗಳು ದೂರವಾಗುತ್ತದೆ.

ದೈಹಿಕ ಆರೋಗ್ಯವನ್ನು ಕಾಯ್ದುಕೊಳ್ಳುವುದು ಎಷ್ಟು ಮುಖ್ಯವೋ ಮಾನಸಿಕ ಆರೋಗ್ಯವನ್ನು ಚೆನ್ನಾಗಿಟ್ಟು ಕೊಳ್ಳುವುದೂ ಅಷ್ಟೇ ಮುಖ್ಯ. ಚದುರಂಗ, ಕೇರಂ, ಅಳುಗುಳಿಮನೆ, ಚೌಕಾಬಾರ, ಪದಬಂಧ ಮುಂತಾದ ಆಟಗಳು ಒಳಾಂಗಣ ಆಟಗಳಾಗಿದ್ದು, ಈ ಚಟುವಟಿಕೆಗಳಲ್ಲಿ ತೊಡಗುವುದರಿಂದ ಬುದ್ಧಿಶಕ್ತಿಯು ಹೆಚ್ಚು ಚುರುಕು ಗೊಳ್ಳುತ್ತದೆ. ಏಕಾಗ್ರತೆಯು ಹೆಚ್ಚುತ್ತದೆ. ಅದೇ ರೀತಿ ಯೋಗಾಭ್ಯಾಸ ಮತ್ತು ಪ್ರಾಣಾಯಾಮಗಳಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ.

ಆದರೆ ಇಂದಿನ ದಿನಗಳಲ್ಲಿ ಇಂತಹ ಕ್ರೀಡೆಗಳಲ್ಲಿ ತೊಡಗುವ ಮಕ್ಕಳು ಕಡಿಮೆಯಾಗಿದ್ದಾರೆ. ಏಕೆಂದರೆ ದೂರದರ್ಶನ, ಕಂಪ್ಯೂಟರ್, ಮೊಬೈಲ್ ಮುಂತಾದ ಮಾಧ್ಯಮಗಳ ವೀಕ್ಷಣೆಯಲ್ಲಿಯೇ ಹೆಚ್ಚು ಸಮಯ ವ್ಯಯ ಮಾಡುತ್ತಾರೆ. ಆದ್ದರಿಂದ ಅಂತಹವರ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಸಾಮರ್ಥ್ಯವು ಕಡಿಮೆಯಾಗಿದ್ದು, ಬೇಗನೆ ಹಲವಾರು ಖಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಪ್ರತಿನಿತ್ಯವು ಆಟೋಟಗಳಲ್ಲಿ ತೊಡಗುವುದರಿಂದ ನಮ್ಮ ಮನಸ್ಸು ಉಲ್ಲಾಸಗೊಳ್ಳುತ್ತದೆ. ರಕ್ತ ಸಂಚಾರ ಸರಾಗವಾಗಿ ಆಗಿ ದೇಹದ ಸೌಂದರ್ಯ ಹೆಚ್ಚುತ್ತದೆ. ಮುಪ್ಪು ದೂರವಾಗುತ್ತದೆ.

ಈ ಎಲ್ಲ ಕಾರಣಗಳಿಂದಾಗಿ ಕ್ರೀಡೆಗಳನ್ನು ಎಲ್ಲರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ.

ಈ ಜೀವಕೆ ಉಸಿರಾದೆ,
ಈ ಜೀವಕೆ ನೆರಳಾದೆ,
ಈ ಜೀವಕೆ ಮಡಿಲು ನೀಡಿ, ಹಾರೈಕೆ ಮಾಡಿದೆ...
ಈ ಜೀವಕ್ಕಾಗಿ ಜೀವನವನ್ನೇ ಸವೆಸಿದೆ,
ಈ ಜೀವಕೆ ಜೀವವಾದೆ
ಓ.... ನನ್ನ.... 'ಅಮ್ಮ'
ಈ ಜೀವ ನಿನಗಾಗಿ 'ಅಮ್ಮ....'

ಹೂವಿನ ಮಕರಂದ ಹೀರುವ ದುಂಬಿ ನೋಡಲು ಚೆಂದ
ಎಲ್ಲರಲ್ಲೂ ಬೀಳುವ ಸುಂದರ ಕನಸು ಚೆಂದ
ಮಳೆ ಬೀಳುವಾಗ ಬರುವ
ಕಾಮನ ಬಿಲ್ಲು ನೋಡಲು ಚೆಂದ
ಆಕಾಶದಲ್ಲಿ ಮಿನುಗುವ ನಕ್ಷತ್ರ ಚೆಂದ
ಹಾಗೇ,
ನಗು ತುಂಬಿದ ಅಮ್ಮನ ಮುಖ ನೋಡಲು ಚೆಂದ

# ಶಿವನ ಸಮುದ್ರ





● ಮೇಘ ಕೆ.
ತೃತೀಯ ಬಿ.ಎ. (ಎಚ್.ಇ.ಕೆ.)

ಶಿವನ ಸಮುದ್ರ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯಲ್ಲಿರುವ ಒಂದು ಸಣ್ಣ ನಗರ. ಕಾವೇರಿ ನದಿಯ ದಂಡೆಯಲ್ಲಿ ಇರುವ ಈ ಊರಿನ ಬಳಿ ನದಿಯು ಎರಡು ಕವಲುಗಳಾಗಿ ಗಗನಚುಕ್ಕಿ, ಭರಚುಕ್ಕಿ ಎಂಬ ಜಲಪಾತಳನ್ನು ಸೃಷ್ಟಿಸುತ್ತದೆ. ಇಲ್ಲಿ 1902ರಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರ ಒಂದನ್ನು ಸ್ಥಾಪಿಸಲಾಯಿತು.

ಇಡೀ ಏಷ್ಯಾ ಖಂಡದಲ್ಲಿಯೇ ಮೊಟ್ಟಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರ ಇದು. ಈ ಕೇಂದ್ರದಿಂದ ಮೊದಲ ಬಾರಿಗೆ ಕೋಲಾರ ಗೋಲ್ಡ್ ಫೀಲ್ಡ್‌ಗೆ ವಿದ್ಯುತ್ತನ್ನು ಸರಬರಾಜು ಮಾಡಲಾಯಿತು.

ಈ ಶಿಂಷಾ ಜಲವಿದ್ಯುದಾಗರದ ಬಳಿಯಿರುವ ಗಗನಚುಕ್ಕಿಯ ಹರವು ಕಡಿಮೆ. ಆದರೆ ಎತ್ತರ ಹಾಗೂ ರಭಸ ಹೆಚ್ಚು. ಮಧ್ಯರಂಗ ಕ್ಷೇತ್ರದ ಬಳಿಯಿರುವ ಭರಚುಕ್ಕಿ ಜಲಪಾತದಲ್ಲಿ ನೀರಿನ ಪ್ರಮಾಣ ಸ್ವಲ್ಪ ಕಡಿಮೆ. ಆದರೆ ನದಿಯ ಹರವು ವಿಶಾಲ. ಬೆಂಗಳೂರು–ಕೊಳ್ಳೇಗಾಲ ಹೆದ್ದಾರಿಯ ಅಂಚಿನಲ್ಲಿರುವ ಗಗನಚುಕ್ಕಿಯನ್ನು ತಲುಪುವುದು ಸುಲಭ. ಆದರೆ ಭರಚುಕ್ಕಿ ತಲುಪಲು ಸ್ವಂತ ವಾಹನವೆ ಬೇಕು. ನೀರಿನ ರಭಸ ಎರಡೂ ಕಡೆ ತೀವ್ರ. ಕಣಿವೆ ಕೊಳ್ಳ ಪ್ರದೇಶವಾದ್ದ ರಿಂದ ಜಲಪಾತಗಳ ತಳಕ್ಕೆ ಇಳಿಯುವುದು ಕಠಿಣ ಹಾಗೂ ಅತಿ ಅಪಾಯಕಾರಿ.

ಶಿವನ ಸಮುದ್ರ ಜಲಪಾತವು ಕಾವೇರಿ ನದಿ ನೀರಾಗಿದೆ. ನದಿ ಬಂಡೆಗಳು ಮತ್ತು ಡೆಕ್ಕನ್ ಪ್ರಸ್ಥಭೂಮಿಯ ಪ್ರಪಾತಗಳ ಮೂಲಕ ತನ್ನ ಹಾದಿಯನ್ನು ಸುತ್ತಿಕೊಂಡು ಜಲಪಾತಗಳನ್ನು ರೂಪಿಸಲು ಹರಿದು ಹೋಗುತ್ತದೆ.

ಶಿವನ ಸಮುದ್ರವನ್ನು ದ್ವೀಪ ಪಟ್ಟಣದಂತೆ ಅವಳಿ ಜಲಪಾತಗಳು ವಿಂಗಡಿಸುತ್ತವೆ. ಇದು ಸಹಜವಾಗಿ ನದಿಯ ನಾಲ್ಕನೇ ದೊಡ್ಡ ದ್ವೀಪ ಎನಿಸುತ್ತದೆ. ಪ್ರಾಚೀನ ದೇವಾಲಯಗಳ ಗುಂಪು ಇಲ್ಲಿ ಇದೆ.

ಇದು ವಿಭಜನೆಗೊಳಪಟ್ಟ ಒಂದು ಜಲಪಾತ. ನೀರಿನ ಹರಿವು ಅಡ್ಡ ಜಲಪಾತಗಳ ಮೂಲಕ ಅನೇಕ ಬಂಡೆಗಳ ಮೇಲೆ ಬೀಳುವ ಹಲವು ಚಾನಲ್‌ಗಳಾಗಿ ವಿಂಗಡಿಸಲ್ಪಟ್ಟಿದೆ. ಅಲ್ಲಿ ವಿಭಜಿತ ಜಲಪಾತಗಳು ಸಂಭವಿಸುತ್ತವೆ. ಇದು 305 ಮೀಟರ್‌ಗಳಷ್ಟು ಅಗಲ, 98 ಮೀ ಎತ್ತರ. ಇದು ಒಂದು ದೀರ್ಘಕಾಲಿಕ ಜಲಪಾತ. ಮಳೆಗಾಲದಲ್ಲಿ ಜುಲೈ ಯಿಂದ ಅಕ್ಟೋಬರವರೆಗೆ ಅತ್ಯುತ್ತಮ ಹರಿವಿನ ಸಮಯ.

ಈ ಜಲಪಾತಗಳ ಬಗ್ಗೆ ಒಂದು ಸಾಮಾನ್ಯ ತಪ್ಪು ಕಲ್ಪನೆ ಇದೆ. ಎಡ ವಿಭಾಗ ಗಗನಚುಕ್ಕಿ ಎಂದು ಕರೆಯಲಾಗುತ್ತದೆ ಮತ್ತು ಬಲ ವಿಭಾಗ ಭರಚುಕ್ಕಿ ಎಂದು ಕರೆಯಲಾಗುತ್ತದೆ. ಆದರೆ ವಾಸ್ತವದಲ್ಲಿ ಭರಚುಕ್ಕಿ ಜಲಪಾತವು ಗಗನಚುಕ್ಕಿ ಜಲಪಾತದಿಂದ ನೈಋತ್ಯದ ಕೆಲವು ಕಿಲೋಮೀಟರ್ ದೂರದಲ್ಲಿದೆ. ಕಾವೇರಿ ನದಿಯು ಎರಡು ವಿಭಾಗಗಳಾಗಿ ಹರಿದು ಪಶ್ಚಿಮ ಶಾಖೆ ಗಗನಚುಕ್ಕಿ ಮತ್ತು ಪೂರ್ವ ಶಾಖೆ ಭರಚುಕ್ಕಿ ಜಲಪಾತಗಳನ್ನುಂಟು ಮಾಡುತ್ತದೆ. ಗಗನ ಚುಕ್ಕಿ ಜಲಪಾತವನ್ನು ಶಿವನ ಸಮುದ್ರ ಗಡಿಯಾರ ಗೋಪುರದಿಂದ ಉತ್ತಮವಾಗಿ ಕಾಣಲಾಗುತ್ತದೆ. ಅವಳಿ ಜಲಪಾತಗಳ ಚಿತ್ರಗಳನ್ನು ಇಲ್ಲಿಂದ ತೆಗೆದುಕೊಳ್ಳಲಾಗುತ್ತದೆ.

**ಗಗನ ಚುಕ್ಕಿ :–**

ದೊಡ್ಡ ಕುದುರೆಬಾಲದ ಜಲಪಾತವೆ ಗಗನ ಚುಕ್ಕಿ ನದಿ ಕಬಿನಿಯು ನದಿ ಕಾವೇರಿಯೊಂದಿಗೆ ಒಟ್ಟಾಗಿ ಪ್ರವಹಿಸುವ ಸಂದರ್ಭದಲ್ಲಿ ಜುಲೈ–ಆಗಸ್ಟ್ ಸಮಯದಲ್ಲಿ ದೊಡ್ಡ ಬಂಡೆಗಳ ಮೂಲಕ ನುಗ್ಗುತ್ತಿರುವ 90 ಮೀಟರ್ ಎತ್ತರದ ಈ ಜಲಪಾತ ಪ್ರವಾಸಿಗರನ್ನು ಆಹ್ವಾನಿಸುತ್ತದೆ.

**ಭರಚುಕ್ಕಿ :–**

ಭರಚುಕ್ಕಿ ನಿಜವಾಗಿಯೂ ಮೊನಚಾದ ರೋರಿಂಗ್ ಕ್ಯಾಸ್ಕೇಡಿಂಗ್ ಜಲಪಾತ. ಭರಚುಕ್ಕಿಯು ಗಗನ ಚುಕ್ಕಿಯ ನೈಋತ್ಯದ ಕಡೆಗೆ ಸ್ವಲ್ಪ ದೂದರಲ್ಲಿದೆ. ಭರಚುಕ್ಕಿ ಮಾರ್ಗದಲ್ಲಿ

ದಡದ ಉದ್ದಕ್ಕೂ ನೆಲೆಗೊಂಡಿರುವ ಪುರಾತನ ದರ್ಗಾ ಕಾಣಬಹುದು. ಹಲವಾರು ಮುಸ್ಲಿಮರು ಇಲ್ಲಿಗೆ ಬೇಟಿ ಮಾಡಲು ಮತ್ತು ಪೂಜಿಸಲು ಆಕರ್ಷಿಸುತ್ತದೆ. ಅನೇಕ ಬಂಡೆಗಳು ಇಲ್ಲಿವೆ ಬೀಳುವ ನೀರಿನ ಸ್ಥಿರ ಅಲೆಗಳ ಕಾರಣ ಗಗನ ಚುಕ್ಕಿಗೆ ಹೋಲಿಸಿದರೆ, ಭರಚುಕ್ಕಿ ನೆಮ್ಮದಿಯ ಹಾಗೆ ಕಾಣಿಸುತ್ತದೆ.

ಎಚ್ಚರಿಕೆಗಳ ಪೋಸ್ಟ್ ಇದ್ದರು ಸಹ, ಜಲಪಾತಗಳನ್ನು ವೀಕ್ಷಿಸಲು ಜನರು ಬಂಡೆಗಳ ಕೆಳಗಿಳಿದು ಅನೇಕ ಮಾರಣಾಂತಿಕ ಅಪಘಾತಗಳಿಗೆ ಒಳಗಾಗಿದ್ದಾರೆ. ಇದು ಬೆಂಗಳೂರು ನಗರದಿಂದ 139 ಕಿ.ಮೀ. ದೂರದಲ್ಲಿದೆ.

**ದೇವಸ್ಥಾನಗಳು :–**

ಇಲ್ಲಿ ಶ್ರೀರಂಗನಾಥಸ್ವಾಮಿ ದೇವಾಲಯವನ್ನು ದ್ರಾವಿಡ ವಾಸ್ತುಶೈಲಿಯಲ್ಲಿ ಕಟ್ಟಲಾಗಿದೆ. ಇಲ್ಲಿನ ಶ್ರೀ ರಂಗನಾಥಸ್ವಾಮಿಯನ್ನು 'ಮಧ್ಯರಂಗ' ಎಂದು ಕರೆಯಲಾಗುತ್ತದೆ. ಶ್ರೀವೈಷ್ಣವ ಭಕ್ತರು ಹೆಚ್ಚಾಗಿ ಪೂಜಿಸುತ್ತಾರೆ. ಇಲ್ಲಿನ ದೇವರ ವಿಗ್ರಹವನ್ನು ಪ್ರೀತಿಯಿಂದ 'ಮೋಹನ ರಂಗ' ಮತ್ತು 'ಜಗಮೋಹನ ರಂಗಾ' ಎಂದೂ ಕರೆಯಲಾಗುತ್ತದೆ. ಮಧ್ಯರಂಗ ಪುರಾತನ ದೇವಸ್ಥಾನವಾಗಿದ್ದು, ಒಂದು ಸುಂದರ ಆರಾಧ್ಯ ದೈವವಾಗಿದೆ. ಆದ್ದರಿಂದ ಹಲವು ಜನರು ಭೇಟಿ ನೀಡುತ್ತಾರೆ. ವಿಷಾದವೆಂದರೆ ಕರ್ನಾಟಕ ಸರ್ಕಾರದ ಅಧಿಕಾರಿಗಳು ಈ ಸ್ಥಳ ನಿರ್ವಹಿಸಲು ಮತ್ತು ಪ್ರಚಾರ ಮಾಡಲು ಕಡಿಮೆ ಕೆಲಸ ಮಾಡಿದ್ದಾರೆ. ದ್ವೀಪದ ಮೂರು ಕಡೆಗಳಲ್ಲಿ ಮೂರು ದೇವಾಲಯಗಳಿವೆ.

ಪ್ರಾಚೀನ ಶ್ರೀ ಸೋಮೇಶ್ವರ ದೇವಸ್ಥಾನ ಶಿವನ ಸಮುದ್ರದ ಹತ್ತಿರ ಇರುವ ಮತ್ತೊಂದು ಪ್ರಸಿದ್ಧ ದೇವಾಲಯ. ಆದಿಗುರು ಶ್ರೀ ಶಂಕರಾಚಾರ್ಯರು ಈ ಸ್ಥಳಕ್ಕೆ ಭೇಟಿ ನೀಡಿ 'ಶ್ರೀಚಕ್ರ' ಸ್ಥಾಪಿಸಿದ್ದಾರೆ ಎಂದು ಹೇಳಲಾಗುತ್ತದೆ. ಇಲ್ಲಿ ಸೋಮೇಶ್ವರ ಲಿಂಗವು ರಂಗನಾಥ ವಿಗ್ರಹಕ್ಕಿಂತ ಮುಂಚೆ ಇತ್ತು ಎಂದು ನಂಬಲಾಗಿದೆ. ಈ ಲಿಂಗವನ್ನು ಸಪ್ತರಿಷಿಗಳು ಪೂಜಿಸುತ್ತಿದ್ದರು ಹಾಗೂ ಆರಾಧಿಸುತ್ತಿದ್ದರು. ಶಕ್ತಿ ದೇವತೆ ದುರ್ಗಾ ದೇವಿಯ ದೇವಸ್ಥಾನ ಸೋಮೇಶ್ವರ ದೇವಸ್ಥಾನದಿಂದ 1 ಕಿ.ಮೀ. ದೂರದಲ್ಲಿ ಇದೆ.

ಲೇಖನ



## ರಾಷ್ಟ್ರಧ್ವಜದ ಸೃಷ್ಟಿಕರ್ತ ಪಿಂಗಳಿ ವೆಂಕಯ್ಯ

● **ಎನ್. ಸುಕನ್ಯ**
ದ್ವಿತೀಯ ಬಿ.ಬಿ.ಎ.

ನಮ್ಮ ರಾಷ್ಟ್ರಧ್ವಜ ಗೊತ್ತು, ಮೂರು ಬಣ್ಣಗಳಿರುವುದು ಗೊತ್ತು, ಆದರೆ ಅದರ ಸೃಷ್ಟಿಕರ್ತ ಯಾರು ಗೊತ್ತೆ? ಪಿಂಗಳಿ ವೆಂಕಯ್ಯ ಎನ್ನುವ ಮಹಾನುಭಾವರು. ಅವರು ಆಂಧ್ರಪ್ರದೇಶದ ವ್ಯಕ್ತಿ. 1916ರಲ್ಲಿ ನಮ್ಮದೆ ಆದ ಒಂದು ಧ್ವಜ ಇರಬೇಕೆಂಬ ಆಲೋಚನೆ ಬಂದಿತು. ಪಿಂಗಳಿ ವೆಂಕಯ್ಯನವರು ಆ ಪ್ರಕ್ರಿಯೆಯಲ್ಲಿ ಅನೇಕ ದೇಶಗಳ ಧ್ವಜಗಳನ್ನು ಪರಿಶೀಲಿಸಿದರು. ಧ್ವಜದ ಚರಿತ್ರೆಯನ್ನು ಅಧ್ಯಯನಿಸಿದರು. ಬಣ್ಣಗಳ ಭಾವನೆಗಳನ್ನು ಅರ್ಥಮಾಡಿಕೊಂಡರು. 1921ರಲ್ಲಿ ಬೆಜವಾಡ (ವಿಜಯವಾಡ)ದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಧ್ವಜ ಕುರಿತು ಚರ್ಚೆ ನಡೆಯಿತು.

ಆಗ ವೆಂಕಯ್ಯ ತಮ್ಮ ಆಲೋಚನೆಗಳನ್ನು ಮಹಾತ್ಮಾ ಗಾಂಧಿ ಅವರ ಮುಂದಿರಿಸಿದರು. ಕೆಂಪು ಹಸಿರು ಬಣ್ಣದ ಧ್ವಜ ತಯಾರಿಸಿದರು. ಗಾಂಧೀಜಿ ಅದಕ್ಕೆ ಬಿಳಿ ಬಣ್ಣವೊಂದನ್ನು ಸೇರಿಸಿದರು. ಮತ್ತೊಬ್ಬ ಮಹನೀಯರು ಸಾಮಾನ್ಯ ಅಭಿವೃದ್ಧಿಯ ಸಂಕೇತವಾಗಿ ಚರಕಾ ಇಟ್ಟರೆ ಚೆನ್ನಾಗಿರುತ್ತದೆಂದರು. ಅದನ್ನು ಗಮನದಲ್ಲಿರಿಸಿಕೊಂಡು ಮತ್ತೊಂದು ಧ್ವಜ ತಯಾರಿಸಿದರು. ಕರಾಚಿ ಸಮಾವೇಶದಲ್ಲಿ ಆ ಧ್ವಜ ಅಧಿಕೃತವಾಗಿ ಅಂಗೀಕರಿಸಲಾಯಿತು. ಸಂವಿಧಾನ ರಚನಾ ಸಮಿತಿ ಸಣ್ಣ ಪುಟ್ಟ ಮಾರ್ಪಾಟುಗಳೊಂದಿಗೆ ಕಾಂಗ್ರೆಸ್ ಧ್ವಜವನ್ನು ರಾಷ್ಟ್ರಧ್ವಜವನ್ನಾಗಿ ಪರಿವರ್ತಿಸಲಾಯಿತು. ಅನಂತರ ಚರಕದ ಬದಲು ಅಶೋಕ ಚಕ್ರ ಹಾಕುವುದರ ಮೂಲಕ ದೇಶದಾದ್ಯಂತ ಧ್ವಜ ಹಾರಿಸಲಾಯಿತು.

# ಗಗನಚುಕ್ಕಿ ಮತ್ತು ಭರಚುಕ್ಕಿ



● ಎಸ್.ಎನ್. ಮೈನಾ
ತೃತೀಯ ಬಿ.ಎ. (ಎಚ್.ಇ.ಪಿ.)

ಚಾಮರಾಜನಗರ ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಗೆ ಸೇರಿದ್ದ ಶಿವನ ಸಮುದ್ರದ ಭರಚುಕ್ಕಿ ಹಾಗೂ ಗಗನಚುಕ್ಕಿ ಜಲಧಾರೆಗಳು ಧುಮ್ಮಿಕ್ಕಿ ಹರಿಯುವಾಗ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ.

ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗುವುದರಿಂದ ಈ ಜಲಧಾರೆಗಳು ಮೈ ಕೈ ತುಂಬಿಕೊಂಡು ವಯ್ಯಾರದ ನಗೆ ಬೀರುತ್ತವೆ.

ತಲಕಾವೇರಿಯಲ್ಲಿ ಜನ್ಮತಾಳುವ ಕಾವೇರಿ ನದಿ ಹಾಗೂ ಕೇರಳದ ವೈನಾಡಲ್ಲಿ ಜನ್ಮತಳೆದ ಕಬಿನಿ ಈ ಎರಡು ನದಿಗಳು ತಿ. ನರಸೀಪುರದ ತಿರುಮಕೂಡಲಿನಲ್ಲಿ ಸಂಗಮವಾಗಿ ಶಿವನ ಸಮುದ್ರದಲ್ಲಿ ವಿಶಾಲ ಬಂಡೆಯಲ್ಲಿ ಹರಡಿ ಜಲಧಾರೆಯಾಗಿ ಧುಮುಕುತ್ತವೆ. ಈ ಸಂದರ್ಭದಲ್ಲಿ ಕಾಣುವ ದೃಶ್ಯ ಮಾತ್ರ ಮನಮೋಹಕ. ಬಂಡೆಯ ಮೇಲೆ ಮುನ್ನೂರು ಅಡಿ ಕೆಳಗೆ ಧುಮುಕುವಾಗ ಒಡಲಾಳದಲ್ಲಿದ್ದ ಬೆಳ್ಳಿಯೆಲ್ಲಾ ಕರಗಿ ಹರಿಯುತ್ತಿದೆಯೇನೋ ಎಂಬಂತೆ ಭಾಸವಾಗುತ್ತದೆ.

ಇಂತಹ ದೃಶ್ಯವನ್ನು ನೋಡಲೆಂದೇ ಎಲ್ಲೆಡೆಯಿಂದ ಪ್ರವಾಸಿಗರು ಮುಗಿಬೀಳುತ್ತಾರೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಬೇರೆಡೆಗಳಲ್ಲಿ ಒಂದು ಸ್ಥಳದಲ್ಲಿ ಒಂದೇ ಜಲಧಾರೆ ನೋಡಲು ಸಾಧ್ಯ ಆದರೆ ಶಿವನ ಸಮುದ್ರದಲ್ಲಿ ಹಾಗಲ್ಲ ಒಂದೇ ಕಡೆ ಕೇವಲ ಐದು ಕಿಲೋ ಮೀಟರ್ ಅಂತರದಲ್ಲಿ ಎರಡು ಜಲಪಾತಗಳನ್ನು ನೋಡಲು ಸಾಧ್ಯ.

ಇಲ್ಲಿ ಎರಡು ಜಲಧಾರೆಗಳು ಸಮೀಪದಲ್ಲಿಯೇ ಇದ್ದರೂ ಭರಚುಕ್ಕಿ ಚಾಮರಾಜನಗರಕ್ಕೆ ಸೇರಿದರೆ ಗಗನಚುಕ್ಕಿ ಮಂಡ್ಯ ಜಿಲ್ಲೆಗೆ ಸೇರಿದೆ. ಹೀಗಾಗಿ ಇವುಗಳು ಅಷ್ಟೇನೂ ಅಭಿವೃದ್ಧಿಯಾಗಿಲ್ಲ. ನಿಸರ್ಗಸೃಷ್ಟಿಯ ಈ ಜಲಧಾರೆಗಳು ಬಹುಶಃ ವಿದೇಶದಲ್ಲಿದ್ದರೆ ಎಂತಹ ಮೆರಗು ಪಡೆಯುತ್ತಿತ್ತೋ ಏನೋ? ಆದರೆ ಇಲ್ಲಿ ಮಾತ್ರ ಅಭಿವೃದ್ಧಿ ಎನ್ನುವುದು ಕನಸಿನ ಮಾತಾಗಿ ಉಳಿದಿದೆ.

ಪ್ರವಾಸೋದ್ಯಮ ನಿಂತ ನೀರಾಗಿದೆ. ಚಾಮರಾಜ ನಗರಕ್ಕೆ ಸೇರುವ ಭರಚುಕ್ಕಿ ಸಂಪೂರ್ಣ ನಿರ್ಲಕ್ಷ್ಯಕ್ಕೊಳ ಗಾಗಿದೆ. ಪ್ರವಾಸೋದ್ಯಮ ಇಲಾಖೆ ಇಲ್ಲಿ ಯಾವುದೇ ಮೂಲಸೌಕರ್ಯ ಕಲ್ಪಿಸಿಲ್ಲ. ಪ್ರವಾಸಿಗರು ಜಲಧಾರೆಯನ್ನು ಒಂದೆಡೆ ನಿಂತು ನೋಡಲು ಸುರಕ್ಷಿತ ಸ್ಥಳವಿಲ್ಲ. ಜಲಧಾರೆಯ ಕೆಳಗೆ ಇಳಿದು ಹೋಗಲು ಮೆಟ್ಟಿಲುಗಳಿಲ್ಲ.

ಸುರಕ್ಷತೆಯ ಕೊರತೆಯಿಂದಾಗಿ ಇಲ್ಲಿ ಅನೇಕರು ಪ್ರಾಣ ಕಳೆದುಕೊಂಡ ನಿದರ್ಶನಗಳಿವೆ. ಇಲ್ಲಿ ಜಿಲ್ಲಾಡಳಿತದ ವತಿಯಿಂದ ಜಲಪಾತ ಉತ್ಸವ ಆಚರಿಸಲಾಗಿತ್ತು. ಆ ಸಂದರ್ಭದಲ್ಲಿ ಮೂಲ ಸೌಕರ್ಯ ಕಲ್ಪಿಸುವ ಭರವಸೆ ನೀಡಲಾಗಿತ್ತು. ಆದರೆ ಅದು ಭರವಸೆಯಾಗಿಯೇ ಉಳಿದಿದೆ.

ಇನ್ನೊಂದೆಡೆ ಮಂಡ್ಯ ಜಿಲ್ಲೆಗೆ ಸೇರಿದ ಗಗನ ಚುಕ್ಕಿ ಜಲಧಾರೆಯ ಅಭಿವೃದ್ಧಿಯತ್ತ ಮಂಡ್ಯ ಜಿಲ್ಲಾಡಳಿತ ಮುಂದಾಗಿದ್ದು ಪ್ರವಾಸಿಗರನ್ನು ಸೆಳೆಯಲು ಪ್ರತಿವರ್ಷ ಜಲಪಾತೋತ್ಸವ ನಡೆಸುತ್ತಿದೆ.

ಕಾವೇರಿ ನದಿ ತೀರದಲ್ಲಿರುವ ಇಲ್ಲಿನ ವೈಷ್ಣವ, ಶೈವ ಹಾಗೂ ಶಕ್ತಿದೇವತಗಳಿಗೆ ಪ್ರಾಚೀನವಾದ ಕಥೆಯು ಇದೆ.

ಜಗತ್ತಿನಲ್ಲಿಯೇ ಅಪರೂಪದ ಭೂಸೃಷ್ಟಿಯ ಅಚ್ಚರಿ, ಕಾವೇರಿಯ ಆರ್ಭಟ ಭರಚುಕ್ಕಿ ಜಲಪಾತ. ಇಲ್ಲಿ ಮುಸಲ್ಮಾನರ ಪವಿತ್ರ ಮತ್ತು ಧಾರ್ಮಿಕ ಪುಣ್ಯಕ್ಷೇತ್ರ ದರ್ಗಾ ಇದೆ. ಈ ಜಲಾಶಯ ಉಕ್ಕಿ ಹರಿಯುವ ನೀರಿನಿಂದ ರಮ್ಯ ಮನೋಹರವಾಗಿದೆ. ಈ ತಟದಿಂದ ನಿಂತು ನೋಡಿದರೆ ವಿಶ್ವವಿಖ್ಯಾತ ಏಷ್ಯಾ ಖಂಡದ ಪ್ರಪ್ರಥಮ ಜಲವಿದ್ಯುತ್ ಸ್ಥಾವರವಾದ ಬ್ಲಫ್‌ನ ಸುಂದರ ನೋಟ ಕಾಣಿಸುತ್ತದೆ. ಈ ದರ್ಗಾ ಹಿಂದೂ ಮತ್ತು ಮುಸಲ್ಮಾನರ ಐಕ್ಯತೆ ಸಂಕೇತವನ್ನು ಸೂಚಿಸುವ ಸ್ಥಳವಾಗಿದೆ. ಇಲ್ಲಿ ಸುಮಾರ 1 ಕಿ.ಮೀ. ಅಗಲವಾಗಿ ಮೈದಳೆದಿರುವ ಕಾವೇರಿ ಸುಮಾರು

75 ರಿಂದ 100 ಅಡಿಯವರಗೆ ದುಮ್ಮಿಕ್ಕುವಳು.

ಭರಚುಕ್ಕಿ ಮತ್ತು ಗಗನಚುಕ್ಕಿ ಜಲಪಾತ ವಿಶ್ವದ ಜಲಪಾತಗಳಲ್ಲಿ 83ನೇ ಸ್ಥಾನವನ್ನು ಪಡೆದಿವೆ.

ಶಿವನ ಸಮುದ್ರ ಪ್ರದೇಶದಲ್ಲಿ ಕಾವೇರಿನದಿಗೆ ಅಡ್ಡಲಾಗಿ 3 ಸೇತುವೆಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ವೆಸ್ಲಿ ಸೇತುವೆ ಹಳೆಯ ಕಾಲದ ಇಂಜಿನಿಯರ್ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

'ಇದು ನಮ್ಮ ಊರಿನ ಹಿರಿಮೆಯೂ ಆಗಿದೆ.'

ಕಥೆ

## ಮುಗ್ಧ ಮಹಿಳೆಯ ಕಥೆ



● **ಎಸ್. ಚಂದನ**
ಪ್ರಥಮ ಬಿ.ಕಾಂ.

ಒಂದು ಊರಿನಲ್ಲಿ ಒಬ್ಬ ಹೆಂಗಸು ಇದ್ದಳು. ಅವಳ ಹತ್ತಿರ ಒಂದು ಹಸು ಇತ್ತು. ಅ ಹಸು ಬಡಕಲು ಹಸು. ಒಂದು ದಿನಕ್ಕೆ 1 ಲೀಟರ್ ಹಾಲನ್ನು ಕೊಡುತ್ತಿತ್ತು. ಇದರಿಂದ ತನ್ನ ಜೀವನವನ್ನು ನಡೆಸುತ್ತಿದ್ದಳು. ಹೀಗೇ ಕಾಲಕಳೆದಂತೆ ಹಸು ಹಾಲನ್ನು ಕಡಿಮೆ ಕರೆಯುತ್ತಿತ್ತು. ಇದರಿಂದ ತನ್ನ ಜೀವನವನ್ನು ನಡೆಸಲು ಕಷ್ಟವಾಗುತ್ತಿತ್ತು. ಆಗ ಒಂದು ನಿರ್ಧಾರಕ್ಕೆ ಬಂದಳು. ಇದನ್ನು ಮಾರಿ ಬೇರೆ ಹಸುವನ್ನು ತರಲು ನಿರ್ಧರಿಸಿ ಸಂತೆಗೆ ಹೋದಳು. ಅವಳು ಹಸುವನ್ನು ಮಾರುವ ಸಂದರ್ಭ 'ಅಣ್ಣ ತಮ್ಮಂದಿರೇ, ಅಕ್ಕ ತಂಗಿಯರೇ ಇದು ಒಂದು ಬಡಕಲ ಹಸು ದಿನಕ್ಕೆ 1 ಲೀಟರ್ ಹಾಲನ್ನು ಕೊಡುವುದು ಕಷ್ಟ' ಎಂದು ಕೂಗಿ ಕೂಗಿ ಹೇಳುತ್ತಿದ್ದಳು.

ಅಲ್ಲಿಯೇ ಮುಂದೆ ಒಂದು ಚಹಾದ ಅಂಗಡಿಯಲ್ಲಿ ನಾಲ್ಕೈದು ಜನ ಚಹಾದ ಅಂಗಡಿಯಲ್ಲಿ ಕುಳಿತು ಆಕೆಯ ಮಾತನ್ನು ಕೇಳಿ ನಗುತ್ತಿದ್ದರು. ಅವಳನ್ನು ಟೀಕೆ ಮಾಡುತ್ತಿದ್ದರು. ಅಲ್ಲಿಂದ ಒಬ್ಬ ಬಂದು ಸಹೋದರಿಯೇ ನಿನ್ನ ಈ ಹಸುವನ್ನು ಮಾರಿಕೊಡಲೇ? ಎಂದು ಕೇಳಿದನು. ಅದಕ್ಕೆ ಅವಳು ಸರಿ ಎಂದಾಗ ಹಸುವನ್ನು ಒಡೆದುಕೊಂಡು ಮುಂದೆ ಬೇರೆ ಬೀದಿಗೆ ಹೋಗಿ ಅಲ್ಲಿನ ಜನಕ್ಕೆ 'ಅಣ್ಣ ತಮ್ಮಂದಿರೇ ಅಕ್ಕ ತಂಗಿಯರೇ ಇದು ಒಂದು ದಷ್ಟಪುಷ್ಟವಾದ ಹಸು. ಇದು ದಿನಕ್ಕೆ 5 ಲೀಟರ್ ಹಾಲನ್ನು ಕೊಡುತ್ತದೆ' ಎಂದಾಗ ಅವಳಿಗೆ ಆಶ್ಚರ್ಯವಾಗಿ ಇದನ್ನು ಯಾಕೆ ಮಾರಬೇಕು ಎಂದು ತನ್ನ ಹಸುವನ್ನು ಮತ್ತೆ ತನ್ನ ಮನೆಗೆ ಹೊಡೆದುಕೊಂಡು ಹೋಗಿಯೇ ಬಿಟ್ಟಳು.

**ಜ್ಞಾನದಿಂದಲೇ ಇಹವು ಜ್ಞಾನದಿಂದಲೇ ಪರವು**
**ಜ್ಞಾನವಿಲ್ಲದಿರೆ ಸಕಲವು ತನಗಿದ್ದು**
**ಹಾನಿಕಾಣಯ್ಯ ಸರ್ವಜ್ಞ**
**– ಸರ್ವಜ್ಞ**

# ಕಾವೇರಿ ನದಿ



● ಕೆ. ಜಗದಾಂಬ
ತೃತೀಯ ಬಿ.ಕಾಂ.

ಕಾವೇರಿ ನದಿಯು ಕರ್ನಾಟಕದ ಜೀವನದಿ. ದಕ್ಷಿಣ ಗಂಗೆ ಎಂದೇ ಪ್ರಸಿದ್ಧಿಯಾಗಿದೆ. ದಕ್ಷಿಣ ಭಾರತದ 3ನೇ ದೊಡ್ಡನದಿ, ಪೊನ್ನಿ ಎಂಬ ಹೆಸರಿನಿಂದ ಕಾವೇರಿನದಿಯನ್ನು ಕರೆಯುತ್ತಾರೆ. ಇಲ್ಲಿನ ಜನರಿಗೆ ಕಾವೇರಿ ನದಿಯು ಜೀವನಾಧಾರವಾಗಿದೆ, ಸಾಮಾಜಿಕ ಆರ್ಥಿಕವಾಗಿ ತುಂಬಾ ಸಹಕಾರಿಯಾಗಿದೆ.

ಕಾವೇರಿ ನದಿಯು ಪಶ್ಚಿಮ ಘಟ್ಟಗಳ ಬ್ರಹ್ಮಬೆಟ್ಟದಲ್ಲಿ ಕೊಡಗುಜಿಲ್ಲೆ ತಲಕಾವೇರಿ ಎಂಬ ಸ್ಥಳದಲ್ಲಿ ಉಗಮವಾಗುತ್ತದೆ. 1300 ಮೀ ಎತ್ತರದಿಂದ ಉಗಮವಾಗಿ ಧುಮುಕುತ್ತದೆ. ಕರ್ನಾಟಕ, ತಮಿಳುನಾಡಿನಲ್ಲಿ ಹೆಚ್ಚಳವಾಗಿ ಹರಿಯುತ್ತದೆ. ಕೇರಳದಲ್ಲಿ ಸ್ವಲ್ಪಭಾಗ ಹರಿಯುತ್ತದೆ.

ಕರ್ನಾಟಕದಲ್ಲಿ 320 ಕಿ.ಮೀ. ಹರಿಯು ತ್ತದೆ. 64 ಕಿ.ಮೀ. ಕರ್ನಾಟಕ ಮತ್ತು ತಮಿಳುನಾಡಿನ ಗಡಿರೇಖೆಯಲ್ಲಿ ಹರಿಯುತ್ತದೆ. ಪೂಂಪುಹಾರ್ (ಕಾವೇರಿ ಪಟ್ಟಣ) ಬಳಿ ಬಂಗಾಳಕೊಲ್ಲಿ ಸೇರುತ್ತದೆ. ಉಗಮದಿಂದ ಬಂಗಾಳಕೊಲ್ಲಿ ಸೇರುವರೆಗೆ ಒಟ್ಟು 805 ಕಿ.ಮೀ. ಉದ್ದ ಹರಿಯುತ್ತದೆ.

81,150 ಚ.ಕಿ.ಮಿ. ಜಲಾನಯನ ಪ್ರದೇಶ ಹೊಂದಿದ್ದು, ಈ ಕೆಳಗಿನಂತೆ ವಿಭಾಗವಾಗಿದೆ.

47,2% ಕರ್ನಾಟಕ, 54.2% ತಮಿಳುನಾಡು

3.6% ಕೇರಳ, ಪುದುಚೇರಿ 1% ಕ್ಕಿಂತ ಕಡಿಮೆ

ಕೊಡಗಿನಲ್ಲಿ ಉಗಮವಾದ ಕಾವೇರಿ ನದಿಯು ದಖನ್ ಪ್ರಸ್ಥಭೂಮಿಯ ದಕ್ಷಿಣಕ್ಕೆ, ಹರಿದುಕೊಂಡು ಬಂದು ಶ್ರೀರಂಗಪಟ್ಟಣದಲ್ಲಿ ಹರಿದು ಚುಂಚನಕಟ್ಟೆ ಮೂಲಕ ಮೈಸೂರಿಗೆ ಬರುತ್ತದೆ. ನಂತರ ಮೈಸೂರಿನ ಸಮೀಪ ಕೆ.ಆರ್.ಎಸ್. (ಕೃಷ್ಣರಾಜ ಸಾಗರ) ಅಣೆಕಟ್ಟೆ ನಿರ್ಮಾಣ ಮಾಡಿದ್ದಾರೆ. ಇದರ ನಿರ್ಮಾಣ ಅವಧಿ (1911 ರಿಂದ 1938) ಇದರ ಎತ್ತರ 130 ಅಡಿ, ನೀರಿನ ಸಾಮರ್ಥ್ಯ 124 ಅಡಿ ಇರುತ್ತದೆ. ನಂತರ ಟಿ. ನರಸೀಪುರದಲ್ಲಿ ತ್ರಿವೇಣಿ ಸಂಗಮದ ಮೂಲಕ (ಕಬಿನಿ, ಕಾವೇರಿ, ಸ್ಫಟಿಕ ಮೂರು ನದಿ ಸೇರುವ ತಾಣ) ಹರಿದು ಮುಂದೆ ಶಿವನಸಮುದ್ರದಲ್ಲಿ 98 ಮೀ. ಎತ್ತರದ ಭರಚುಕ್ಕಿ, ಗಗನಚುಕ್ಕಿ ಜಲಪಾತ ನಿರ್ಮಿಸಿದೆ. ಹಾಗೆಯೇ ಮುಂದೆ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಮೂಲಕ ಹರಿದು ಹೋಗುತ್ತದೆ. ಮುಂದೆ ಹೊಗೆನಕಲ್ ಜಲಪಾತ ನಿರ್ಮಿಸಿ, ಎರೋಡ್, ನಮಕಲ್, ಕರೂರ್, ತಿರುಚೆರಾಪಲ್ಲಿ (ಶ್ರೀರಂಗ ಅಣೆಕಟ್ಟು) ತಂಜಾವೂರ್ ಅಣೆಕಟ್ಟನ್ನು ನಿರ್ಮಿಸಿದ್ದಾರೆ. ಅಂತ್ಯದಲ್ಲಿ ಬಂಗಾಳ ಕೊಲ್ಲಿ ಸೇರುತ್ತದೆ.

ಕಾವೇರಿನದಿಯು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪೂರ್ವಕ್ಕೆ ಹರಿಯುತ್ತದೆ. ಹೇಮಾವತಿ, ಶಿಂಷಾ ಅರ್ಕಾವತಿ, ಲೋಕಪಾವನಿ ಈ ನದಿಗಳು ಕಾವೇರಿನದಿಯ ಎಡೆಗಡೆಗೆ ಹರಿಯುತ್ತವೆ. ಆದ್ದರಿಂದ ಇವನ್ನು ಎಡದಂಡೆನದಿಗಳು ಎನ್ನುವರು. ಬಲದಂಡೆ ನದಿಗಳು ಕಬಿನಿ, ಸುವರ್ಣಾವತಿ ಲಕ್ಷ್ಮಣತೀರ್ಥ. ತಮಿಳುನಾಡಿನಲ್ಲೂ ಭವಾನಿ ಮೊದಲಾದ ನದಿಗಳು ಉಪನದಿಗಳಾಗಿವೆ.

ಕಾವೇರಿನದಿಯ ಜಲವಿವಾದ ಎಂದಾಗ ನೆನಪಾಗುವುದು ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು. ಮೊದಲಿಗೆ 1890ರಲ್ಲಿ ನೀರಾವರಿಯೋಜನೆ ಅನುಷ್ಠಾನ ಸಭೆ ನಡೆಯಿತು. 1892ರಲ್ಲಿ ಮೈಸೂರು–ಮದ್ರಾಸ್ ಪ್ರಾಂತ್ಯದಲ್ಲಿ ಬ್ರಿಟಿಷರ ಆಳ್ವಿಕೆ ನಡೆಯುತ್ತಿತ್ತು. 1910ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಅಂದಿನ ಕಾಲದ ಕ್ಯಾಪ್ಟನ್ ಡೇವ್ಸ್ ಎಂಬ ಇಂಜಿನಿಯರ್ ಸಲಹೆ ಮೇರೆಗೆ 4105 ಟಿ.ಎಂ.ಸಿ. ಸಾಮರ್ಥ್ಯದ ಅಣೆಕಟ್ಟನ್ನು ಕನ್ನಂಬಾಡಿ ಗ್ರಾಮದಲ್ಲಿ ನಿರ್ಮಿಸಲು ಯೋಜನೆ ರೂಪಿಸಿದರು. ಆದರೆ ಮದ್ರಾಸ್ ಇದನ್ನು ಒಪ್ಪದೆ ಮೆಟ್ಟೂರಿನಲ್ಲಿ 80 ಟಿ.ಎಂ.ಸಿ. ಸಾಮರ್ಥ್ಯದ ಅಣೆಕಟ್ಟಿನ ಯೋಜನೆ ರೂಪಿಸಿ, ನಿರ್ಮಾಣವನ್ನೂ ಮಾಡಿದೆ.

# ಮಂಗಳಮುಖಿಯರ ಜೀವನ ಶೈಲಿ



● ಎನ್. ರಂಜಿತ
ಪ್ರಥಮ ಬಿ.ಬಿ.ಎ.

ಮಂಗಳಮುಖಿಯರು ಎಂದ ಕೂಡಲೇ ಕೀಳು ಎಂಬ ಭಾವನೆ ಬರುತ್ತದೆ. ಅವರು ಯಾವುದಕ್ಕೂ ಸೇರಿಲ್ಲ ಎಂಬ ಭಾವನೆ ಎಲ್ಲರಲ್ಲು ಮೂಡುತ್ತದೆ. ಆದರೆ ಅದು ತಪ್ಪು ಕಲ್ಪನೆಯಷ್ಟೆ. ಅವರು ಕೂಡ ನಮ್ಮ ನಿಮ್ಮಂತೆಯೇ ಮನುಷ್ಯರೆ, ಅವರು ಹೊಟ್ಟೆಗೆ ಅನ್ನಾನೆ ತಿನ್ನೋದು ಅಲ್ವ. ಇವರು ಹೇಗೆ ಈ ರೀತಿಯಾಗಿ ಮಂಗಳಮುಖಿಯರು ಆಗುತ್ತಾರೆ ಎಂಬ ಪ್ರಶ್ನೆಯು ಎಲ್ಲರಲ್ಲೂ ಇದ್ದೇ ಇರುತ್ತದೆ. ಶ್ರೀರಾಮನಿಂದ ಈ ಮಂಗಳಮುಖಿ ಎಂಬ ಹೆಸರನ್ನು ಮೊಟ್ಟಮೊದಲು ಬಳಸಲಾಯಿತು. ಇವರಿಗೆ ಉತ್ತರ ಭಾರತದಲ್ಲಿ ಮಹತ್ವವಾದ ಗೌರವವಿದೆ. ಇವರು ಗೃಹಪ್ರವೇಶ, ಮುಂತಾದ ಶುಭಕಾರ್ಯದಲ್ಲಿ ಇದ್ದು, ಆಶೀರ್ವದಿಸಿ, ಹರಸುತ್ತಾರೆ.

ಮಂಗಳಮುಖಿಯರು ಹುಟ್ಟಲ್ಲೇ ಅವರು ಈ ರೀತಿಯಾಗುವುದಿಲ್ಲ. ಇವರ ದೇಹದಲ್ಲಿ ಆಗುವಂತಹ ಕೇಲವು ಭಾವನೆಗಳ ಪಲ್ಲಟದಿಂದ ಈ ಸ್ಥಿತಿಗೆ ಬರುತ್ತಾರೆ. ಅದು ಹೇಗೆಂದರೆ ಇವರಿಗೆ ಗಂಡಾಗಿ ಹುಟ್ಟಿ ಹೆಣ್ಣಿನ ಭಾವನೆ ಬರುತ್ತದೆ. ಈ ರೀತಿಯಾಗಿ ಬಂದರೆ ಇಂಥವರನ್ನು ಮಂಗಳಮುಖಿಯರನ್ನಾಗಿ ಮಾಡಲು ಇತರೆ ಮಂಗಳಮುಖಿಯರು ತಮ್ಮ ಸಮುದಾಯಕ್ಕೆ ಸೇರಿಸಿಕೊಂಡು ಅವರಿಗೆ ಶಸ್ತ್ರಚಿಕಿತ್ಸೆ ಮಾಡಿಸಲಾಗುತ್ತದೆ. ಶಸ್ತ್ರಚಿಕಿತ್ಸೆ ಎಂದರೆ ಗಂಡಿನ ಗುಪ್ತಾಂಗವನ್ನು ಚಿಕಿತ್ಸೆ ಮಾಡುವುದಾಗಿದೆ. ಇವರನ್ನು ಸಟ್ಲಾ ಎನ್ನುತ್ತಾರೆ. ಈ ರೀತಿಯ ಶಸ್ತ್ರ ಚಿಕಿತ್ಸೆ ನಂತರ ಅವರು ಹೆಣ್ಣಿನ ಉಡುಪು ಧರಿಸಿ ಅವರ ಆಚಾರ – ವಿಚಾರವನ್ನು ಪಾಲಿಸಬೇಕಾಗಿರುತ್ತದೆ. ಈ ರೀತಿಯಾಗಿ ಮೊದಲು ಗಂಡಾಗಿ ಹುಟ್ಟಿ ನಂತರ ಅವರು ಮಂಗಳಮುಖಿ ಯಾಗುತ್ತಾರೆ. ಅವರಿಗೆ ಅವರದೆ ಆದಂತಹ ನೀತಿ–ನಿಯಮ ಕಟ್ಟಳೆಗಳು ಇರುತ್ತವೆ. ಈ ರೀತಿಯ ದೇಹ ಬದಲಾವಣೆಯ ಶಸ್ತ್ರ ಚಿಕಿತ್ಸೆಯಿಂದ ಅವರು ಮಂಗಳಮುಖಿಯಾಗುತ್ತಾರೆ.

ಇವರಿಗೆ ಚಪ್ಪಲಿ (ಪಾದರಕ್ಷೆ) ವಿಷಯವನ್ನು ಊಟದ ಸಮಯದಲ್ಲಿ ಮಾತನಾಡಬಾರದು ಹೀಗೆ ಮಾಡಿದರೆ ಊಟದ ಮಧ್ಯೆ ಎದ್ದು ಹೋಗುತ್ತಾರೆ. ಮಂಗಳ ಮುಖಿಯರಿಗೆ ಅವರದೇ ಆದ ಗುಂಪು, ಸಮುದಾಯ, ಪದ್ಧತಿ, ಪಗಂಡಗಳಿರುತ್ತವೆ.

ತಮಿಳುನಾಡಿನಲ್ಲಿ ಪ್ರತಿವರ್ಷ ಏಪ್ರಿಲ್–ಮೇ ತಿಂಗಳಲ್ಲಿ ವಿಲ್ಲಾಪುರಂ ಜಿಲ್ಲೆಯಲ್ಲಿ ಉಳಂಡೂರ ಪೇಡೆ ತಾಲ್ಲೂಕಿನ ಕುವಗಂ ಗ್ರಾಮದಲ್ಲಿ ಹಬ್ಬ ನಡೆಯುತ್ತದೆ. ಅದು ಮುಂಗಳಮುಖಿಯರಿಗೆ ಇರುವಂತಹದು. ಇದರಲ್ಲಿ ಒಂದು 'ವಿಶ್ವಸುಂದರಿ' ಸ್ಪರ್ಧೆ ನಡೆಯುತ್ತದೆ. ಈ ಸ್ಪರ್ಧೆಯ ಸಂದರ್ಭದಲ್ಲಿ ಹೆಚ್.ಐ.ವಿ. ಹಾಗೂ ಏಡ್ಸ್‌ಗೆ ಅರಿವನ್ನು ಮೂಡಿಸುತ್ತಾರೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ನೀಡುತ್ತಾರೆ.

ಇವರು ಸತ್ತ ನಂತರ ಇವರ ಅಂತ್ಯಕ್ರಿಯೆಯನ್ನು ರಾತ್ರಿವೇಳೆಯಲ್ಲಿ ಮಾಡುತ್ತಾರೆ. ಏಕೆಂದರೆ ಈ ಅಂತ್ಯಕ್ರಿಯೆಯಲ್ಲಿ ಇವರ ಸಮುದಾಯ ಬಿಟ್ಟು ಬೇರೆ ಯಾರು ಕೂಡ ಪಾಲ್ಗೊಳ್ಳುವುದಿಲ್ಲ, ಹಾಗೂ ಯಾರು ಕೂಡ ಇವರ ಶವವನ್ನು ನೋಡಬಾರದೆಂದು. ಬೇರೆ ಯಾರೂ ಕಣ್ಣೀರು ಹಾಕವುದಿಲ್ಲ. ಏಕೆಂದರೆ ಈ ನರಕ ಜೀವನದಿಂದ ಮುಕ್ತಿಸಿಕ್ಕಿತೆಂದು. ಹಿಂದುಧರ್ಮ ಪಾಲಿಸುವ ಇವರು ಶವಕ್ಕೆ ಚಪ್ಪಲಿಯಿಂದ ಹೊಡೆಯುತ್ತಾರೆ. ಏಕೆಂದರೆ ಎಲ್ಲಾ ಶಾಪ ಕಳೆಯಲಿ ಅಂತ ಶವವನ್ನು ಸುಡುವುದಿಲ್ಲ ಬದಲಾಗಿ ಹೂಳುತ್ತಾರೆ.

ಇವರು ಶಿವಶಕ್ತಿಯ ಸ್ವರೂಪವಾಗಿದ್ದಾರೆ ಎಂದು ನಂಬಿ ಇವರಿಂದ 1 ರೂಪಾಯಿಯನ್ನು ಸೆರಗಿನಿಂದ ದೃಷ್ಟಿ ತೆಗೆದು, ಕಾಸನ್ನು ಬಾಯಿಂದ ಕಚ್ಚಿ, ಅವರ ಕೈಕಂಕಣಕ್ಕೆ ಮುಟ್ಟಿ ನಂತರ ಪಡೆದವರ ಹಣಕಾಸಿನ ಸ್ಥಿತಿ ಉತ್ತಮವಾಗಿರುತ್ತದೆ. ಇದರ ಜೊತೆ 5 ಅಕ್ಕಿಕಾಳನ್ನು ಇಟ್ಟುಕೊಳ್ಳಬೇಕು. ಇವರಿಗೂ

ಕೂಡ ಮದುವೆಯಾಗುತ್ತದೆ. ಅದು ಒಂದು ದಿನಕ್ಕೆ ಮಾತ್ರ ಸೀಮಿತವಾದುದ್ದು. ಒಂದು ದೇವಸ್ಥಾನದಲ್ಲಿ ಮಡಿಯಿಂದ ಹೋಗಿ ದೇವಸ್ಥಾನದ ಪೂಜಾರಿ ಕೈಯಿಂದ ತಾಳಿ ಕಟ್ಟಿಸಿಕೊಂಡು, ನಂತರ ಗಂಡ ಸತ್ತಂತೆ ತಾಳಿ, ಕುಂಕುಮ ಹೂ ಎಲ್ಲವನ್ನೂ ತೆಗೆದು ತಮ್ಮ ತಮ್ಮ ಸಮುದಾಯಕ್ಕೆ ಹೋಗುತ್ತಾರೆ. ಇದೇ ಇವರ ನಿಜವಾದ ಬದುಕು ಪ್ರಸ್ತುತ ಸಂಗತಿಯಾಗಿದೆ.

## ಸ್ನೇಹ (ಗೆಳೆತನ)

ಗೆಳೆತನ ಹರಿದು ಹೋಗೋ ಹಾಳೆಯಲ್ಲ,
ಇದು ಮರೆಯಲಾಗದ ಬರಹ.
ಹನಿ ನೀರಿಗೆ ಅಳಿಸಿ ಹೋಗೋ ಅಕ್ಕರವಲ್ಲ,
ಬದಲಾಗಿ ಎಂದಿಗೂ ಮರೆಯಲಾಗದ ಬಿಂಬ.
ರಾತ್ರಿ ಕಂಡು ಬೆಳ್ಳಗೆ ಮರೆತು ಹೋಗೊ ಕನಸಲ್ಲ,
ಮರೆಯಲಾಗದ ನೆನಪು ಇದು.
ಗೆಳೆತನದ ಸಿಹಿ ಹಾರೋ ಹಕ್ಕಿಯಂತೆ
ಎಲ್ಲಾ ಕಡೆಯಲ್ಲೂ ಹಂಚಿಕೊಳ್ಳುವ ಪವಿತ್ರವಾದ
ಒಂದು ಸಂಬಂಧವೇ ಸ್ನೇಹ, ಗೆಳೆತನ.

## ಹೆಣ್ಣು

ಸಂಸಾರದ ಗುಟ್ಟನ್ನು
ಮುಚ್ಚಿಟ್ಟುಕೊಳ್ಳುವ ಹೆಣ್ಣು
ಖಂಡಿತವಾಗಿಯೂ ಗೆಲ್ಲುತ್ತಾಳೆ
ಗಂಡನ ಮನೆಯಲ್ಲಿ ಸಾಸಿವೆ
ಕಾಳುಬಿದ್ದರೂ ತಾಯಿಯಲ್ಲಿ
ಹೇಳುವ ಹೆಣ್ಣು ಯಾವತ್ತಿಗೂ
ಗೆಲ್ಲಲೂ ಸಾಧ್ಯವಿಲ್ಲ.

## ತಾಳೆಯಾಗದ ತಾಳಿ

ಆತ ಕಟ್ಟಿದ ತಾಳಿ
ನನಗೆ ತಾಳೆಯಾಗಲಿಲ್ಲ!
ಖಾಲಿ ಹಾಳೆಯ ಜೀವನ
ಹಾಯಿದೋಣಿಯ ಬದುಕು!
ಮಾತು ಕಡಿಮೆ
ದಿನವೂ ದುಡಿಮೆ!
ಕೈತೊಳೆಯಲು ದಿನವೂ ಕಣ್ಣೀರು
ಕನಸಾಯಿತು ಸುಖದ ಪನ್ನೀರು!
ಗಂಡನೆಂಬುವನು ಭಂಡನಾಗಿ
ದಂಡವಾಗಿದೆ ನನ್ನ ಬಾಳು!
ಕೇಳುವವರಿಲ್ಲ ಯಾರೂ
ಈಗ ನನ್ನ ಗೋಳು!
ಒಳ್ಳೆ ಹುದ್ದೆ, ಸುಖದ ನಿದ್ದೆ ಎಂದು
ಹೆತ್ತವರ ಆಸೆಯಲ್ಲಿ ನಾ ಬಿದ್ದೆ!
ಕೈಹಿಡಿದವ ಕೈಕೊಟ್ಟಾಗ
ಸಂತೈಸಲಿಲ್ಲ ನನ್ನವರು ಯಾರು
ಹೃದಯದ ಆಸೆ, ಮನದ ಕನಸು
ಎಲ್ಲವೂ ಆಗಿತ್ತು ಚೂರು
ತಾಳೆಯಾಗದ ತಾಳಿ.

● **ಎನ್. ರಂಜಿತ**
ಪ್ರಥಮ ಬಿ.ಬಿ.ಎ.

**ಇದ್ದಲ್ಲಿ ಸಲುವ ಹೋಗಿದ್ದಲ್ಲಿಯೂ ಸಲುವ**
**ವಿದ್ಯೆಯನ್ನು ಬಲ್ಲ ಬಡವನಾ ಹಿರಿಯ**
**ಮೇಲಿರಲು ಸಲುವ ಸರ್ವಜ್ಞ**
**– ಸರ್ವಜ್ಞ**

# ಕಳ್ಳನಾಗಿದ್ದ ಪಂಡಿತ ಬ್ರಾಹ್ಮಣ



● ಜೆ. ಕೃಪಾ
ತೃತೀಯ ಬಿ.ಬಿ.ಎ.

ಸುವರ್ಣಪುರಿ ಎಂಬ ನಗರದಲ್ಲಿ ಕಪಿಂಜಲ ಎಂಬ ಬ್ರಾಹ್ಮಣನಿದ್ದ. ತುಂಬಾ ವಿದ್ವಾಂಸ ಪ್ರಕಂಡ ಪಂಡಿತ. ಆದರೆ ಯಾವ ಜನ್ಮದ ಪ್ರಾರಬ್ಧ ಕರ್ಮವೋ ಕಳ್ಳನಾಗಿದ್ದ. ಚೋರ ವಿದ್ಯೆಯಲ್ಲೂ ಪಾರಂಗತನಾಗಿದ್ದ.

ಒಂದು ಬಾರಿ ಸುವರ್ಣಪುರಿಗೆ ಪರ ಊರಿನಿಂದ ನಾಲ್ವರು ಬ್ರಾಹ್ಮಣರು ಬಂದರು. ಸುವರ್ಣಪುರಿ ಹೆಸರಿಗೆ ತಕ್ಕಂತೆ ಚಿನ್ನ, ಬೆಳ್ಳಿ ಒಡವೆಗಳ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿತ್ತು. ಆ ನಾಲ್ವರು ಬ್ರಾಹ್ಮಣರು ಒಡೆವೆಗಳ ವ್ಯಾಪಾರಕ್ಕೆ ಬಂದಿದ್ದರು. ತಮಗೆ ಬೇಕಾದ ಒಡವೆಗಳನ್ನು ಕೊಂಡುಕೊಳ್ಳ ತೊಡಗಿದರು. ಇವರು ಕಳ್ಳ ಬ್ರಾಹ್ಮಣನ ದೃಷ್ಟಿಗೆ ಬಿದ್ದರು ನಾಲ್ವರೂ ಬ್ರಾಹ್ಮಣರಲ್ಲಿ ಅಪಾರ ಹಣ ಇದೆ ಎಂಬ ವಿಚಾರ ಕಳ್ಳ ಬ್ರಾಹ್ಮಣ ಗ್ರಹಿಸಿದ. ಹೇಗಾದರೂ ಧನಾಪಹರಣ ಮಾಡಲು ತುಂಬಾ ಯೋಚಿಸಿದ. ಕಡೆಗೆ ಅವರ ಸ್ನೇಹವನ್ನು ಗಳಿಸುವುದೊಂದೇ ಸುಲಭದ ಮಾರ್ಗ ಎಂದು ಊಹಿಸಿದ.

ಅವರ ಬಳಿ ಬಂದು ಹಲಕೆಲವು ಸಂಸ್ಕೃತ ಸುಭಾಷಿತಗಳನ್ನು ಸಮಯುಕ್ಕೆ ತಕ್ಕಂತೆ ಅರ್ಥ ವಿವರಣೆಯೊಂದಿಗೆ ವರ್ಣಿಸಿದ. ಬ್ರಾಹ್ಮಣರು ಈ ಬ್ರಾಹ್ಮಣನ ವಿದ್ವತ್ ಪ್ರತಿಭೆಗೆ ಮಾರುಹೋದರು. ಅವನ ಸ್ನೇಹಿತರಾದರು. ಕಳ್ಳ ಬ್ರಾಹ್ಮಣ ದಿನವೂ ಅವರೊಂದಿಗೆ ಇರತೊಡಗಿದ. ಪ್ರೀತಿ – ವಿಶ್ವಾಸವನ್ನು ಗಳಿಸಿ ಅವರ ಅಚ್ಚು ಮೆಚ್ಚಿನವನಾದ.

ಬ್ರಾಹ್ಮಣರು ಬಂದ ಕಾರ್ಯ ಮುಗಿಯಿತು. ತಾವು ಕೊಂಡ ಬೆಲೆ ಬಾಳುವ ಒಡವೆಗಳನ್ನೆಲ್ಲಾ ಕಳ್ಳ ಬ್ರಾಹ್ಮಣನ ಎದುರಿಗೆ ತುಂಬಿ ಭದ್ರಪಡಿಸಿದರು. ಕಳ್ಳ ಬ್ರಾಹ್ಮಣ ಯೋಚಿಸಿದ. ಇವರ ಒಡವೆಗಳನ್ನು ಈಗಲೇ ದೋಚಿದರೆ, ಸುಲಭವಾಗಿ ನಾನೇ ಸಿಕ್ಕಿ ಹಾಕಿಕೊಳ್ಳುತ್ತೇನೆ. ಮಾರ್ಗ ಮಧ್ಯದಲ್ಲಿ ವಂಚಿಸಿ, ಸಮಯ ಸಾಧಿಸಿ, ಒಡವೆಗಳನ್ನು ಅಪಹರಿಸಿಬಿಡಬೇಕು.

ನಾಲ್ವರು ಬ್ರಾಹ್ಮಣರು ತಮ್ಮ ಊರಿಗೆ ಹಿಂದಿರುಗಲು ಸಿದ್ದರಾದರು. ಕಳ್ಳ ಬ್ರಾಹ್ಮಣನ ಮುಖ ಸಪ್ಪೆ ಆಗಿರುವುದನ್ನು ಕಂಡು, ಕೇಳಿದರು. "ಏಕೆ? ನಮ್ಮೆಲ್ಲರನ್ನೂ ಅಗಲಿರಲು ದುಃಖ ಆಗುತ್ತಿದೆಯಾ? ನಿನಗೆ ಯಾರೂ ದಿಕ್ಕಿಲ್ಲದಿದ್ದರೆ ನಮ್ಮೊಂದಿಗೆ ಬಂದುಬಿಡು. ನಾವೇ ಉದರ ಪೋಷಣೆಯ ಹೊರೆ ಹೊರುತ್ತೇವೆ."

ಕಳ್ಳ ಬ್ರಾಹ್ಮಣ ಸಂತೋಷಗೊಂಡವನಂತೆ ಮುಖಭಾವ ತೋರ್ಪಡಿಸುತ್ತಾ. ಅವರೊಂದಿಗೆ ಹೊರಟ. ಮಾರ್ಗ ಮಧ್ಯದಲ್ಲಿ ಒಂದು ಕಾಡು, ಅಲ್ಲೊಂದು ದರೋಡಕೋರರ ಗುಂಪು ಬರುತ್ತಿತ್ತು. ಆಯಾಸ ಪರಿಹಾರಕ್ಕಾಗಿ ಒಂದು ದೊಡ್ಡ ಆಲದಮರದ ನೆರಳಿನಲ್ಲಿ ಅವರೆಲ್ಲರೂ ಕುಳಿತರು. ಮರದ ಮೇಲೆ ಒಂದು ಮಾತಾಡುವ ಕಾಗೆ ಇತ್ತು. ಅದು ದರೋಡೆಕೋರರಿಗೆ ಹೇಳಿತು – "ದರೋಡೆಕೋರರೇ ಅಲ್ಲಿ ನೋಡಿ ದೂರದಲ್ಲಿ ಬ್ರಾಹ್ಮಣರು ಬರುತ್ತಿದ್ದಾರೆ, ಅವರ ಬಳಿ ಆಪಾರ ಐಶ್ವರ್ಯ ಇದೆ."

ಕೂಡಲೇ ದರೋಡೆಕೋರರು ಎದ್ದು ನಿಂತರು. ಕಾರಣ ಕಾಗೆಗಳ ಮಾತು ಎಂದೂ ಅವರಿಗೆ ಸುಳ್ಳಾಗಿರಲಿಲ್ಲ. ಬ್ರಾಹ್ಮಣರನ್ನು ಥಳಿಸತೊಡಗಿದರು. ಅವರು ಉಟ್ಟಿದ್ದ ಪಂಚೆಯನ್ನು ಕಳಚಿ ಶೋಧಿಸತೊಡಗಿದರು. ಆದರೆ ಅವರ ಬಳಿ ಏನೂ ಇರಲಿಲ್ಲ. "ನಿಜ ಹೇಳಿ, ಹಣವನ್ನು ಎಲ್ಲಿ ಹುದುಗಿಸಿಟ್ಟು ಕೊಂಡಿದ್ದೀರಿ ಹೇಳದಿದ್ದರೆ ನಿಮ್ಮ ಚರ್ಮಸುಲಿಯುತ್ತೇವೆ, ಚಿತ್ರ ಹಿಂಸೆಗೆ ಗುರಿಪಡಿಸುತ್ತೇವೆ." ಅವರ ಮಾತುಗಳನ್ನು ಕೇಳುತ್ತಿದ್ದಂತೆ ಕಳ್ಳ ಬ್ರಾಹ್ಮಣನಿಗೆ ತುಂಬಾ ಕನಿಕರ ಮೂಡಿತು, ಈ ಡಕಾಯಿತರು ಕ್ರೂರಿಗಳು, ಆದರೂ ಆಡಿದ ಮಾತಿನಂತೆ ನಡೆಯುವವರು. ಇವರು ಈ ನಾಲ್ವರು ಬ್ರಾಹ್ಮಣರನ್ನು ಕೊಂದ ನಂತರ ನನ್ನನ್ನು ಉಳಿಸುವರೆಂಬ ಭರವಸೆಯಾದರೂ ಏನು? ಈ

ಬ್ರಾಹ್ಮಣರಿಗೆ ಹೆಂಡತಿ ಮಕ್ಕಳಿರಬಹುದು. ನನ್ನಂತೆ ಅನಾಥರೇನಲ್ಲ. ನನ್ನ ಪ್ರಾಣವನ್ನಾದರೂ ಕೊಟ್ಟು ಇವರನ್ನು ಏಕೆ ಬದುಕಿಸಬಾರದು? ದೂರದಿಂದಲೇ ಇವರು ಡಕಾಯಿತರಿಗೆ ಗೊತ್ತಿದ್ದಂತಿಲ್ಲ ಎಂದು ಯೋಚಿಸುತ್ತಾ ಅವನೇ ಸ್ವ–ಇಚ್ಛೆಯಿಂದ ಅವರ ಮುಂದೆ ನಿಂತು ಹೇಳಿದ "ಪಾಪಿಗಳೇ, ವೃಥಾ ನಮ್ಮನ್ನು ಈ ರೀತಿ ಚಿತ್ರಹಿಂಸೆಗೆ ಏಕೆ ಗುರಿಪಡಿಸುತ್ತಿದ್ದೀರಿ? ನಮ್ಮಲ್ಲಿ ಯಾರ ಬಳಿಯಲ್ಲಿಯೂ ಯಾವ ಹಣ ಇಲ್ಲ. ನಾವು ಭಿಕ್ಷಾಟನೆಯಿಂದ ಜೀವಿಸುವ ಬ್ರಾಹ್ಮಣರು. ಬೇಕಿದ್ದರೆ ನನ್ನನ್ನು ಪರೀಕ್ಷಿಸಿ, ನನ್ನಲ್ಲಿ ಏನೂ ಹಣ ದೊರೆಯದಿದ್ದರೆ ಇವರನ್ನು ಬಿಟ್ಟುಬಿಡಿ."

ದರೋಡೆಕೋರರಿಗೆ ಇವರು ಹಣವನ್ನು ತೊಡೆಯಲ್ಲೇನಾದರೂ ಹುದುಗಿಸಿಟ್ಟುಕೊಂಡಿರಬಹುದಾ? ಎಂಬ ದುರಾಲೋಚನೆ ಮೂಡಿತು. ಕಳ್ಳ ಬ್ರಾಹ್ಮಣನ ಚರ್ಮವನ್ನು ಜೀವಂತವಾಗಿಯೇ ಸುಲಿದರು. ತೊಡೆಯನ್ನು ತಮ್ಮ ಹರಿತದ ಚಾಕುವಿನಿಂದ ಸೀಳಿ, ಶೋಧಿಸಿದರು, ರಕ್ತ ಹರಿದು, ಕಳ್ಳ ಬ್ರಾಹ್ಮಣ ಸತ್ತುಬಿದ್ದ.

"ಪಾಪ, ಇವರ ಬಳಿ ಏನೂ ಇದ್ದಂತಿಲ್ಲ. ವೃಥಾಕೊಂದೆವು ಎಂದು ಪೇಚಾಡುತ್ತಾ ಹೊರಟು ಹೋದರು. ಅವರು ತುಂಬಾ ದೂರ ಹೋದನಂತರ ಉಳಿದ ನಾಲ್ವರು ಬ್ರಾಹ್ಮಣರು ತಮ್ಮ ಗೆಳೆಯನ ತ್ಯಾಗದ ಬಗ್ಗೆ ಹೊಗಳುತ್ತಾ ಅವನ ಸಾವಿನ ಬಗ್ಗೆ ಮರುಗುತ್ತಾ ಮೊದೆಯ ಬಳಿಗೆ ಬಂದರು. ಒಡವೆಗಳಿದ್ದ ಪೆಟ್ಟಿಗೆಗಳೊಂದಿಗೆ ತಮ್ಮ ತಮ್ಮ ಮನೆಗಳಿಗೆ ಮರಳಿದರು.

## ಅಬ್ದುಲ್ ಕಲಾಂರವರ ಪ್ರಸಿದ್ಧ ಬೋಧನೆಗಳು

*ಸಂಗ್ರಹ* ● **ಬಿ.ಎಸ್. ಪೂಜಾ**
ತೃತೀಯ ಬಿ.ಎ. (ಹೆಚ್.ಇ.ಪಿ.)

* ಜ್ಞಾನ ಎಂಬುದು ಎಂದಿಗೂ ನಿಂತ ನೀರಾಗಬಾರದು. ಸದಾ ಹೆಚ್ಚುತ್ತಲೇ ಇರಬೇಕು. ಇದು ನಿಮ್ಮ ವೈಯಕ್ತಿಕ ಸ್ವಾತಂತ್ರ್ಯ ಪಡೆಯಲು ಬೇಕಾದ ಪ್ರಮುಖ ಅಸ್ತ್ರ.
* ಮನುಷ್ಯನ ಜೀವನದಲ್ಲಿ ಕಷ್ಟಗಳು ಬರುತ್ತವೆ, ಏಕೆಂದರೆ ಅವು ಅವರು ಯಶಸ್ಸನ್ನು ಆನಂದಿಸಲು ಅವಶ್ಯಕ.
* ನಿದ್ದೆ ಮಾಡುವಾಗ ಬರುವುದು ಕನಸಲ್ಲ, ನಿದ್ದೆ ಮಾಡಲು ಬಿಡದಿರುವುದು ನಿಜವಾದ ಕನಸು.
* ನಾವೆಲ್ಲರೂ ಸಮಾನ ಪ್ರತಿಭೆಯನ್ನು ಹೊಂದಿಲ್ಲ. ಆದರೆ ನಮ್ಮ ಎಲ್ಲ ಪ್ರತಿಭೆಗಳನ್ನು ಅಭಿವೃದ್ಧಿಪಡಿಸಲು ಸಮಾನ ಅವಕಾಶವಿದೆ.
* ಒಬ್ಬ ವಿದ್ಯಾರ್ಥಿಯ ಅತ್ಯಂತ ಪ್ರಮುಖ ಗುಣಲಕ್ಷಣವೆಂದರೆ ಪ್ರಶ್ನಿಸುವುದು ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳುವಂತಾಗಬೇಕು.
* ನಿಮ್ಮ ಜೀವನದಲ್ಲಿ ಏರಿಳಿತಗಳು ಏನೇ ಇದ್ದರೂ ಆಲೋಚನೆ ನಿಮ್ಮ ಪ್ರಧಾನ ಆಸ್ತಿಯಾಗಿರಬೇಕು.
* ಯಾರಾನ್ನಾದರೂ ಸೋಲಿಸಲು ತುಂಬಾ ಸುಲಭ. ಆದರೆ ಯಾರನ್ನಾದರೂ ಗೆಲ್ಲುವುದು ಬಹಳ ಕಷ್ಟ.
* ನಿಮ್ಮ ಕನಸುಗಳು ನಿಜವಾಗಲು ಮೊದಲು ನೀವು ಕನಸು ಕಾಣಬೇಕು.
* ಕೇವಲ ತಾತ್ಕಾಲಿಕ ಅಥವಾ ಸುಲಭದಲ್ಲಿ ಸಿಗುವ ಯಶಸ್ಸಿಗೆ ಮರುಳಾಗದಿರಿ. ಶಾಶ್ವತ ಯಶಸ್ಸು ಪಡೆಯಲು ಸದಾ ನಿಷ್ಠೆಯಿಂದ ಪ್ರಯತ್ನ ಮಾಡಬೇಕು.
* ಯಾವ ವಿಷಯಗಳು ನಿಮ್ಮನ್ನು ಘಾಸಿಗೊಳಿಸುವವೋ ಅವು ನಿಮಗೆ ಶಿಕ್ಷಣವನ್ನು ಕೊಡುತ್ತವೆ.

# ಸಾಮಾನ್ಯ ಜ್ಞಾನ

*(ಸಂಗ್ರಹ)*



● **ಕೆ. ಮೇಘ**

ತೃತೀಯ ಬಿ.ಎ. (ಎಚ್.ಇ.ಕೆ.)

## ಸಂವಿಧಾನದ ಕೆಲವು ಮಹತ್ವವಾದ ವಿಧಿಗಳು

* 17ನೇ ವಿಧಿ : ಅಸ್ಪೃಶ್ಯತೆ ನಿರ್ಮೂಲನೆ
* 21 (ಎ) ವಿಧಿ : ಶಿಕ್ಷಣದ ಹಕ್ಕು
* 45ನೇ ವಿಧಿ : ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ
* 51(ಎ) ವಿಧಿ : ಮೂಲಭೂತ ಕರ್ತವ್ಯಗಳು
* 52ನೇ ವಿಧಿ : ರಾಷ್ಟ್ರಪತಿಗಳ ನೇಮಕ
* 63ನೇ ವಿಧಿ : ಉಪರಾಷ್ಟ್ರಪತಿಗಳ ನೇಮಕ
* 72ನೇ ವಿಧಿ : ರಾಷ್ಟ್ರಪತಿಗಳಿಗಿರುವ ಕ್ಷಮಾದಾನ ಅಧಿಕಾರ
* 112ನೇ ವಿಧಿ : ಕೇಂದ್ರ ವಾರ್ಷಿಕ ಮುಂಗಡ ಪತ್ರ
* 124ನೇ ವಿಧಿ : ಸರ್ವೋಚ್ಚ ನ್ಯಾಯಾಲಯದ ರಚನೆ ಮತ್ತು ಸ್ಥಾಪನೆ
* 153ನೇ ವಿಧಿ : ರಾಜ್ಯಪಾಲರ ನೇಮಕ
* 202ನೇ ವಿಧಿ : ರಾಜ್ಯ ವಾರ್ಷಿಕ ಮುಂಗಡ ಪತ್ರ
* 214ನೇ ವಿಧಿ : ರಾಜ್ಯ ಉಚ್ಚ ನ್ಯಾಯಾಲಯಗಳ ಸ್ಥಾಪನೆ
* 280ನೇ ವಿಧಿ : ಕೇಂದ್ರ ಹಣಕಾಸು ಆಯೋಗ
* 324ನೇ ವಿಧಿ : ಚುನಾವಣಾ ಆಯೋಗ
* 352ನೇ ವಿಧಿ : ರಾಷ್ಟ್ರೀಯ ತುರ್ತು ಪರಿಸ್ಥಿತಿ
* 356ನೇ ವಿಧಿ : ರಾಜ್ಯ ತುರ್ತು ಪರಿಸ್ಥಿತಿ
* 360ನೇ ವಿಧಿ : ಹಣಕಾಸಿನ ತುರ್ತು ಪರಿಸ್ಥಿತಿ
* 368ನೇ ವಿಧಿ : ಸಂವಿಧಾನದ ತಿದ್ದುಪಡಿ

## ಸಾಮಾನ್ಯ ಜ್ಞಾನ

* ಫೋಟೋಗ್ರಫಿಯನ್ನು ಕಂಡುಹಿಡಿದವರು – ಎಲ್. ಡಗುರೆ
* ವಿಮಾನದ ವೇಗ ಅಳೆಯಲು ಉಪಯೋಗಿಸುವ ಸಾಧನ – ಟಿಕೋಮೀಟರ್
* ಮರ್ಕೂರಿ (ಪಾದರಸ)ವನ್ನು ಕ್ವಿಕ್ ಸಿಲ್ವರ್ ಎಂದು ಕರೆಯುತ್ತಾರೆ.
* 'ಕಾಸ್ಟಿಕ್ ಸೋಡಾ'ಗೆ ಮತ್ತೊಂದು ಹೆಸರು – ಸೋಡಿಯಂ ಹೈಡ್ರಾಕ್ಸೈಡ್
* ಈವನಿಂಗ್ ಸ್ಟಾರ್ ಎಂದು ಕರೆಯಲ್ಪಡುವ ಗ್ರಹ – ವೀನಸ್
* ಶ್ವೇತ ಕ್ರಾಂತಿಯ ಪಿತಾಮಹ – ವರ್ಗೀಸ್ ಕುರಿಯನ್
* ಕರ್ನಾಟಕದ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ – 37,550 ಚ.ಕಿ.ಮೀ.

* ವಿಶ್ವದ ಹಳೆಯ ರೈಲ್ವೆ ಸುರಂಗ ಮಾರ್ಗ – ಲಂಡನ್‌ನಲ್ಲಿದೆ
* ಕರ್ನಾಟಕದ ಕವಿಗಳ ನಾಡು – ಧಾರವಾಡ
* ವಿಶ್ವಪ್ರಸಿದ್ಧ ಕಲ್ಲಿನ ರಥ – ಹಂಪೆಯಲ್ಲಿದೆ
* ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ಸ್ಥಳ – ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ
* ಕರ್ನಾಟಕ ಸರ್ಕಾರದ ಸುಪ್ರಸಿದ್ಧ ಹೋಟೆಲ್ – ದಿ ಗ್ರಾಂಡ್ ಅಶೋಕ
* ಮಂಡ್ಯ ಜಿಲ್ಲೆಯಲ್ಲಿರುವ ಪಕ್ಷಿಧಾಮ – ರಂಗನತಿಟ್ಟು
* ಕರ್ನಾಟಕ ಆರಕ್ಷಕರ ಗಸ್ತು ವಾಹನ – ಹೊಯ್ಸಳ
* ಕೆಂಪೇಗೌಡರು ನಿರ್ಮಿಸಿದ ಅವಳಿನಗರಗಳು – ಬೆಂಗಳೂರು ಮತ್ತು ಯಲಹಂಕ
* ಅತಿಹೆಚ್ಚು “ಶಿಲಾಶಾಸನ ಮತ್ತು ವೀರಗಲ್ಲು”ಗಳಿರುವ ರಾಜ್ಯ – ಕರ್ನಾಟಕ
* ಕೇಂದ್ರ ಸರ್ಕಾರದ ಮುಖ್ಯಸ್ಥರು – ಪ್ರಧಾನ ಮಂತ್ರಿ
* ನಮ್ಮ ಸಂವಿಧಾನಾತ್ಮಕ ಶಾಸಕಾಂಗ ಸಭೆಯ ಪ್ರಪ್ರಥಮ ಅಧ್ಯಕ್ಷರು – ಡಾ. ಬಾಬು ರಾಜೇಂದ್ರ ಪ್ರಸಾದ್
* ಭಾರತವು ಸಂವಿಧಾನ ರಚನೆಗೆ ಅಂಗೀಕಾರ ನೀಡಿದ್ದು. – 26ನೇ ನವೆಂಬರ್ 1949
* ಪ್ರಧಾನ ಮಂತ್ರಿ ಯಾವ ಸಭೆಯ ಪ್ರಾತಿನಿಧ್ಯ ವಹಿಸುತ್ತಾರೆ – ಲೋಕಸಭೆ
* ಭಾರತದ ತ್ರಿದಳದ ದಂಡನಾಯಕರು – ರಾಷ್ಟ್ರಪತಿ
* ಜಾತ್ಯತೀತತೆ ಎಂದರೆ – ಎಲ್ಲ ಧರ್ಮಗಳಿಗೂ ಸಮಾನತೆ ನೀಡುವುದು.
* ಮೂಲಭೂತ ಹಕ್ಕುಗಳ ರಕ್ಷಕ – ಸರ್ವೋಚ್ಛ ನ್ಯಾಯಾಲಯ
* ಸ್ವತಂತ್ರ ಭಾರತದ ಪ್ರಥಮ ಮಹಿಳಾ ರಾಜ್ಯಪಾಲರು – ಸರೋಜಿನಿ ನಾಯ್ಡು
* ಕೆಳದಿ ರಾಜ್ಯದ ಸಂಸ್ಥಾಪಕರು – ಚೌಡಪ್ಪ ನಾಯಕ
* ಚಿತ್ರದುರ್ಗದ ಕೋಟೆಯನ್ನು ರಕ್ಷಿಸಲು ಪ್ರಾಣ ತ್ಯಾಗ ಮಾಡಿದ ಧೀರ ಮಹಿಳೆ – ಒನಕೆ ಓಬವ್ವ
* ಉಕ್ಕಿನಲ್ಲಿರುವ ಮೂಲವಸ್ತುಗಳು – ಕಬ್ಬಿಣ ಮತ್ತು ಇಂಗಾಲ
* ಅನುವಂಶೀಯ ವಾದ ಮಂಡಿಸಿದವರು – ಗ್ರೆಗರ್ ಮೆಂಡಲ್
* ಅಡುಗೆ ಸೋಡಾದ ರಾಸಾಯನಿಕ ಹೆಸರು – ಸೋಡಿಯಂ ಬೈ ಕಾರ್ಬೋನೈಟ್
* ಕಾಗೆ ಬಂಗಾರ ಎಂದರೆ – ಮೈಕಾ (ಅಭ್ರಕ)
* ಎಲ್ಲಾ ಆಮ್ಲಗಳ ಮೂಲವಸ್ತು – ಜಲಜನಕ
* ರಾಷ್ಟ್ರೀಯ ವಿಜ್ಞಾನ ದಿನ – ಫೆಬ್ರವರಿ 28
* ‘ದಿ ಹಿಸ್ಟರಿ ಆಫ್ ಪರ್ಷಿಯನ್ ವಾರ್ಸ್’ ಕೃತಿಯ ಕರ್ತೃ – ಹೆರೊಡೋಟಸ್
* ನೈಲ್ ನದಿಯ ವರಪ್ರಸಾದ – ಈಜಿಪ್ಟ್
* ಮುಂಜಾನೆಯ ನಕ್ಷತ್ರ – ಶುಕ್ರ
* ಹಂಗೇರಿಯಾದ ಉಷ್ಣವಲಯದ ಹುಲ್ಲುಗಾವಲು – ಪುಷ್ಟೀಸ್
* ‘ಸೂರ್ಯ ಸಿದ್ಧಾಂತ’ ಮಂಡಿಸಿದವರು – ಕೋಪರ್ ನಿಕಸ್
* ಕನಿಷ್ಠ ಕೂಲಿ ಕಾಯ್ದೆ ಜಾರಿಗೆ ಬಂದದ್ದು – 1948ರಲ್ಲಿ
* ಭಾರತದ ಗೋಧಿಯ ಕಣಜ – ಪಂಜಾಬ್
* ಪ್ರಪಂಚದ ಗೋಧಿಯ ಕಣಜ – ರಷ್ಯಾ
* ಭಾರತದ ಅಕ್ಕಿಯ ಬಟ್ಟಲು – ಛತ್ತೀಸ್‌ಗಡ

# ಸ್ವಾಮಿ ವಿವೇಕಾನಂದರ ಸ್ಫೂರ್ತಿವಾಣಿ

(ಸಂಗ್ರಹ)

● ಆರ್. ರಮ್ಯ
ತೃತೀಯ ಬಿ.ಕಾಂ.



* ಜೀವನದಲ್ಲಿ ಜಯಶೀಲನಾದ ಪ್ರತಿಯೊಬ್ಬನ ಹಿಂದೆಯೂ ಅದ್ಭುತವಾದ ಚಾರಿತ್ರ್ಯ ಮತ್ತು ಸತ್ಯಸಂಧತೆ ಇದೆ. ಇವೇ ಅವನ ಅನುಪಮ ಜಯಕ್ಕೆ ಕಾರಣ.
* ಪ್ರತಿಯೊಂದು ಕೆಲಸವೂ ಪೂರ್ಣವಾಗುವುದಕ್ಕೆ ಮುಂಚೆ ನೂರಾರು ಕಷ್ಟಗಳ ಮೂಲಕ ಹಾದು ಹೋಗಬೇಕು. ಯಾರು ಛಲದಿಂದ ಕೆಲಸ ಮಾಡುವರೋ ಅವರು ಇಂದೋ ನಾಳೆಯೋ ಅದರ ಜಯವನ್ನು ಕಂಡೇ ಕಾಣುವರು.
* ವಿಧೇಯತೆ, ಸದಾ ಸಿದ್ಧನಾಗಿರುವುದು, ಆದರ್ಶ ಪ್ರೇಮ – ಇವು ಮೂರು ನಿನ್ನಲ್ಲಿ ಇದ್ದ ಪಕ್ಷಕ್ಕೆ ನಿನ್ನನ್ನು ಯಾವುದು ತಡೆಯಲಾರದು.
* ತಾಳ್ಮೆಯಿಲ್ಲದವರು ಎಂದಿಗೂ ಜಯಶೀಲರಾಗಲಾರರು.
* ಹತಾಶೆಗೊಳ್ಳದಿರು ಓ ಧೀರಾತ್ಮನೆ! ಸೂರ್ಯನು ಮೋಡದಲ್ಲಿ ಮರೆಯಾಗಿದ್ದರೂ, ಆಕಾಶವು ಅಂಧಕಾರದಲ್ಲಿ ಮುಳುಗಿದ್ದರೂ ಹತಾಶೆಗೊಳ್ಳದಿರು, ಮುನ್ನಡೆಯುತ್ತಿರು. ಓ ಧೀರಾತ್ಮನೆ ಕೊನೆಯಲ್ಲಿ ಜಯವದು ನಿಶ್ಚಿತ, ನಿಶ್ಚಿತವು!
* ಧೈರ್ಯವಾಗಿ ಮುಂದುವರಿಯಿರಿ ಕೇವಲ ಒಂದು ದಿನದಲ್ಲಿ / ವರ್ಷದಲ್ಲಿ ಜಯವನ್ನು ನಿರೀಕ್ಷಿಸಬೇಡಿ. ಪರಮೋಚ್ಛ ಆದರ್ಶ ಸದಾ ನಿಮ್ಮ ಮುಂದಿರಲಿ. ನಿಮ್ಮ ಪ್ರಯತ್ನದಲ್ಲಿ ಅಚಲವಾಗಿರಿ, ಅಸೂಯೆ ಮತ್ತು ಸ್ವಾರ್ಥದಿಂದ ದೂರವಿರಿ.
* ಅನುಭವವೇ ಜ್ಞಾನಕ್ಕೆ ಮೂಲ.
* ಪಾವಿತ್ರ್ಯ, ಸಹನೆ ಹಾಗೂ ಸತತ ಪ್ರಯತ್ನ – ಇವು ಜಯಗಳಿಸುವುದಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಮೂರು ಗುಣಗಳು. ಆದರೆ ಇವೆಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ ಇರಬೇಕು.
* ಏಳಿ ಜಾಗ್ರತರಾಗಿ, ಗುರಿ ಸೇರುವವರೆಗೂ ನಿಲ್ಲಬೇಡಿ.
* ನಿಮಗೆ ಸಹಾಯ ಮಾಡುವ ಬಲವರ್ಧಕ ವಿಚಾರಗಳನ್ನು ಸ್ವೀಕರಿಸಬೇಕು. ದುರ್ಬಲಗೊಳಿಸುವ ಭಾವನೆಗಳನ್ನೆಲ್ಲ ತಿರಸ್ಕರಿಸಬೇಕು.
* ಅದಮ್ಯ ಕಾರ್ಯಶೀಲತೆ, ಅತ್ಯಲ್ಪ ಧೈರ್ಯ, ಅನಂತ ಶಕ್ತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಂಪೂರ್ಣ ವಿಧೇಯತೆ – ಇವು ವ್ಯಕ್ತಿಯ ಹಾಗೂ ರಾಷ್ಟ್ರದ ಏಳ್ಗೆಗೆ ಅತ್ಯಗತ್ಯವಾದ ಗುಣಗಳು.
* ಮನಸ್ಸನ್ನು ಉದಾತ್ತ ಭಾವನೆಗಳಿಂದ ಮತ್ತು ಧ್ಯೇಯಗಳಿಂದ ತುಂಬಿ, ಅವನ್ನೇ ಹಗಲು ರಾತ್ರಿ ನಿಮ್ಮ ಮನಸ್ಸಿನಲ್ಲಿ ಚಿಂತಿಸಿ, ಅವುಗಳಿಂದ ಪ್ರಚಂಡ ಸಾಧನೆ ಸಾಧ್ಯವಾಗುವುದು.
* ಗುರಿಗೆ ಕೊಡುವಷ್ಟೇ ಗಮನವನ್ನು ದಾರಿಗೂ ಕೊಡುವುದರಲ್ಲಿ ಜಯದ ರಹಸ್ಯವೆಲ್ಲ ಇರುವಂತೆ ನನಗೆ ತೋರುವುದು.
* ಎಲ್ಲವನ್ನೂ ಹಾಸ್ಯ ಮಾಡುವ ಹುಡುಗಾಟಿಕೆಯ ಸ್ವಭಾವ ನಮ್ಮ ಜನಾಂಗವನ್ನು ಆವರಿಸುತ್ತದೆ. ಅದನ್ನು ತ್ಯಜಿಸಿ ಧೀರರಾಗಿ ಶ್ರದ್ಧಾವಂತರಾಗಿ ಉಳಿದುದೆಲ್ಲಾ ಸ್ವಾಭಾವಿಕವಾಗಿ ಸಿದ್ಧಿಸುವುದು.
* ಸತ್ಯವನ್ನೇ ನಂಬಿ, ನಿಧಾನವಾದರೂ ನಿಜವಾಗಿಯೂ ನಾವು ಜಯಶೀಲರಾಗುವೆವು.
* ಜೀವನದ ರಹಸ್ಯ ಕೇವಲ ಭೋಗವಲ್ಲ ಅದು ಅನುಭವಗಳ ಮೂಲಕ ಪಡೆಯುವ ಶಿಕ್ಷಣ.
* ಜವಾಬ್ದಾರಿಯೆಲ್ಲ ನಿಮ್ಮ ಮೇಲೆಯೇ ಇರುವುದೆಂದು ತಿಳಿದು ಕೆಲಸ ಮಾಡಿ.

## ಎಂಟರ ನಾನಾ ನಂಟುಗಳು



● **ಆರ್. ನಂದಿನಿ**
ತೃತೀಯ ಬಿ.ಎ. (ಹೆಚ್.ಇ.ಕೆ.)

| | |
|---|---|
| ಅಷ್ಟದಿಕ್ಕುಗಳು | :– ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ, ವಾಯುವ್ಯ, ಉತ್ತರ ಹಾಗೂ ಈಶಾನ್ಯ ಇವು ಎಂಟು ದಿಕ್ಕುಗಳು. ಇವುಗಳಿಗೆ ಕ್ರಮವಾಗಿ ಇಂದ್ರ, ಅಗ್ನಿ, ಯಮ, ನಿರೃತಿ, ವರುಣ, ವಾಯು, ಕುಬೇರ, ಈಶ್ವರ – ಇವರು ಅಧಿಪತಿಗಳಾಗಿದ್ದಾರೆ. |
| ಅಷ್ಟವಸುಗಳು | :– ಧ್ರುವ, ಧರ, ಆಪ, ಸೋಮ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ |
| ಯೋಗದ ಅಷ್ಟಾಂಗಗಳು | :– ಯಮ, ನಿಯಮ, ಆಸನ, ಪ್ರಾಣಾಯಮ, ಪ್ರತ್ಯುಹಾರ, ಧ್ಯಾನ, ದಾರಣ, ಸಮಾಧಿ |
| ಅಷ್ಟಸಿದ್ಧಿಗಳು | :– ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ. |
| ಅಷ್ಟ ದ್ರವ್ಯಗಳು | :– ಅರಳು, ಅವಲಕ್ಕಿ, ಎಳ್ಳು, ಬೆಲ್ಲ, ಬಾಳೆಹಣ್ಣು, ಕಬ್ಬು, ಮೋದಕ, ತೆಂಗಿನಕಾಯಿ ಇವು ಗಣಪತಿ ಹೋಮ ಕಾಲದಲ್ಲಿ ಅಷ್ಟದ್ರವ್ಯಗಳಾಗಿ ಬಳಸಲ್ಪಡುತ್ತವೆ. |
| ಅಷ್ಟವಿಧ ವಿವಾಹಗಳು | :– ಬ್ರಾಹ್ಮ, ಪ್ರಾಜಾಪತ್ಯ, ಆರ್ಷ, ಗಾಂಧರ್ವ, ದೈವ ರಾಕ್ಷಸ, ಪೈಶಾಚ, ಅಸುರ |
| ಅಷ್ಟದಿಗ್ಗಜಗಳು | :– ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ |

## ನಗೆಹನಿ

(ನ್ಯೂಸ್ ಪೇಪರ್ ಓದುತ್ತಾ)

ಗುಂಡ : ಸಾರಿಗೆ ಬಸ್ಸು ಬಿದ್ದು 5 ಸಾವು

ಫ್ರೆಂಡ್ : ನನ್ಗೆ ಒಂದ್ ಅನುಮಾನ

ಗುಂಡ : ಏನದು

ಫ್ರೆಂಡ್ : ಸಾರಿಗೆ ಬಸ್ಸು ಬಿದ್ದಿದೆ ಅಂದ್ರೆ, ಆ ಸಾರಿನ ಪಾತ್ರೆ ಎಷ್ಟು ದೊಡ್ಡದಿರಬೇಕು.

ರಾಣಿ : ಲೇ ನಿನ್ ಕೂದಲು ಇಷ್ಟು ಚೆನ್ನಾಗಿದೆಯಲ್ಲ ಏನೇನ್ ಮಾಡ್ತಿಯ?

ವಾಣಿ : ಬೆಳಗ್ಗೆ ಸ್ನಾನ ಮಾಡ್ತೀನಿ ಮಧ್ಯಾಹ್ನ ಎಣ್ಣೆ ಹಾಕ್ತಿನಿ

ರಾಣಿ : ರಾತ್ರಿ

ವಾಣಿ : ಕಳಚಿ ಗೋಡೆಗೆ ನೇತಾಕ್ತಿನಿ.

* * *

ಹೆಂಡತಿ : ರೀ ನಾನ್ ಸತ್ತೋದ್ರೆ ಏನ್ ಮಾಡ್ತಿರ?

ಗಂಡ : ನಾನು ಸತ್ತೋಗ್ತೀನಿ.

ಹೆಂಡತಿ : ನಿಜಾನ ನನ್ ಮೇಲೆ ಎಷ್ಟು ಪ್ರೀತಿ.

ಗಂಡ : ಯಾರಿಗ್ ಗೊತ್ತು ಖುಷಿಗೆ ಹಾರ್ಟ್‌ಅಟ್ಯಾಕ್ ಆದ್ರೂ ಆಗುತ್ತೆ.



● **ಎಸ್. ಸುಗುಣ**
ತೃತೀಯ ಬಿ.ಎ. (ಹೆಚ್.ಇ.ಕೆ.)

## ಪ್ರಥಮ ಮಹಿಳೆಯರು

*(ಸಂಗ್ರಹ)*



● ವಿ. ಚೈತ್ರ
ತೃತೀಯ ಬಿ.ಎ. (ಹೆಚ್.ಇ.ಕೆ.)

* ಪ್ರಥಮ ಮಹಿಳಾ ಪದವೀಧರೆ – ಕದಂಬಿನಿ ಗಂಗೂಲಿ
* ಪ್ರಥಮ ಮಹಿಳಾ ಲಾಯರ್ – ಕಾರ್ನೆಲಿಯ ಸೊರಾಬ್ಜಿ
* ಸ್ವತಂತ್ರ ಭಾರತದ ಪ್ರಥಮ ಮಹಿಳಾ ಮಂತ್ರಿ – ರಾಜಕುಮಾರಿ ಅಮೃತ್ ಕೌರ್
* ಭಾರತ ಸರ್ಕಾರದ ಪ್ರಥಮ ರೈಲ್ವೆ ಮಹಿಳಾ ಮಂತ್ರಿ – ಮಮತಾ ಬ್ಯಾನರ್ಜಿ
* ಪ್ರಥಮ ಮಹಿಳಾ ಫೋಟೋ ಜರ್ನಲಿಸ್ಟ್ – ಹೊಮ್ಮೈವ್ಯರವಲ್ಲಾ
* ವಿಜ್ಞಾನದಲ್ಲಿ ಪಿಎಚ್‌ಡಿ ಮಾಡಿದ ಪ್ರಥಮ ಮಹಿಳೆ – ಅಸಿಮ ಚಟರ್ಜಿ
* ಪ್ರಥಮ ದೆಹಲಿ ಸುಲ್ತಾನಳು – ರಜಿಯಾ ಸುಲ್ತಾನ್
* ಭಾರತದ ಪ್ರಥಮ ಮಹಿಳಾ ಪ್ರಧಾನ ಮಂತ್ರಿ – ಇಂದಿರಾಗಾಂಧಿ
* ಭಾರತದ ರಾಜ್ಯವೊಂದರ ಪ್ರಥಮ ಮಹಿಳಾ ಮುಖ್ಯಮಂತ್ರಿ – ಸುಚೇತಾ ಕೃಪಲಾನಿ
* ಭಾರತದ ರಾಜ್ಯವೊಂದರ ಪ್ರಥಮ ಮಹಿಳಾ ರಾಜ್ಯಪಾಲರು – ಸರೋಜಿನಿ ನಾಯ್ಡು
* ನೊಬೆಲ್ ಪಾರಿತೋಷಕ ಪಡೆದ ಭಾರತದ ಮೊದಲ ಮಹಿಳೆ – ಮದರ್ ಥೆರೆಸಾ
* ಪ್ರಥಮ ಮಹಿಳಾ ಡಾಕ್ಟರ್ – ಕದಂಬಿನಿ ಗಂಗೂಲಿ
* ಭಾರತದ ಪ್ರಥಮ ಮಹಿಳಾ ಲೋಕಸಭಾ ಸ್ಪೀಕರ್ – ಮೀರಾಕುಮಾರ್
* ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ – ಪ್ರತಿಭಾದೇವಿ ಸಿಂಗ್ ಪಾಟೀಲ್
* ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಮಹಿಳೆ – ಆಶಾಪೂರ್ಣ ದೇವಿ
* ಪ್ರಥಮ ಮಹಿಳಾ ಐಎಎಸ್ ಅಧಿಕಾರಿ – ಅಣ್ಣಾ ರಾಜನ್ ಗಾರ್ಗೆ
* ರಿಸರ್ವ್ ಬ್ಯಾಂಕಿನ ಪ್ರಥಮ ಮಹಿಳಾ ಉಪ ಗವರ್ನರ್ – ಕೆ.ಜೆ. ಉದೇಸಿ

### ಚುಟುಕುಗಳು

ಜೀವನದಲ್ಲಿ ಕಲಿಯಬೇಕು ವಿದ್ಯೆ
ವಿದ್ಯೆಗಾಗಿ ಬಿಡಬೇಕು ನಿದ್ದೆ
ಆಗ ಮಾತ್ರ ಸಿಗುವುದು ಸರ್ಕಾರಿ ಹುದ್ದೆ

ಗೆಟ್‌ಔಟ್ ಅಂದವರ ಮುಂದೇನೇ ಕಟೌಟ್
ಆಗಿ ನಿಲ್ಲುವುದೇ ಸಾಧನೆ

ಒಬ್ಬ ಮನುಷ್ಯ ಬೆಳೆಯಬೇಕೆಂದರೆ
ಮಿತ್ರ ಎದೆಯಲ್ಲಿರಬೇಕು
ಶತ್ರು ಎದುರಲ್ಲಿರಬೇಕು

ಗುರಿ ಹೇಗಿರಬೇಕೆಂದರೆ
ನಿನ್ನ ಗುರಿಯನ್ನು ಕೇಳಿ ಜನ
ನಿನ್ನನ್ನು ಹುಚ್ಚ ಎನ್ನಬೇಕು
ನೀನು ಸಾಧಿಸಿದ ಮೇಲೆ ಅವರು ಹುಚ್ಚರಾಗಬೇಕು

ಪೆಟ್ರೋಲ್ ರೇಟ್ 75ಕ್ಕೆ ಏರಿದೆ
ಹಾಲಿನ ರೇಟ್ 50 ಆಗುತ್ತಿದೆ
ಇಷ್ಟ್ ಆದ್ರು ನಮ್ಮ ಪುಣ್ಯಕ್ಕೆ ಪಾಸಿಂಗ್ ಮಾರ್ಕ್ಸ್
ಮಾತ್ರ ಇನ್ನೂ 35ಕ್ಕೆ ನಿಂತಿದೆ.

## ಕನ್ನಡ ಉಳಿಸೋಣ

ಓ ಕನ್ನಡಿಗ
ಕನ್ನಡಕ್ಕಾಗಿ ಕೈ ಎತ್ತು
ಅದು ನಮ್ಮ ಸಂಪತ್ತು

ಆಗ ಕನ್ನಡ ಮಾತನಾಡುತ್ತಿದ್ದವರು ನೂರಕ್ಕೆ ತೊಂಬತ್ತು
ಈಗ ಕನ್ನಡ ಮಾತನಾಡುವವರು ನೂರಕ್ಕೆ ಇಪ್ಪತ್ತು

ಹುದ್ದೆಗೋಸ್ಕರ ಕಲಿಯುತ್ತಿದ್ದೇವೆ ಆಂಗ್ಲವನ್ನು ಇವತ್ತು
ಮುಂದಿನ ಪೀಳಿಗೆಯವರು ಕೇಳುವರು ಕನ್ನಡ ಎಲ್ಲಿತ್ತು

ನಾವೆಲ್ಲ ಬಿಡೋಣ ಇಂಗ್ಲಿಷಿನ ವಕಾಲತ್ತು
ಕೊಡೋಣ ಕನ್ನಡಕ್ಕೆ ಹೆಚ್ಚು ಒತ್ತು

ಶಿಕ್ಷಕರು ವಿದ್ಯಾರ್ಥಿಗಳಿಗೆ ಕೊಡಬೇಕು ಕನ್ನಡದ ಗಮ್ಮತ್ತು
ಹೇಗೂ ಕನ್ನಡದಲ್ಲಿ ಬಂತು ನೀಟ್ ಪರೀಕ್ಷೆ ಇವತ್ತು.

ಕನ್ನಡಕ್ಕೆ ದೊರೆತಿದೆ ಎಂಟು ಜ್ಞಾನಪೀಠ ಮುತ್ತು
ಆದರೂ ಕನ್ನಡ ಯಾಕೆ ಬೆಳೆಯುತ್ತಿಲ್ಲ ಇವತ್ತು

ಅದು ಪ್ರತಿಯೊಬ್ಬರಿಗೂ ಗೊತ್ತು
ನಾವೆಲ್ಲ ಆಗಿದ್ದೇವೆ ಆಂಗ್ಲದ ಸ್ವತ್ತು

ತಿಳಿಸೋಣ ಎಲ್ಲರಿಗೂ ಕನ್ನಡದ ಮಹತ್ತು
ಕನ್ನಡಿಗರಿಗೆ ಕನ್ನಡವೆ ಸ್ವತ್ತು.

## ಕೊಡಗೆಂಬ ಕರುನಾಡು

ಭಾರತವೆಂಬುದು ಬೃಹತ್ ಸಾಮ್ರಾಜ್ಯ
ಅದರೊಳಗೊಂದು ಸಿರಿನಾಡು ನಮ್ಮ ಕರ್ನಾಟಕ ರಾಜ್ಯ

ಅಲ್ಲೊಂದು ಪುಟ್ಟಗೂಡು ಈ ನಮ್ಮ 'ಕೊಡಗು'
ಎಲ್ಲರನ್ನದರತ್ತ ಕೈ ಬೀಸಿ ಕರೆಯುತ್ತಿತ್ತದರ ಸೊಬಗು

ಪಶ್ಚಿಮ ಘಟ್ಟಗಳ ಶ್ರೇಣಿಯೇ ಅದರ ಮುಕುಟ
ಪ್ರಕೃತಿಯ ಸೊಬಗೆ ಈ ನಾಡಿನ ಕಿರೀಟ
ದೇಶ ಕಾಯಲು ನೀಡುತ್ತಿದೆ ಸಾವಿರಾರು ಸೈನಿಕರ ಕೊಡುಗೆ
ನೋಡಲು ಅದೆಷ್ಟು ಚೆನ್ನ ಅವರ ಉಡುಗೆ-ತೊಡುಗೆ

ಕಾನನಗಳ ದಟ್ಟನಾಡು, ಶ್ರೀಗಂಧದ ತವರಿನ ಬೀಡು
ಬೆಟ್ಟ ಸಾಲುಗಳ ನಡುವಿನಲ್ಲಿ ಕಣ್ಣುಕುಕ್ಕುವ

ಸಹ್ಯಾದ್ರಿಯ ತಾಣದಲಿ
ಬೋರ್ಗರೆದು ಧುಮ್ಮಿಕ್ಕುವ ಸಾಲುಸಾಲು
ಝರಿಗಳ ನಡುವಲಿ
ಆಕರ್ಷಿಸಿತ್ತು ಲಕ್ಷಾಂತರ ಜನರ
ಆ ಹಕ್ಕಿಗಳು ತಮ್ಮ ಕಲರವದಲಿ
ಆದರೆ ಅರಿವಿಲ್ಲದ ಹೊತ್ತಲಿ ಹರಿದ ಮುಗಿದ ಜಲಧಾರೆಗೆ
ಕೊಚ್ಚಿಹೋಯಿತು ಈ ನಮ್ಮ ಊರು
ಎಲ್ಲಿ ಹುಡುಕಿದರೂ ಸಿಗುತ್ತಿಲ್ಲ ನಮ್ಮೂರಿನ ಬೇರು
ಮುಳುಗಿದಲ್ಲೆಲ್ಲೇ ನೋಡಿದರು ಕಾಣುತ್ತಿತ್ತು ಬರೀ ನೀರು

ಕೊಚ್ಚಿ ಹೋದ ಕೊಡಗನು
ಕೈ ಚಾಚಿ ಮತ್ತೊಮ್ಮೆ ಕಟ್ಟೋಣ ಬನ್ನಿ
ನಮ್ಮ ನಾಡ ಮುಕುಟದ ಮನಗಳಿಗೆ
ಮನಬಿಚ್ಚಿ ಸಾಂತ್ವಾನ ಹೇಳೋಣ ಬನ್ನಿ

## ಚಾಮರಾಜನಗರ

ಚಾ – ಚಾಮರಾಜೇಂದ್ರ ಒಡೆಯರ ಅಮೋಘ ಆಶೀರ್ವಾದದೊಂದಿಗೆ
ಮ – ಮಲೈಮಹದೇಶ್ವರನ ಕೃಪಾಕಟಾಕ್ಷದೊಂದಿಗೆ
ರಾ – ರಾರಾಜಿಸುತ್ತಿರುವ ಹತ್ತಾರು ಬೆಟ್ಟಗಳಿಂದ ಕೂಡಿದ
ಜ – ಜನಪದ ಕಲೆಗಳ ಸಮೃದ್ಧತೆಯಿಂದ ತುಂಬಿದ
ನ – ನವಿಲಿನ ನರ್ತನದಿಂದ ಕೂಡಿದ ಕಾಡು ವೃಂದವನ್ನು ಹೊಂದಿರುವ
ಗ – ಗಗನಚುಕ್ಕಿ-ಭರಚುಕ್ಕಿಯಂತೆ ಅಪೂರ್ವ ಜೋಡಿ ಜಲಪಾತಗಳನ್ನು ಸುತ್ತುವರೆದಿರುವ
ರ – ರಮಣೀಯ ರಂಜಿಸುತ್ತಿರುವ ಈ ನಮ್ಮ ಜಗವೇ ನಮ್ಮ ಈ ಚಾಮರಾಜನಗರ

● **ಎಸ್. ಶ್ವೇತಾ**
ತೃತೀಯ ಬಿ.ಎ. (ಹೆಚ್.ಇ.ಕೆ.)



## ಚುಟುಕುಗಳು

* ಒಂದು ಕಲ್ಲು ಮೂರ್ತಿ
ಆಗಬೇಕಾದರೆ ಶಿಲ್ಪಿಯ
ಅವಶ್ಯಕತೆಯಿದೆ. ಅದೇ ತರ
ಒಬ್ಬ ಮಗ ಪರಿಪೂರ್ಣ ವ್ಯಕ್ತಿ
ಆಗಬೇಕಾದರೆ ತಂದೆ ತಾಯಿಯ ಅವಶ್ಯಕತೆಯಿದೆ.

* ಕಠಿಣವಾಗಿ ಮಾತನಾಡುವವರು
ಕೆಟ್ಟವರು, ಮೃದುವಾಗಿ
ಮಾತನಾಡುವವನು ಒಳ್ಳೆಯವರು
ಅಂತ ಹೇಳಲು ಸಾಧ್ಯವಿಲ್ಲ
ಪರಿಶೀಲಿಸಿ ನೋಡಿದಾಗ ಮಾತ್ರ ಎಲ್ಲವು ತಿಳಿಯುತ್ತದೆ

* ಬೇರೆಯವರನ್ನು ನೋಡಿ
ಕಲಿಯುವುದಕ್ಕಿಂತ ನಮ್ಮನ್ನು ನಾವೇ
ಅರಿತುಕೊಂಡು ಕಲಿಯಬೇಕು

* ಎಷ್ಟೋ ಪದವಿಗಳಿದ್ದರೇನು ಪ್ರಯೋಜನ!
ಒಳ್ಳೆಯ ಕೆಲಸ ಇಲ್ಲದಿದ್ದರೆ

* ಸಮಯ ಬದಲಾದ ಹಾಗೆ ನಮ್ಮ
ವ್ಯಕ್ತಿತ್ವ ಬದಲಾಗಬಾರದು

* ಬಣ್ಣದ ಮಾತುಗಳನ್ನಾಡಿ ಹೋಗಳುವರನ್ನು
ನಿರ್ಲಕ್ಷಿಸುವುದೇ ಲೇಸು

* ಬಡವರು ಶ್ರೀಮಂತರಾಗಬಹುದು
ಶ್ರೀಮಂತರು ಬಡವರಾಗಬಹುದು
ದುಡ್ಡಿದೆ ಅಂತ ದುರಹಾಂಕಾರ ಪಟ್ಟರೆ
ಒಂದಲ್ಲ ಒಂದು ದಿನ ಅಂತಹವರಿಗೆ
ಕಾಲವೇ ಉತ್ತರಿಸುತ್ತದೆ.

* ನಿನ್ನೆಯ ಸೋಲಿನ ಬಗ್ಗೆ ಹತಾಶೆ ಪಡಬೇಡ
ನಾಳೆಯ ಗೆಲುವಿನ ಬಗ್ಗೆ ಸಂತೋಷ ಪಡು
ಮೊದಲು ಸೋಲುವುದನು ಕಲಿ
ಆ ಮೇಲೆ ಗೆಲುವು ತಾನಾಗಿಯೇ
ಲಭಿಸುತ್ತದೆ.

* ಈ ಜೀವನ ಸುಖ-ದುಃಖಗಳ ಸಾಗರ
ಬಹುಪಾಲು ಅದು ಕಷ್ಟಗಳ ಆಗರ
ಸಂತಸದ ಕ್ಷಣಗಳು ವಿರಳ
ನಮ್ಮ ಬಯಕೆಗಳು ಸಾವಿರ
ಇವೆಲ್ಲದರ ಮಧ್ಯೆ ನಾವೇನು ಮಾಡಿದೆವು
ಎಂಬುವುದೇ ನಮ್ಮ ವಿವರ

* ಕುಡಿಯುವುದು ಕುಡುಕರ ಧರ್ಮ
ಬಿಕ್ಕಿ ಆಳುವುದು ಹೆಂಡ್ತೀರ ಕರ್ಮ
ಹೆಂಡ ಸುಲಿಯುತ್ತೆ ಅಂತಸ್ತಿನ ಚರ್ಮ
ಯಾರು ಬಲ್ಲರು ಇದರ ಮರ್ಮ



● **ಎನ್. ಸ್ಫೂರ್ತಿ**
ತೃತೀಯ ಬಿ.ಎ. (ಹೆಚ್.ಇ.ಕೆ.)

## ಗಂಡ

ದೇವರ ನಿಜವಾದ ಸ್ವರೂಪ
ಹೆಂಡತಿನ ಒಡೆದು, ಬೈದು ನಡೆಸಿಕೊಳ್ಳೋನು ಗಂಡನಲ್ಲ
ನಿಜವಾಗಿಯೂ ಸಮಾಜದ ಮುಂದೆ ಹೆಂಡ್ತಿಯ ಗೌರವ
ಹಾಳಾಗದಂತೆ ಕಾಯೋನೆ ಗಂಡ.

## ಫೋನ್ ಗಾದೆ

* Mobile ಉಳಿಸಿ Technology ಬೆಳೆಸಿ.
* Mobile ಚಿಕ್ಕದಾದರೂ Network ದೊಡ್ಡದು.
* Call ಮನೆಕೆಡಿಸಿತು SMS ತಲೆಕೆಡಿಸಿತು.
* Coinboxಗೆ ನಿಮಿಷ Mobileಗೆ ವರುಷ
* Landphoneಗೆ ಬಗ್ಗದವ Mobileಗೆ ಬಗ್ಗಿಯಾನೆ.
* SMSನಲ್ಲಿ ಹೋದ ಮಾನ call ಮಾಡಿದರೂ ಸಿಗೊಲ್ಲ.
* call ಮಾಡೋನು ಕುರಿ
SMS ಮಡೋನು ಸರಿ.



● **ಎನ್. ರಂಜಿತ**
ಪ್ರಥಮ ಬಿ.ಬಿ.ಎ.

## ಕವನಗಳು

ಯಾರು ಕೈಯತ್ತಿ ನೀಡಲಿಲ್ಲ
ನಾನು ಕೈ ಚಾಚಿ ಬೇಡಲಿಲ್ಲ
ಕೊಟ್ಟೆ ಕೊಡ್ತಾನೆ ಭಗವಂತ
ಆಗೆ ಆಗ್ತೀನಿ ಶ್ರೀಮಂತೆ

ಉನ್ನತಿಯಲ್ಲಿ ಶ್ರಮದ ಸಾಲೆ ದೊಡ್ಡದು
ಶ್ರಮಕ್ಕೆ ಅದೃಷ್ಟವನ್ನು ಆಕರ್ಷಿಸುವ ಶಕ್ತಿಯಿದೆ
ಶ್ರಮದೊಂದಿಗೆ ಶ್ರದ್ದೆಯೂ ಇದ್ದಾಗ ಅದೃಷ್ಟ
ತಾನಾಗಿಯೇ ಬಂದು ಸೇರಿಕೊಳ್ಳುತ್ತದೆ.

ಜೀವನದಲ್ಲಿ ಬರುವುದು ಬಡತನ – ಸಿರಿತನ
ಬಂದ ಮೇಲೆ ಹೋಗಲಾರದು ಕೀರ್ತಿ – ಅಪಕೀರ್ತಿ
ಹೋದ ಮೇಲೆ ಸಿಗಲಾರದು ಮಾನ – ಪ್ರಾಣ

### ಸಾಧನೆ

ಹುಟ್ಟು ಉಚಿತ
ಸಾವು ಖಚಿತ
ಬದುಕು ಬ್ರಹ್ಮ ಲಿಖಿತ
ಇವೆರಡರ ನಡುವೆ ಸಾಧನೆ ಶಾಶ್ವತ

### ಅಮ್ಮ

ಅಮ್ಮ – ನನ್ನ ದೇಹದ ಕಣಕಣದಲ್ಲೂ
ಹರಿಯುತಿದೆ ನಿನ್ನ ಅರುಣ
ಹೇಗೆ ತೀರಿಸುವುದೋ ಕಾಣೆ
ನಾ ನಿನ್ನ ಋಣ.




● **ಡಿ. ಮಮತ**
ತೃತೀಯ ಬಿ.ಎ. (ಹೆಚ್.ಇ.ಕೆ.)


## ಚುಟುಕುಗಳು

### ತಾಳ್ಮೆ

ತಾಳ್ಮೆ ಕೆಡಿಸಿಕೊಂಡರೆ
ಇನ್ನೇನು ನಮ್ಮ ಕೈ
ಸೇರುತ್ತದೆ ಎನ್ನುವ ವಸ್ತು
ಕೂಡ ಮಣ್ಣಿನ ಪಾಲಾಗುತ್ತದೆ

### ಸುಂದರ

ಸುಂದರವಾಗಿ ಕಾಣಿಸುವವರನ್ನು
ಕೇವಲ ನಾಲ್ಕು ಜನ ಮೆಚ್ಚಬಹುದು....
ಆದರೆ ಸುಂದರವಾಗಿ ಬದುಕುವವರನ್ನು
ಇಡೀ ಪ್ರಪಂಚವೇ ಮೆಚ್ಚಿಕೊಳ್ಳುತ್ತದೆ.

### ಮರೆವು

ಮನಸ್ಸಿಗೆ ಒತ್ತಡ ನೀಡುವ ನಿನ್ನೆಯ ಯಾವುದೇ
ಮಾತುಗಳನ್ನು ಇಂದು ಚಿಂತಿಸದಿರುವುದೇ
ನಿಜವಾದ ಮರೆವು

### ಮನಸು

ನಿನ್ನೆಯ ಯಾವುದೋ ತೊಡಕಿನ (ಚಿಂತೆಯ) ಮಾತನ್ನು ನೆನಪಿಸಿಕೊಂಡು ಇಂದಿನ ಶ್ರೇಷ್ಠ ಸಮಯವನ್ನು ಹಾಳು ಏಕೆ ಮಾಡಬೇಕು?

### ಸಮಯ

ನೀವು ಒಂದು ಗಂಟೆಯನ್ನು ಸದುಪಯೋಗ ರೀತಿಯಲ್ಲಿ ಕಳೆದಾಗ ಅದು ಸಾವಿರಪಾಲು ಲಾಭವನ್ನು ಕೊಡುತ್ತದೆ. ನಿರುಪಯೋಗವಾಗಿ ಅದನ್ನು ವ್ಯರ್ಥ ಮಾಡಿದಾಗ ಅದು ಸಾವಿರ ಪಾಲು ನಷ್ಟವೆ.

### ಒಳ್ಳೆಯ ಕಾರ್ಯ

ಬೇರೆಯವರನ್ನು
ಸಂತೋಷಪಡಿಸುವುದು
ಒಂದು ಮಹತ್ತರವಾದ ಕಾರ್ಯ




● **ಎನ್. ಗೀತಾ**
ತೃತೀಯ ಬಿ.ಎ. (ಹೆಚ್.ಇ.ಕೆ.)

## ಹನಿಗವನಗಳು

* ಅರಿಯಲಾಗದ ದಾರಿಯಲಿ
ಮರೆಯಲಾಗದ ನೆನಪುಗಳನ್ನು
ಅರಿತು ಅರಿಯದಂತೆ ಇರುವವರ ನಡುವೆ
ಅರಿತು ಬಾಳುವುದೆ ನಿಜವಾದ 'ಜೀವನ'

* ಧಾನ ಧರ್ಮಕ್ಕೆ ಕಣ್ಣಿಲ್ಲ
ನ್ಯಾಯ ನೀತಿಗೆ ಸಾವಿಲ್ಲ
ಜೀವ ಚಿಕ್ಕದು ಜೀವನ ದೊಡ್ಡದು
ಸಾಯುವವನಿಗೆ ಒಂದೇ ದಾರಿ
ಸಾಧಿಸುವವನಿಗೆ ಸಾವಿರ ದಾರಿ

* ನಾನು ಎಂಬುದ ಮರೆತು,
ನನ್ನಿಂದಲೇ ಎಂಬುದ ತೊರೆದು,
ನಾವು ಎಂಬುದ ನೆನೆದು,
ನಮ್ಮಿಂದ ಎಂಬುದ ಮನಸಿಟ್ಟು,
ಎಲ್ಲರೊಳಗೊಂದಾಗಿ ಬದುಕಿದರೆ,
ಅವನೆ ನಿಜವಾದ ಸಾಧಕ,
ಅದುವೆ ಬದುಕಿನ ಸಾಧನೆ.

* ಮಾತು ವೈರಿಗಳ ಮುಂದೆ ಗತ್ತಿನಂತಿರಬೇಕು,
ಹೆದರಿಸುವವರ ಮುಂದೆ ಕತ್ತಿಯಂತಿರಬೇಕು,
ಆತ್ಮೀಯರ ಮುಂದೆ ಮುತ್ತಿನಂತಿರಬೇಕು,
ಹಿರಿಯರ ಮುಂದೆ ಹತ್ತಿಯಂತಿರಬೇಕು.

* ನಾವೇ ನಿರ್ಮಿಸಿ
ನಾವೇ ನಿರ್ದೇಶಿಸಿ
ನಾವೇ ನಟಿಸಿ
ನಮಗೇ.... ಅರ್ಥವಾಗದೆ
ಅಂತ್ಯ ಹೇಗೆಂದು ತಿಳಿಯದೇ
ಸಾಗುವ ಕಪ್ಪು ಬಿಳುಪಿನ ಚಿತ್ರವೇ
'ಜೀವನ'

* ಕತ್ತಲಾಗದೆ ನಕ್ಷತ್ರ ಕಾಣೊಲ್ಲ
ಕಷ್ಟವಿಲ್ಲದೆ ಜೀವನ ನಡೆಯೊಲ್ಲ
ಏಳು–ಬೀಳಿನ ನಡುವೆ ಬಾಳಬಂಡಿ
ಸಾಗಲು ಸಾವಿರ ಮುಳ್ಳಿದ್ದರೂ
ಗುಲಾಬಿಯಂತೆ ಮಿಂಚಬೇಕು
ಅದುವೇ ಜೀವನ.

* ಬೆವರು ಸುರಿಸಿ ಕಷ್ಟಪಟ್ಟು
ಉತ್ತನ ಸ್ಥಾನಕ್ಕೆ ಬಂದವನು
ಎಂದಿಗೂ ಜೀವನದಲ್ಲಿ
ಸೋಲುವುದಿಲ್ಲ,
ಒಂದು ವೇಳೆ ಸೋತರು
ಅದೃಷ್ಟ ಕೈಕೊಟ್ಟು
ಸೋತಿರುತ್ತಾನೆಯೇ
ಹೊರತು ಪ್ರಯತ್ನದಿಂದಲ್ಲ

## 21ನೆಯ ಶತಮಾನದ ಕೊಡುಗೆಗಳು

ದೂರವಾಣಿಗೆ ತಂತಿ ಇಲ್ಲ
ಒಲೆಗಳಿಗೆ ಬೆಂಕಿ ಇಲ್ಲ
ವಾಹನಗಳಿಗೆ ಬೀಗದ ಕೀ ಇಲ್ಲ
ಟೈಯರ್‌ಗಳಿಗೆ ಟ್ಯೂಬ್ ಇಲ್ಲ
ತಿನಿಸುಗಳಿಗೆ ಕೊಬ್ಬು ಇಲ್ಲ
ಬಟ್ಟೆಗಳಿಗೆ ತೋಳು ಇಲ್ಲ
ಯುವಕರಿಗೆ ಕೆಲಸ ಇಲ್ಲ
ರಾಜಕಾರಣಿಗಳಿಗೆ ಮಾನ ಇಲ್ಲ
ಸಂಬಂಧಗಳಿಗೆ ಅರ್ಥ ಇಲ್ಲ
ರೂಪಾಯಿಗೆ ಬೆಲೆ ಇಲ್ಲ
ಆದರೂ
ನಮ್ಮ ಆಸೆಗಳಿಗೆ ಕೊನೆ ಇಲ್ಲ.



● ಎಸ್. ಮಾದಲಾಂಬಿಕೆ
ತೃತೀಯ ಬಿ.ಎ. (ಹೆಚ್.ಇ.ಕೆ.)

## ಮನದಮಾತು

* ಪದಗಳಿಲ್ಲದೆ ಮಾತನಾಡಿದೆ
ಗಾಳಿಯಿಲ್ಲದೆ ಉಸಿರಾಡಿದೆ
ಒತ್ತಡವಿಲ್ಲದೆ ನಲಿದಾಡಿದೆ
ಹಸಿವಿಲ್ಲದೆ ಖುಷಿಯಾಗಿದೆ
ಅದು ಎಲ್ಲಿ ಅಂದರೆ
ನನ್ನ ತಾಯಿಯ ಗರ್ಭದಲ್ಲಿ

* ಓ ಮೇಘಗಳೆ ಓಡದಿರಿ
ಓ ಮೋಡಗಳೆ ಕರಗದಿರಿ
ನಿನ್ನ ಹನಿಗಳಿಗೆ ಕರಗುವ
ಮಣ್ಣಿನ ಬೊಂಬೆ ನನ್ನವರು

* ಅಮ್ಮ ನಿನಗೊಂದು ನನ್ನ ಮುದ್ದಾದ ಉಮ್ಮ...
ನನಗೋಸ್ಕರ ನಿನ್ನನ್ನು ಸೃಷ್ಟಿ ಮಾಡಿದನು ಆ ಬ್ರಹ್ಮ
ನಿನ್ನನ್ನು ಕೊನೆಯ ತನಕ ಕಾಯುವೆ ನಾನಮ್ಮ
ಧನ್ಯವಾದಗಳು ನನಗೆ ನೀಡಿದಕ್ಕಾಗಿ ಈ ಜನ್ಮ
ಐ ಲವ್ ಯು ಅಮ್ಮ....

* ನಿನ್ನ ನೋವು ನಿನಗೆ ಗೊತ್ತಾದರೆ
ನೀನು ಬದುಕಿದ್ದೀಯಾ ಎಂದರ್ಥ
ಪರರ ನೋವು ನಿನಗೆ ಗೊತ್ತಾದರೆ
ನೀನು ಮನುಷ್ಯನಾಗಿದ್ದೀಯಾ ಎಂದರ್ಥ

* ಸಾವಿರಾರು ಮೈಲಿ ಪ್ರಯಾಣ ಮಾಡಿದರೆ
ತಿಳಿಯುವುದೇ ದೋಣಿಗೆ ಕಡಲಿನ ಆಳ
ನೂರಾರು ಚೆಲುವ ಚಂದದ ಮುಖಗಳನ್ನು
ನೋಡಿದರೂ ಒಂದಾದರೂ ಉಳಿಯುವುದೇ
ಕನ್ನಡಿಯ ಪಾಲಿಗೆ

* ಜೀವನವೆಂಬ ಆಕಾಶದಲ್ಲಿ
ನೂರಾರು ನಕ್ಷತ್ರಗಳನ್ನು ಕಂಡೆ
ಅದರಲ್ಲಿ ಎರಡನ್ನು ಇಷ್ಟಪಟ್ಟೆ
ಅವು ಯಾವುದೆಂದರೆ 'ಅಪ್ಪ, ಅಮ್ಮ'

* ಒಂದು ದಿನ ಕನಸು ಜೀವನವ ಕೇಳುತ್ತೆ
ನಾನು ಯಾವಾಗ ನನಸಾಗುವುದು ಅಂತ ಆಗ
ಜೀವನ ಹೇಳುತ್ತೆ ನೀನು ನನಸಾದರೆ
ಜೀವನಕ್ಕೆ ಅರ್ಥವೇ ಇರುವುದಿಲ್ಲ ಅಂತ.

* ಗೆದ್ದಾಗ ಚಪ್ಪಾಳೆ ಹೊಡೆಯೋ
ಸ್ನೇಹಿತರನ್ನು ಮರೆತರು ಪರವಾಗಿಲ್ಲ
ಬಿದ್ದಾಗ ಕೈ ಹಿಡಿದು ಮೇಲೆತ್ತೋ
ಸ್ನೇಹಿತರನ್ನು ಮರೆಯಬಾರದು.

* ನಿಲ್ಲಲು ಕಲಿಸಿದ ನನ್ನ ತಾಯಿಯನ್ನು
ಬೀಳದಂತೆ ನೋಡಿಕೊಳ್ಳುವುದು ನಮ್ಮ 'ಕರ್ತವ್ಯ'
ತಲೆ ಎತ್ತಿ ನಿಲ್ಲಲು ಕಲಿಸಿದ ನನ್ನ ತಂದೆ
ತಲೆ ತಗ್ಗಿಸದಂತೆ ನೋಡಿಕೊಳ್ಳುವುದು
ನಮ್ಮ 'ಕರ್ತವ್ಯ'

* ಭಾಷೆ ಎಂಬ ಬೆಳಕು ಬೆಳಗದಿದ್ದರೆ
ಇಡಿ ಜಗತ್ತೆ ಕತ್ತಲೆಯಲ್ಲಿ
ತುಂಬಿರುತ್ತಿತ್ತು.

* ಓಡೋಡಿ ಬರುತ್ತಿತ್ತು ಕ್ಲಾಸಿನಲ್ಲಿ ನಿದ್ದೆ
ಪಾಠದ ಕಡೆ ಗಮನ ಕೊಡದೆ ಇದ್ದೆ
ಪರೀಕ್ಷೆಯಲ್ಲಿ ಏನು ಬರೆಯದೇ ಇದ್ದೆ
ಫಲಿತಾಂಶ ನೋಡಿ ತಲೆತಿರುಗಿ ಬಿದ್ದೆ
ಕೊನೆಗೂ ಸಿಗಲಿಲ್ಲ ಯಾವುದೇ ಹುದ್ದೆ
ನನಗಾಗಿ ಕಾಯುತ್ತಿತ್ತು ನಮ್ಮಪ್ಪನ ಗದ್ದೆ.

* ನಾವು ಎಷ್ಟು ಓದಿದ್ದೇವೆ
ಎಂಬುದು ಮುಖ್ಯವಲ್ಲ
ಆ ಓದು ನಮಗೆ ಎಷ್ಟು
ಸಂಸ್ಕಾರವನ್ನು ಕಲಿಸಿದೆ
ಎಂಬುದು ಮುಖ್ಯ.



● **ಆರ್. ಪೂರ್ಣಿಮಾ**
ತೃತೀಯ ಬಿ.ಕಾಂ.

## ನಾವು ಮೆಚ್ಚಬೇಕಾದ ಕೆಲಸ

ಬೆಳ್ಳಂಬೆಳಗ್ಗೆ ಎದ್ದು ನೋಡಿದಾಗ ಕಾಣುತಾನಾ ರವಿಮಾಮ
ಅದ ನೋಡುವುದಕ ಸಾಲದು ನನಗೀ ಎರಡು ಕಣ್ಣು
ಮುಗಿಲ ತುಂಬಿ ಹರಸಿ,
ಕಿರಣಗಳ ಚಿಮ್ಮಿ ಬರುತ್ತಾನೆ ಈ ಭಾಸ್ಕರ,
ಇದ ನೋಡುವುದಕ ಸಾಲದಣ್ಣಾ ಈ ಎರಡು ಕಣ್ಣು
ಬೆಳಗ್ಗೆ ಸೂರ್ಯನು ಬರುವುದನ್ನು ಕಾಯುತ ಕುಳಿತಿವೆ
ಈ ಭೂಮಿಯ ಮೇಲಿನ ಪರಿಸರ, ನಾಡು,
ಮರಗಿಡಗಳು ಗಗನಕ್ಕೆ ಕೈಚಾಚಿ ಕರೆದಂತಿವೆ
ಸೂರ್ಯ ಕಿರಣಗಳ ರಾಶಿಯನ್ನ
ನೋಡಿರಣ್ಣಾ ಈ ಒಡನಾಟವನ್ನು ನೋಡಿ ಕಲಿತುಕೊಳ್ಳಿರಣ್ಣ
ಈ ಸ್ನೇಹದ ಸಂಬಂಧವನ್ನು
ಈ ಪ್ರಪಂಚದಲ್ಲಿನ ಜನಜೀವಿಗಳು ತಮ್ಮ ಕೆಲಸದಲ್ಲಿ ತೊಡಗಿರುವರು,
ಈ ಸೂರ್ಯನು ಇವರ ಕೆಲಸಕ್ಕೆ ನೆರವಾಗಿ ನಿಂತಿಹನು,
ನಾವು ಮೆಚ್ಚಬೇಕಾದ ಈ ಕೆಲಸ ಸುಮ್ಮನೆ ನಿಂತಿಹುದು ಸುಡುತಲಿ

## ಸಾಧನೆಗೆ ಅಡ್ಡಿಯಾದ ಸೂರ್ಯನ ಮಾತು

ಏ ಹುಡುಗಿ ನೀ ನನ್ನ ಕಾಡುತ ನಿಂತಿರುವೆ ದೂರದಲ್ಲಿ
ನಿನ್ನನ್ನು ನಾ ಸಹಿಸಲಾರೆ
ಹೊರಟು ಹೋಗು ನಿಲ್ಲಬೇಡ
ನಿನ್ನನ್ನು ನೋಡಲಾರೆ ನೋಡುತ ಮರೆತು ಕೂರಲಾರೆ
ಹೊರಟು ಹೋಗ ಬೇಕು ನೀ ಈ ನನ್ನ ಕಣ್ಣಿನಾಜ್ಞೆಯಲಿ
ನೋಡುವೆಯ ನಿನ್ನ ಆ ಕಣ್ಣಿನಿಂದ
ನೋಡುತ ನಾಶವಾಗುವೆಯ ನನ್ನ ಶಾಖದಿಂದ
ನನ್ನ ಹತ್ತಿರ ಬರಬೇಡ ಸಾಧನೆಯ ದಾರಿಯಲಿ
ಹೊರಟು ಹೋಗು ಎನ್ನ ಹುಡುಗಿ

## ಹೊಟ್ಟೆಪಾಡು

ಎನ್ನ ಮಡದಿಯು ಬಂದು ಕುಣಿದಾಳೊ
ಕುಣಿದು ನಿಮ್ಮ ಮನವ ಸೆಳೆದಾಳೋ
ಕುಣಿದ ಕಾಲಿನ ಗೆಜ್ಜೆ ಗಲ್ಲೆಂದೋ
ಅದ ನೋಡೋಕೆ ಬಂದರು ಜನ ಗುಲ್ಲೆಂದು
ಬನ್ನಿರೋ ನನ್ನ ಮಡದಿಯ ನೃತ್ಯನೋಡಿರೋ,
ನೋಡಿ ಕಾಣಿಕೆ ಕೊಟ್ಟು ಆರೈಸಿ ಹೋಗಿರೋ.
ಕುಣಿಯೋದ ತಡಮಾಡಿದಳು ನನ್ನಾಕೆ
ಕಾರಣ ತನ್ನ ಅತ್ತೆ ಇನ್ನೂ ಬಂದಿಲ್ಲೆಂದು
ತನ್ನ ಅತ್ತೆ ಇನ್ನು ಬಂದಿಲ್ಲ, ಜೊತಗೆ ತನ್ನ
ಕುಣಿವ ಕಾಲಿನ ಗೆಜ್ಜೆ ತಾ ಮರೆತೆಂದಳೋ
ಚಿಂತಿಸದಿರು ಮಗಳೇ ನಿನ್ನತ್ತಿ ಬಂದೀನಿ
ನಿನ್ನ ಕಾಲಿನ ಗೆಜ್ಜೆ ತಂದೀನಿ,
ಕುಣಿಯೋದ ಶುರು ಮಾಡು
ಕಾದಿಹರು ಮಂದಿ
ಕುಣಿದಾಳೋ ನನ್ನ ಸೊಸೆ
ಡೋಲ್ ಬಡಿದಾನೋ ನನ್ನ ಮಗ
ಅದಕ್ಕೆ ನಾ ತಾಳ ಹಾಕಿ,
ಹೇಳುವೆ ಸೊಗಸಾದ ಹಾಡ್ನ
ನಾ ಬರುವೆ ನಿಮ್ಕಡೆಗೆ ಸೆರಗೊಡ್ಡಿ
ನೀವಾಕೊ ಕಾಣ್ಕೆ, ನಮೊಟ್ಟೆಗಾಗುತ್ತೆ ತಣ್ಣಗೆ,
ನಾವ್ ಕುಣಿವೆವೂ ನಿಮ್ಮ ಮನರಂಜನೆಗೆ

## ಕೆಟ್ಟಮನುಷ್ಯ ನೀ ಆಗುವೆಯಾ!!

ದುಷ್ಟರು ಉಳಿವರು ಈ ಜಗದಲಿ
ಸಜ್ಜನರು ಅಳಿವರು ಈ ಜಗದಲಿ
ನೀ ಹೆಸರು ಮಾಡುವೆ ಈ ಸಮಾಜದಲ್ಲಿ
ಅದು ಕೆಟ್ಟದಾರಿಯಾ? ಒಳ್ಳೆ ದಾರಿಯಾ?
ನೀ ಮಾಡುವೆ ನಿನ್ನ ಕೆಲಸವನ್ನ
ಅದ ನೋಡುವ ನಾಲ್ಕಾರು ಮಂದಿ
ಎತ್ತರಕೆ ಬೆಳೆಯಬೇಕೆಂಬ ನಿನ್ನ ಈ ಕೆಲಸ
ಇದ ನೋಡಿ ನಾ ಕಲಿವೆ
ದೂರದ ಬೆಟ್ಟ ನುಣ್ಣಗೆ, ಹಾಗೆಯೇ
ಹತ್ತಿರ ಕಾಣುವ ಕೆಟ್ಟಮನುಷ್ಯ ಕೈಯಲ್ಲಿ ಹಿಡಿದ ಬೆಂಕಿ ಕೆಂಡ
ಬೆಂಕಿಯ ಕೆಂಡ ನೋಡಲು ಎಷ್ಟು ಆಕರ್ಷಕವು
ಹಾಗೆಯೇ ಅದ ಕೈಯಲ್ಲಿ ಹಿಡಿದರು ಅದು ಅಪಾಯವೇ
ನೀ ನಿಂತಿರುವೇ ಆಟದ ಮೈದಾನದಲ್ಲಿ
ನಿನ್ನ ನೋಡುವರು ಈ ನಾಕುಮಂದಿ
ಆಟದಲ್ಲಿ ನೀ ಓಡುವೇ ಮೈದಾನದಲ್ಲಿದ್ದ ಕುದುರೆಯಂತೆ,
ಓಡುವೆಯಾ ಕೆಟ್ಟದಾರಿಯಲ್ಲಿ ಇದರಿಂದ
ನೀ ಆಗುವೆಯಾ ಕೆಟ್ಟಮನುಷ್ಯ



● ಎಸ್. ಜಯಂತಿ
ದ್ವಿತೀಯ ಬಿ.ಕಾಂ.

## ಹಾರುದ್ರೆ ತಾನೇ ಬೀಳೋದು?

ಇಂಜಿನಿಯರಿಂಗ್ ಕಾಲೇಜಿನ ಪ್ರೊಫೆಸರ್‌ಗಳು ಒಂದು ವಿಮಾನದಲ್ಲಿ ಕುಳಿತಿದ್ದರು.
ಆಗ ಒಂದು ಅನೌನ್ಸ್‌ಮೆಂಟ್ ಕೇಳಿಸಿತು.
ಈ ವಿಮಾನವನ್ನು ತಯಾರಿಸಿದ್ದು ನಿಮ್ಮ ವಿದ್ಯಾರ್ಥಿಗಳು ಅದನ್ನು ಕೇಳಿ
ಎಲ್ಲ ಪ್ರೊಫೆಸರ್‌ಗಳೂ ಗಾಬರಿಯಿಂದ ಕೆಳಕ್ಕೆ ಜಿಗಿದರು. ಪ್ರಿನ್ಸಿಪಾಲರು ಮಾತ್ರ ಅಚಲರಾಗಿ ಕುಳಿತಿದ್ದರು.
ಒಬ್ಬ ಪ್ರೊಫೆಸರ್ ಕೇಳಿದರು –
'ಸಾರ್, ನಿಮಗೆ ಹೆದರಿಕೆಯಾಗುತ್ತಿಲ್ಲವಾ?
ಈ ವಿಮಾನವೇನಾದರೂ
ಕ್ರ್ಯಾಶ್ ಆದರೆ ಏನು ಮಾಡ್ತೀರಾ? ಅದಕ್ಕೆ
ಪ್ರಿನ್ಸಿಪಾಲರು ತಣ್ಣಗೆ ಉತ್ತರಿಸಿದರು –
ಈ ವಿಮಾನ ಮೇಲಕ್ಕೆ ಹಾರಿದರೆ ತಾನೇ
ಕೆಳಕ್ಕೆ ಬೀಳುವುದು?

## ಸಮಾಧಾನ

ಪರೀಕ್ಷೆಯಲ್ಲಿ ಕಷ್ಟದ ಪ್ರಶ್ನೆಗಳೇ ಬಂದಿದ್ದರೆ
ಕಣ್ಣು ಮುಚ್ಚಿಕೊಂಡು ದೀರ್ಘವಾಗಿ
ಉಸಿರೆಳೆದುಕೊಳ್ಳುತ್ತಾ ಹೀಗೆ ಹೇಳಿ, ಈ
ಸಬ್ಜೆಕ್ಟ್ ತುಂಬಾ ಕುತಾಹಲಕಾರಿಯಾಗಿದೆ
ಹಾಗಾಗಿ ಮುಂದಿನ ವರ್ಷವೂ ಇದನ್ನೇ ಓದುತ್ತೇನೆ.

## ಹತ್ತುದಿನ ಟೈಂ ಕೊಡಿ

ಗುಂಡ ಡಿಟೆಕ್ಟಿವ್ ಏಜೆನ್ಸಿಯೊಂದರಲ್ಲಿ ಕೆಲಸಕ್ಕೆ ಅರ್ಜಿ ಹಾಕಿದ್ದ. ಇಂಟರ್‌ವ್ಯೂಗೆ ಕರೆ ಬಂತು, ಸಂದರ್ಶಕರು ಕೇಳಿದರು,
'ರಾಜೀವ್‌ಗಾಂಧಿಯನ್ನು ಹತ್ಯೆ ಮಾಡಿದವರು ಯಾರು?'
ಗುಂಡ ಎದ್ದು ನಿಂತು ಸೆಲ್ಯೂಟ್ ಮಾಡುತ್ತಾ
ಗತ್ತಿನಲ್ಲಿ ಹೇಳಿದ
'ಸರ್, ಇನ್ನು ಹತ್ತೇ ಹತ್ತು ದಿನದಲ್ಲಿ
ಕೊಲೆಗಾರನನ್ನು ಪತ್ತೆ ಹಚ್ಚೇನಿ'!

## ಸರಿಯಾಗಿ ಓದಿ

1. ನಾನು ಹಾಸಿಗೆಯಿಂದ ಎದ್ದೆ
2. ಕಾಲೇಜಿಗೆ ಹೊರಟೆ
3. ದಾರಿಯಲ್ಲಿ ಅವಳನ್ನು ನೋಡಿದೆ.
4. ಅವಳ ಬಳಿ ಹೋಗಿ ಪ್ರಪೋಸ್ ಮಾಡಿದೆ.
5. ಅವಳು ತುಂಬಾ ಖುಷಿಯಿಂದ ಒಪ್ಪಿಕೊಂಡಳು.

ಕ್ಷಮಿಸಿ, ಇದನ್ನು ಕ್ರಮವಾಗಿ 3, 4, 5, 1, 2 ಎಂದು ಓದಿಕೊಳ್ಳಿ.

## ಜೋಕ್ಸ್

ಟೀಚರ್ : ಗುಂಡ, ದೊಡ್ಡವನಾದ ಮೇಲೆ ಏನು ಮಾಡ್ತೀಯ?
ಗುಂಡ : 'ಫಾದರ್ ಆಫ್ ಮ್ಯಾಥ್ಸ್' ಆಗ್ತೀನಿ.
ಟೀಚರ್ : ಹೇಗೆ?
ಗುಂಡ : ನನ್ನ ಮಗನಿಗೆ 'ಮ್ಯಾಥ್ಸ್' ಎಂದು ಹೆಸರಿಡ್ತೀನಿ.

ಅಮ್ಮ : ಮಗನಿಗೆ ಫೋನ್ ಮಾಡಿ ಮಗನೇ ನನಗೆ ತುಂಬಾ ಭಯ ಆಗ್ತಿದೆ ಬೇಗ ಮನೆಗೆ ಬಾರೋ.
ಮಗ : ಯಾಕೆ ಅಮ್ಮ ಏನಾಯ್ತು?
ಅಮ್ಮ : ನಿನ್ನ ಹೆಂಡತಿಗೆ ಏನೋ ಆಗ್ಬಿಟ್ಟಿದೆ ತುಟಿ ಸೊಟ್ಟ ಆಗಿ, ಲಕ್ವ ಹೊಡೆದಿದೆ. ಕೈ ಮುರ್ದೋಗಿದೆ. ಕಣ್ಣು ಮೇಲೆ ಇದೆ.
ಮಗ : ಅಮ್ಮ ನೀನು ಹೆದರಬೇಡ ಅವಳು ಸೆಲ್ಫಿ ತೆಗೆದುಕೊಳ್ಳುತ್ತಾ ಇದ್ದಾಳೆ.

● ಡಿ. ಭಾವನಾ
ತೃತೀಯ ಬಿ.ಎ. (ಹೆಚ್.ಇ.ಕೆ.)



## ಒಗಟುಗಳು

* ನನ್ನ ಬಣ್ಣ ಕೆಂಪು
ನನ್ನ ಮುಟ್ಟಿದರೆ ಎಲ್ಲವು ಕಪ್ಪು? – ಬೆಂಕಿ

* ಅಂಗೈ ಕೊಟ್ಟರೆ ಮುಂಗೈವರೆಗೂ
ನುಂಗಿಕೊಂಡು ಬರುತ್ತದೆ? – ಬಳೆ

* ಸೂಜಿಯಷ್ಟು ಸಣ್ಣ
ಕಾಗೆಯಂತಹ ಬಣ್ಣ – ಕೂದಲು

* ಊರೆಲ್ಲ ಸುತ್ತುತ್ತೆ
ಬಾಗಿಲಲ್ಲಿ ನಿಲ್ಲುತ್ತೆ? – ಚಪ್ಪಲಿ

* ಒಂದೇ ಹಪ್ಪಳ
ಊರಿಗೆಲ್ಲ ಊಟ? – ಚಂದ್ರ

* ಮರದೊಳಗೆ ಮರ ಹುಟ್ಟಿ
ಮರ ಚಕ್ರ ಕಾಯಾಗಿ ತಿನ್ನಬಾರದ
ಹಣ್ಣು ಬಹುರುಚಿ – ಮಗು

* ಬಡಗಿ ಮಾಡದ ಮನೆ
ಬಾಚಿ ಕೆತ್ತದ ಮನೆ
ಅಂಬರದ ನನ್ನರಮನೆ – ದೇಹ

* ಅಡಿಕೆ ಎಣಿಸಕ್ಕಾಗಲ್ಲ
ಚಾಪೆ ಸುತ್ತಕ್ಕಾಗಲ್ಲ – ನಕ್ಷತ್ರ, ಆಕಾಶ

* ಕಣ್ಣಿಗೆ ಹತ್ತಿರ
ಕಾಲಿಗೆ ದೂರ – ಬೆಟ್ಟ

* ಕಟ್ಟೆ ಇಲ್ಲದ ಕೆರೇಲಿ ತಟ್ಟೆ
ತೇಲ್ಕೊಂಡ್ಹೋಯ್ತದೆ – ಆಕಾಶ, ಚಂದ್ರ

* ಅಂಕು ಡೊಂಕು ಬಾವಿ
ಶಂಕು ಚಕ್ರದ ಬಾವಿ
ಬೊಮ್ಮಯ್ಯ ಕಟ್ಟಿಸಿದ ಬಾವಿ
ಇಣುಕಿ ನೋಡಿದರೆ
ಒಂತೊಟ್ಟು ನೀರಿಲ್ಲ – ಕಿವಿ

* ಒಂದು ಮರ, ಅದಕ್ಕೆ ಹನ್ನೆರಡು ಕಾಯಿಗಳು
ಮುನ್ನೂರರವತ್ತೈದು ಎಲೆಗಳು!
– ವರ್ಷ, ತಿಂಗಳು, ದಿನ

* ಕಣ್ಣಿಗೆ ಕಾಣೋದಿಲ್ಲ
ಕೈಗೆ ಸಿಗೋದಿಲ್ಲ
ಅದಿಲ್ಲದಿದ್ದರೆ ಕೆಲಸ ನಡೆಯೋದಿಲ್ಲ? – ಗಾಳಿ

* ಕಣ್ಣಿದ್ದರು ಕುರುಡಿ, ಕಾಲಿದ್ದರು ಕುಂಟಿ
ಬಾಯಿ ಇದ್ದರೂ ಮೂಗಿ, ಆದರೂ
ಎಲ್ಲರು ನನ್ನನ್ನು ಇಷ್ಟ ಪಡುತ್ತಾರೆ. – ಗೊಂಬೆ

* ರಾತ್ರಿ ಕೊಟ್ಟ ಕೆಲಸವನ್ನು ನಾನು ಬೆಳಗ್ಗೆ
ಎದ್ದು ಸರಿಯಾಗಿ ಮಾಡ್ತಿನಿ ಆದರೂ
ಎಲ್ಲರೂ ನನ್ನನ್ನು ಬೈತಾರೆ – ಅಲರಾಂ

* ಹೆಂಡತಿ ತಿರುಗುತ್ತಾಳೆ,
ಗಂಡ ಮಾತ್ರ ನಿಂತಲ್ಲೇ ನಿಂತಿರುತ್ತಾನೆ.
– ಬೀಗ, ಕೀ

* ಅವಳಿ ಜವಳಿ ಮಕ್ಕಳು
ಒಂದೇ ಬಣ್ಣ, ಒಂದೇ ಗಾತ್ರ
ಒಬ್ಬ ಕಳೆದು ಹೋದ್ರೆ
ಇನ್ನೊಬ್ಬನೂ ವ್ಯರ್ಥ – ಚಪ್ಪಲಿಗಳು

* ಮೇಲೂ ಹೋಗುತ್ತದೆ
ಕೆಳಗೂ ಹೋಗುತ್ತದೆ
ಆದರೂ ನಿಂತಲ್ಲೇ ನಿಲ್ಲುತ್ತವೆ. – ಮೆಟ್ಟಿಲುಗಳು

* ಹಸಿರು ಬಾಗಿಲು,
ಕೆಂಪು ಮನೆ, ಒಳಗಡೆ ಅಡಗಿ
ಕುಳಿತಿದ್ದಾರೆ ಕಪ್ಪು ಕಳ್ಳರು. – ಕಲ್ಲಂಗಡಿ ಹಣ್ಣು

* ಮಲಗೋಕೆ ಮಂಚ ಇಲ್ಲ
ಇರೋಕೆ ಮನೆ ಇಲ್ಲ
ಹಣ ನಾನು ನೋಡೇ ಇಲ್ಲ
ಆದರೂ ನಾನೇ ರಾಜ. – ಸಿಂಹ



● **ಡಿ. ದೀಪಾ**
ತೃತೀಯ ಬಿ.ಎ. (ಹೆಚ್.ಇ.ಕೆ.)

## ಸತ್ಯದ ಅವಸ್ಥೆ (ಸಂಗ್ರಹ)

ಒಮ್ಮೆ ಸತ್ಯ ಸುಳ್ಳು ಎರಡೂ ವಾಕಿಂಗ್ ಹೋಗಿದ್ದು ಹಾದಿಯಲ್ಲಿ ಒಂದು ಸುಂದರ ನದಿ ಕಂಡಿತು. ಸರಿ ಎರಡೂ ತಮ್ಮ ವಸ್ತ್ರಗಳನ್ನು ತೆಗೆದು ಸ್ನಾನಕ್ಕೆ ಇಳಿದವು. ಸುಂದರ ಸಂಜೆಯಲ್ಲಿ ತಂಪಾದ ನದಿಯಲ್ಲಿ ಈಜುತ್ತಾ ಮೈ ಮರೆತವು.

ಒಂದಷ್ಟು ಹೊತ್ತಾದ ಮೇಲೆ ಸುಳ್ಳು ಮೇಲೆದ್ದು ಬಂತು, ಸತ್ಯ ಇನ್ನೂ ಮೈ ಮರೆತು ಈಜುತ್ತಾ ಇತ್ತು. ಸುಳ್ಳು ಅತ್ತಿತ್ತ ನೋಡಿ ಸತ್ಯದ ಬಟ್ಟೆಗಳನ್ನು ಧರಿಸಿ ಹೊರಟು ಬಿಟ್ಟಿತು. ಸಾಕಷ್ಟು ಸಮಯದ ನಂತರ ಸತ್ಯ ಮೇಲೆದ್ದು ಬಂದಾಗ ಅದರ ವಸ್ತ್ರಗಳೇ ಇರಲಿಲ್ಲ. ಸತ್ಯಕ್ಕೆ ಸುಳ್ಳಿನ ವಸ್ತ್ರ ಧರಿಸಲು ಹಿಂಸೆಯೆನಿಸಿತು, ಅಸಹ್ಯ ಎನಿಸಿತು. ಅಂದಿನಿಂದ ಸತ್ಯ ಬೆತ್ತಲಾಗೆ ತೆರೆಮರೆಯಲ್ಲೇ ಓಡಾಡಲು ಶುರು ಮಾಡಿತು. ಸುಳ್ಳು ಸತ್ಯದ ಹೊದಿಕೆ ಹೊದ್ದು ತಿರುಗುತ್ತಲೇ ಇದೆ ರಾಜಾರೋಷವಾಗಿ....

## ಚುಟುಕುಗಳು

ನಮ್ಮನ್ನು ಭಾರವೆಂದುಕೊಂಡವರ ಜೊತೆ
ಬಲವಂತವಾಗಿ ಬದುಕುವುದಕ್ಕಿಂತ,
ದೂರವಾಗಿ ನಿಂತು ಹರಸುವುದೇ ಒಳಿತು.
ಸ್ನೇಹವೇ ಆಗಲಿ ಸಂಬಂಧಗಳೇ ಆಗಲಿ
ಅವರಿಗದು ಉಸಿರು ಅನಿಸಬೇಕೇ ಹೊರತು,
ಉಸಿರುಗಟ್ಟಿಸುವಂತವಾಗಬಾರದು.

* * *

ಸುಳ್ಳು ಹೇಳಿ ಖುಷಿಪಡಿಸುವವರಿಗಿಂತ
ಸತ್ಯಹೇಳಿ ನೋವು ನೀಡುವವವರೇ
ಉತ್ತಮ, ಸತ್ಯ ಶಾಶ್ವತ, ಸುಳ್ಳು ತಾತ್ಕಾಲಿಕ

* * *

ಯಾರೊಬ್ಬರಿಗಾಗಿಯೂ ಅಳಬೇಡಿ
ಅವರು ನಿಮ್ಮ ಕಣ್ಣೀರಿಗೆ ಯೋಗ್ಯರಲ್ಲ
ಯಾರು ನಿಮ್ಮ ಕಣ್ಣೀರಿಗೆ ಯೋಗ್ಯರೋ
ಅವರು ನಿಮ್ಮನ್ನು ಅಳಲು ಬಿಡುವುದಿಲ್ಲ.

* * *

ಮನಸ್ಸಲ್ಲಿ ಎಷ್ಟೇ ನೋವಿದ್ರು ಹೊರಗಡೆ
ನಾವು ನಗಲೇಬೇಕು. ಯಾಕಂದ್ರೆ? ಇಲ್ಲಿ
ಎಲ್ಲರಿಗೂ ಮೊದಲು ಕಾಣಿಸುವುದು
ಮುಖದಲ್ಲಿರೋ ನಗು ಮನದಲ್ಲಿರೊ ನೋವಲ್ಲ...

## ಜೋಕ್ಸ್

ಬೆಕ್ಕು : ನಿನಗೆ ವಯಸ್ಸೆಷ್ಟು?
ಆನೆ : ಐದು ವರ್ಷ
ಬೆಕ್ಕು : ಆದ್ರೆ ನೀನು ತುಂಬಾ ದೊಡ್ಡವರ ತರ ಕಾಣಿಸ್ತೀಯಾ?
ಆನೆ : ನಾನು ಕಾಂಪ್ಲಾನ್ ಬಾಯ್.
ಆನೆ : ನಿನಗೆ ವಯಸ್ಸೆಷ್ಟು
ಬೆಕ್ಕು : ನಂಗೆ 30 ವರ್ಷ
ಆನೆ : ಆದ್ರೆ ನೀನು ತುಂಬಾ ಸಣ್ಣ ಹುಡುಗಿ ತರ ಕಾಣ್ತೀಯಾ.
